ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಡಿಸೆಂಬರ್ 30 ಸೋಮವಾರ 2024

ಸಂಪುಟ: 45 | ಸಂಚಿಕೆ: 253 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಾರಿಗೆ ಇಲಾಖೆಗೆ 2,000 ಕೋಟಿ ಬಿಡುಗಡೆ

ಡಿ.31ರಂದು ಕರೆ ನೀಡಿದ್ದ ಮುಷ್ಕರ ಹಿಂಪಡೆದ ಸಾರಿಗೆ ನಿಗಮಗಳ ಜಂಟಿ ಕ್ರಿಯಾ ಸಮಿತಿ




ರಾಮಲಿಂಗಾರೆಡ್ಡಿ

ಬೆಂಗಳೂರು, ಡಿ.29– ಸಾರಿಗೆ ಇಲಾಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2000 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಸಾರಿಗೆ ಮುಷ್ಕರ ಕರೆ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಾರಿಗೆ ಇಲಾಖೆ ಕಾರ್ಯದರ್ಶಿ ಸೇರಿದಂತೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಸಾರಿಗೆ, ಕಲ್ಯಾಣ ಕರ್ನಾಟಕ ಸಾರಿಗೆ ಎಂಡಿಗಳ ಜೊತೆ ಸಭೆ ನಡೆಸಿದ ಬಳಿಕ ಅವರು ಈ ಹೇಳಿಕೆ ನೀಡಿದ್ದು, ಈ ಹಿನ್ನೆಲೆಯಲಿ ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಜಂಟಿ ಕ್ರಿಯಾ ಸಮಿತಿ ಡಿ.31 ರಂದು ಕರೆ ನೀಡಿದ್ದ ಮುಷ್ಕರವನ್ನು ಹಿಂಪಡೆದಿವೆ.

ಸಿಎಂ ಜೊತೆಗಿನ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಮಲಿಂಗಾರೆಡ್ಡಿ, ಸಿಎಂ 2,000 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಬಜೆಟ್‌ನಲ್ಲಿ ಉಳಿದ ಮೊತ್ತ ಕೊಡುತ್ತಾರೆ. ಪ್ರಣಾಳಿಕೆಯಲ್ಲೂ ಸಮಾನ ವೇತನ ಎಂದು ಹೇಳಿದ್ದೇವೆ.

ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಸಂಬಂಧಿಸಿದಂತೆ ಡೀಸೆಲ್ ಹಣ, ಸಿಬ್ಬಂದಿ ಭವಿಷ್ಯ ನಿಧಿ, ಖರೀದಿ ಸಾಮಗ್ರಿಗಳ ಹಣ ಸೇರಿ ಒಟ್ಟು 5,900 ಕೋಟಿ ರೂ. ಗಳನ್ನು ಬಿಜೆಪಿ ಸರಕಾರವೇ ಬಾಕಿ ಉಳಿಸಿಕೊಂಡಿತ್ತು. ಅದನ್ನು ತೀರಿಸುವ ಹೊಣೆಗಾರಿಕೆ ಹೊತ್ತು ನಮ್ಮ ಸರಕಾರ ಸಂಸ್ಥೆಗಳನ್ನು ಮುನ್ನಡೆಸುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟನೆ ನೀಡಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ 2023ರ ಮಾರ್ಚ್‌ನಲ್ಲಿ 38 ತಿಂಗಳ ನಂತರ ಸಂಬಳ ಏರಿಕೆ ಮಾಡಿದೆ. ಏರಿಕೆಯಾದ ಸಂಬಳದ 38 ತಿಂಗಳ ಅರಿಯರ್ಸ್ ಸಿಬ್ಬಂದಿಗೆ ನೀಡಿಲ್ಲ. ಅದಕ್ಕೆ ಬೇಕಾದ ಅನುದಾನ ನೀಡಿರಲಿಲ್ಲ. ನಿವೃತ್ತಿ ಹೊಂದಿದ 11,694 ಸಿಬ್ಬಂದಿಗೆ ಉಪಧನ ಮತ್ತು ಗಳಿಕೆ ರಜೆ ಬಾಕಿ ಹಣ ನೀಡಿರಲಿಲ್ಲ. ಆ ಸಿಬ್ಬಂದಿಗೆ ನಮ್ಮ ಸರಕಾರ ಕಳೆದ ವಾರ 224.05 ಕೋಟಿ ರೂ. ಪಾವತಿಸಿದೆ ಎಂದು ಅವರು ತಿಳಿಸಿದ್ದಾರೆ.

6,543 ಕೋಟಿ ರೂ. ಬಿಡುಗಡೆ: ಶಕ್ತಿ ಯೋಜನೆಗೆ ಸಂಬಂಧಿಸಿದಂತೆ ಸರಕಾರವು ಕೆಎಸ್‌ಆರ್‌ಟಿಸಿಗೆ 2,481 ಕೋಟಿ ರೂ., ಬಿಎಂಟಿಸಿಗೆ 1,126 ಕೋಟಿ ರೂ., ವಾಯುವ್ಯ ಸಾರಿಗೆಗೆ 1,613 ಕೋಟಿ ರೂ., ಕಲ್ಯಾಣ ಕರ್ನಾಟಕ ಸಾರಿಗೆಗೆ 1,321 ಕೋಟಿ ರೂ. ಹೀಗೆ ಒಟ್ಟು ನಾಲ್ಕು ಸಾರಿಗೆ ಸಂಸ್ಥೆಗಳಿಗೆ 2023 ರ ಜೂನ್‌ನಿಂದ 2024 ರ ಜೂನ್‌ವರೆಗೆ 6,543 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಅಂಕಿ– ಅಂಶ ಸಮೇತ ಮಾಹಿತಿ ನೀಡಿದ್ದಾರೆ.

ಬಿಜೆಪಿಯು ತನ್ನ ಆಡಳಿತ ಅವಧಿಯಲ್ಲಿ ಸಾರಿಗೆ ನೌಕರರಿಗೆ ಅನುಕೂಲವಾಗುವ ನೀತಿ, ಕಾರ್ಯಕ್ರಮ ಅನುಷ್ಠಾನಗೊಳಿಸಲಿಲ್ಲ. ನಿರಂತರವಾಗಿ 15 ದಿನಗಳ ಕಾಲ ಸಾರಿಗೆ ಮುಷ್ಕರ ನಡೆಸಲು ಕಾರಣವಾದ ಬಿಜೆಪಿಗೆ ಮಾತನಾಡಲು ಯಾವ ನೈತಿಕತೆ ಇದೆ? ಅಧಿಕಾರದಲ್ಲಿದ್ದಾಗ ಸಾರಿಗೆ ನೌಕರರ ಕಣ್ಣೀರು ಹಾಕಿಸಿ ಸುಮಾರು 3000 ನೌಕರರನ್ನು ವಜಾ, ಅಮಾನತುಗೊಳಿಸಿ ನೌಕರರ ಕುಟುಂಬಗಳನ್ನು ಬೀದಿಗೆ ತಂದಿದ್ದನ್ನು ಮರೆತಿದ್ದೀರಾ? ನಿಮ್ಮಿಂದಾಗಿ ನೌಕರರು ಇನ್ನೂ ಕೋರ್ಟ್‌ಗೆ ಅಲೆಯುತ್ತಿದ್ದಾರೆ. ಈಗ ಮೊಸಳೆ ಕಣ್ಣೀರು ಸುರಿಸಲು ನಾಚಿಕೆಯಾಗಲ್ಲವೇ? ಎಂದು ಪ್ರಶ್ನಿಸಿರುವ ಅವರು, ಸಾರಿಗೆ ಸಂಸ್ಥೆಗಳ ಇಂದಿನ ಅಧೋಗತಿಗೆ ಬಿಜೆಪಿಗರೇ ಕಾರಣ. ಅದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ತಿರುಗೇಟು ನೀಡಿದ್ದಾರೆ.



'ಮೈಸೂರು ಮಿತ್ರ' ಇಂದಿನ ಸಂಚಿಕೆ 6 ಮತ್ತು 7ನೇ ಪುಟದಲ್ಲಿ 2024ರ ಪ್ರಮುಖ ಘಟನಾವಳಿಗಳನ್ನು ಪ್ರಕಟಿಸಲಾಗಿದೆ.

ನಾಳಿನ (ಡಿ.31) ಸಂಚಿಕೆಯಲ್ಲಿ 'ಮೈಸೂರು ಮಿತ್ರ'ನ 2025ನೇ ಸಾಲಿನ ವರ್ಣರಂಜಿತ ಕ್ಯಾಲೆಂಡರ್‌ನ್ನು ನೀಡಲಾಗುತ್ತಿದೆ. ನಿಮ್ಮ ಪ್ರತಿ ಕಾಯ್ದಿರಿಸಿ...
–ಸಂಪಾದಕರು

ಯಮುನಾ ನದಿಯಲ್ಲಿ ಮನಮೋಹನ್ ಸಿಂಗ್ ಅಸ್ಥಿ ವಿಸರ್ಜನೆ



ನವದೆಹಲಿ, ಡಿ.29– ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಅಸ್ಥಿಯನ್ನು ಮಜ್‌ನೂ ಕತಿಲಾ ಗುರುದ್ವಾರದ ಬಳಿಯ ಯಮುನಾ ನದಿಯಲ್ಲಿ ಭಾನುವಾರ ವಿಸರ್ಜನೆ ಮಾಡಲಾಯಿತು.

ಸಿಂಗ್ ಅವರ ಅಂತ್ಯಕ್ರಿಯೆ ನಡೆದಿದ್ದ ನಿಗಮ್ ಭೋದ್‌ಘಾಟ್‌ನಿಂದ ಭಾನುವಾರ ಬೆಳಿಗ್ಗೆ ಅಸ್ಥಿಯನ್ನು ಸಂಗ್ರಹಿಸಿದ ಅವರ ಕುಟುಂಬಸ್ಥರು, ಬಳಿಕ ಅದನ್ನು ಯಮುನಾ ನದಿ ದಂಡೆಯಲ್ಲಿನ 'ಅಸ್ಥ್ ಘಾಟ್'ಗೆ ತಂದರು. ನಂತರ ಸಿಖ್ ಧರ್ಮದ ಪ್ರಕಾರ ವಿಧಿವಿಧಾನಗಳನ್ನು ನಡೆಸಿ ಚಿತಾಭಸ್ಮವನ್ನು ವಿಸರ್ಜಿಸಲಾಯಿತು. ಚಿತಾಭಸ್ಮ ವಿಸರ್ಜನೆ ವೇಳೆ ಸಿಂಗ್ ಅವರ ಪತ್ನಿ ಗುರುಶರಣ್ ಕೌರ್ ಮತ್ತು ಪುತ್ರಿಯರಾದ ಉಪಿಂದರ್ ಸಿಂಗ್, ದಮನ್ ಸಿಂಗ್ ಮತ್ತು ಅಮೃತ್ ಸಿಂಗ್ ಅವರು ಉಪಸ್ಥಿತರಿದ್ದರು.

ಮೋತಿಲಾಲ್ ನೆಹರೂ ಮಾರ್ಗದಲ್ಲಿರುವ ತಮ್ಮ ಅಧಿಕೃತ ನಿವಾಸದಲ್ಲಿ ಸಿಂಗ್ ಕುಟುಂಬಸ್ಥರು, ಸಿಖ್ ವಿಧಿವಿಧಾನಗಳ ಅನ್ವಯ ಜ.1ರಂದು 'ಅಖಂಡ ಪಥ್' ನಡೆಸಲಿದ್ದಾರೆ. ಸಂಸತ್ತಿನ ಬಳಿಯಿರುವ ರಖಬ್ ಗಂಜ್ ಗುರುದ್ವಾರದ ಬಳಿ ಜ.3ರಂದು 'ಭೋಗ್' ಕಾರ್ಯಕ್ರಮ. 'ಅಂತಿಮ್ ಅರ್ದಾಸ್' ಮತ್ತು 'ಕೀರ್ತನ್' ನಡೆಯಲಿದೆ.

ಪ್ರೇಯಸಿ ಮನೆ ಮುಂದೆಯೇ ಜಿಲೆಟಿನ್ ಸ್ಫೋಟಿಸಿಕೊಂಡು ಪ್ರಿಯಕರ ಆತ್ಮಹತ್ಯೆ

ನಾಗಮಂಗಲ ಬಳಿ ದುರಂತ

ಸ್ಥಳಕ್ಕೆ ಬಾಂಬ್ ಪತ್ತೆ, ನಿಷ್ಕ್ರಿಯ ದಳ ಭೇಟಿ, ಆತಂಕ


ಜಿಲೆಟಿನ್ ಸ್ಫೋಟಗೊಂಡ ಸ್ಥಳದಲ್ಲಿ ಗ್ರಾಮಸ್ಥರು.


ರಾಮಚಂದ್ರು

ಮಂಡ್ಯ, ಡಿ.29– ಪ್ರೀತಿಸುತ್ತಿದ್ದ ಅಪ್ರಾಪ್ತೆ ಮನೆ ಮುಂದೆಯೇ ಜಿಲೆಟಿನ್ ಸ್ಫೋಟಿಸಿಕೊಂಡು ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕಾಳೇನಹಳ್ಳಿ ಗ್ರಾಮದಲ್ಲಿ ಶನಿವಾರ ಸಂಭವಿಸಿದ್ದು, ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.

ನಾಗಮಂಗಲ ತಾಲೂಕಿನ ಕಾಳೇನಹಳ್ಳಿ ಗ್ರಾಮದ ನಿವಾಸಿ ರಾಮಚಂದ್ರು (21) ಆತ್ಮಹತ್ಯೆಗೆ ಶರಣಾದ ಯುವಕನಾಗಿದ್ದು, ಈತ ಕಲ್ಲು ಗಣಿಗಾರಿಕೆಗೆ ಬಳಸುವ ಜಿಲೆಟಿನ್ ಸ್ಫೋಟಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದು, ಜಿಲೆಟಿನ್ ಸ್ಫೋಟಕ್ಕೆ ಯುವಕನ ಹೊಟ್ಟೆಯ ಭಾಗ ಛಿದ್ರ ಛಿದ್ರವಾಗಿ ದೇಹದ ಭಾಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಈ ಭೀಕರ ದೃಶ್ಯವನ್ನು ಕಂಡ ಗ್ರಾಮಸ್ಥರು ಭಯಭೀತರಾಗಿದ್ದಾರೆ.

ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ತನ್ನ ಊರಿನ ಅಪ್ರಾಪ್ತೆ ಯುವತಿಯನ್ನು, ರಾಮಚಂದ್ರು ಪ್ರೀತಿಸುತ್ತಿದ್ದನಂತೆ. ಒಂದು ವರ್ಷದ ಹಿಂದೆ ತಾನು ಪ್ರೀತಿಸುತ್ತಿದ್ದ ಅಪ್ರಾಪ್ತೆಯನ್ನು ಕರೆದೊಯ್ದು ವಿವಾಹವಾಗಿದ್ದನೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ರಾಮಚಂದ್ರು ವಿರುದ್ಧ ಪೋಕ್ಸೋ ಕೇಸ್ ದಾಖಲಾಗಿತ್ತು. ನಾಪತ್ತೆಯಾಗಿದ್ದ ಇವರಿಬ್ಬರನ್ನು ಪತ್ತೆ ಮಾಡಿ ಬಾಲಕಿ ಯನ್ನು ಅವರ ಮನೆಗೆ ಒಪ್ಪಿಸಿ, ಈತನನ್ನು ಪೋಕ್ಸೋ ಕೇಸ್‌ನಲ್ಲಿ ಬಂಧಿಸಿ ಕೋರ್ಟ್‌ಗೆ ಹಾಜರುಪಡಿದ್ದಾಗ ಜೈಲು ಶಿಕ್ಷೆ ವಿಧಿಸಲಾಗಿತ್ತು.

ಬಳಿಕ 2 ಕುಟುಂಬಗಳ ರಾಜಿ ಸಂಧಾನ ಬಳಿಕ ಕೇಸ್ ವಾಪಸ್ ಪಡೆಯಲಾಗಿತ್ತು. ಆರು ತಿಂಗಳು ಸೆರೆವಾಸ ಅನುಭವಿಸಿ ಬಂದಿದ್ದ ಈತನಿಗೆ ತನ್ನ ಅಪ್ರಾಪ್ತ ಪ್ರಿಯತಮೆ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಇದರಿಂದ ಮನನೊಂದ ರಾಮಚಂದ್ರ ನಿನ್ನೆ ಆಕೆಯ ಮನೆಯ ಮುಂದೆ ಕಲ್ಲುಗಣಿಗಾರಿಕೆಗೆ ■ 9ನೇ ಪುಟಕ್ಕೆ

ಗುತ್ತಿಗೆದಾರ ಆತ್ಮಹತ್ಯೆ: ಖರ್ಗೆ ಕುಟುಂಬಕ್ಕೆ ಅಂಬೇಡ್ಕರ್ ಸಂವಿಧಾನ ಅನ್ವಯ ಆಗುವುದಿಲ್ಲವೇ?

ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆರ್. ಅಶೋಕ್ ಆಗ್ರಹ


ಆರ್.ಅಶೋಕ್

ಬೆಂಗಳೂರು. ಡಿ.29– ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆಗೆ ಸಚಿವ ಪ್ರಿಯಾಂಕ್ ಖರ್ಗೆ ಕೂಡ ಕಾರಣ. ಊರಿಗೆಲ್ಲಾ ಉಪದೇಶ ಮಾಡುವ ಪ್ರಿಯಾಂಕ್ ಖರ್ಗೆ ಮೊದಲು ರಾಜೀನಾಮೆ ಕೊಟ್ಟು ನೈತಿಕತೆ ಪ್ರದರ್ಶನ ಮಾಡಲಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.

ಖರ್ಗೆ ಕುಟುಂಬಕ್ಕೆ ಅಂಬೇಡ್ಕರ್ ಸಂವಿಧಾನ ಅನ್ವಯ ಆಗುವುದಿಲ್ಲವೇ? ಎಂದು ಪ್ರಶ್ನಿಸಿದ ಅವರು, ಪ್ರಿಯಾಂಕ್ ಖರ್ಗೆ ಕಲಬುರ್ಗಿ ನಿಜಾಮನೂ ಅಲ್ಲ, ಅವರ ಅನುಯಾಯಿಗಳು ರಜಾಕಾರರೂ ಅಲ್ಲ. ಗುತ್ತಿಗೆದಾರ ಸಚಿನ್ ಸಾವಿನಲ್ಲಿ ಸಚಿವ ಪ್ರಿಯಾಂಕ್ ಖರ್ಗೆಯವರ ಆಪ್ತರ ಪಾತ್ರವಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಅವರು ಕೂಡಲೇ ರಾಜೀನಾಮೆ ನೀಡಲಿ ಎಂದು ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಈ ಹಿಂದೆ ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಮಾಡಿಕೊಂಡಾಗ, ಸಚಿವ ಈಶ್ವರಪ್ಪನವರ ರಾಜೀನಾಮೆ ಕೇಳಲಾಗಿತ್ತು. ಈಗ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಲಿ. ಸಚಿನ್ ಪಾಂಚಾಳ ಅವರು ಡೆತ್‌ನೋಟ್‌ನಲ್ಲಿ ರಾಜು ಕಪನೂರು ಹೆಸರು ಬರೆದಿಟ್ಟು, ಬಳಿಕ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಂಚನೆ ಹಾಗೂ ಹಣಕ್ಕಾಗಿ ಕೊಲೆ ಬೆದರಿಕೆ ಆರೋಪ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಸಚಿನ್ ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಬರೆದು ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿದ್ದರು. ಇದನ್ನು ಗಮನಿಸಿದ ■ 9ನೇ ಪುಟಕ್ಕೆ

ಮೈಸೂರಿನ ಯಾದವಗಿರಿಯಲ್ಲಿ ವಾಸವಿದ್ದ ಖ್ಯಾತ ಸಂಸ್ಕೃತ ವಿದ್ವಾಂಸ ಡಾ. ಪಿಯರಿ ಸಿಲ್ವೇನ್ ಫಿಲಿಯೋಜಾ ಪ್ಯಾರೀಸ್‌ನಲ್ಲಿ ನಿಧನ


ಡಾ. ಪಿಯರಿ ಸಿಲ್ವೇನ್ ಫಿಲಿಯೋಜಾ

ಮೈಸೂರು, ಡಿ.29– ಮೈಸೂರಿನ ಯಾದವಗಿರಿಯಲ್ಲಿ ವಾಸವಿದ್ದ ಫ್ರಾನ್ಸ್ ಮೂಲದ ಸಂಸ್ಕೃತ ವಿದ್ವಾಂಸ ಡಾ. ಪಿಯರಿ ಸಿಲ್ವೇನ್ ಫಿಲಿಯೋಜಾ(89) ಅವರು ನಿನ್ನೆ (ಶನಿವಾರ) ಪ್ಯಾರೀಸ್‌ನಲ್ಲಿ ನಿಧನರಾದರು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಪ್ಯಾರೀಸ್‌ಗೆ ಏರ್‌ಲಿಫ್ಟ್ ಮಾಡಿ ಅಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಶ್ರೀಯುತರು ಪತ್ನಿ ಡಾ. ವಸುಂಧರಾ ಫಿಲಿಯೋಜಾ, ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಸಂಸ್ಕೃತವು ಭಾರತದ ನೆಲದಲ್ಲಿ ಜನ್ಮ ಪಡೆದ ಪ್ರತಿಷ್ಠಿತ ಹಾಗೂ ಪ್ರಾಚೀನ ಭಾಷೆ. ಇಂತಹ ಭಾಷೆಯನ್ನು ಭಾರತದ ಕೆಲವೇ ಕೆಲವು ಜನರು ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಫ್ರಾನ್ಸ್ ಮೂಲದ ಡಾ. ಪಿಯರಿ ಸಿಲ್ವೇನ್ ಫಿಲಿಯೋಜಾ ಅವರು ತಮ್ಮ ಇಳಿ ವಯಸ್ಸಿನಲ್ಲೂ ಸಂಸ್ಕೃತ ಅಧ್ಯಯನ ಮಾಡಿದರು. ಇವರು ಕೆಲವು ಸಂಸ್ಕೃತ ಪುಸ್ತಕಗಳನ್ನು ಫ್ರೆಂಚ್ ■ 9ನೇ ಪುಟಕ್ಕೆ

ಜಮ್ಮು ಕಾಶ್ಮೀರ ಕಣಿವೆಯಲ್ಲಿ ಪ್ರಪಾತಕ್ಕೆ ಉರುಳಿದ ಸೇನಾ ವಾಹನ ದುರಂತದಲ್ಲಿ ಗಾಯಗೊಂಡಿದ್ದ ಕೊಡಗಿನ ಯೋಧ ಸಾವು


ಯೋಧ ದಿವಿನ್

ಮಡಿಕೇರಿ, ಡಿ.29–ಜಮ್ಮು ಕಾಶ್ಮೀರದ ಪೂಂಚ್ ಜಿಲ್ಲೆಯ ಮೆಂದಾರ್ ಕಣಿವೆಯಲ್ಲಿ ಸೇನಾ ವಾಹನ ಪ್ರಪಾತಕ್ಕೆ ಉರುಳಿ ಗಂಭೀರವಾಗಿ ಗಾಯಗೊಂಡಿದ್ದ ಕೊಡಗಿನ 'ಯೋಧ' ದಿವಿನ್ (28) ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ.

ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರದ ನಿವಾಸಿ ಪಳಂಗೋಟು ದಿ.ಪ್ರಕಾಶ್ ಹಾಗೂ ಜಯಾ ದಂಪತಿ ಪುತ್ರ ದಿವಿನ್ ಮೃತ ಯೋಧ.

ಡಿ.24ರಂದು ವೈಟ್‌ನೈಟ್ ಕಾರ್ಪ್ಸ್‌ನ 11ನೇ ಮರಾಠ ಲೈಟ್ ಇನ್‌ಫೆಂಟ್ರಿಗೆ ಸೇರಿದ ಯೋಧರ ಸಹಿತ 6 ಸೇನಾ ವಾಹನಗಳು ನೀಲಂ ಹೆಡ್‌ಕ್ವಾರ್ಟರ್‌ನಿಂದ ಗಡಿ ನಿಯಂತ್ರಣ ರೇಖೆ ಬಲ್‌ನೋಯಿ ಗೋರಾ ಪೋಸ್ಟ್ ಕಡೆಗೆ ತೆರಳುತ್ತಿದ್ದವು. ಇಕ್ಕಟ್ಟಾದ ಪೀರ್ ಪಂಜಲ್ ಆಳ ಕಣಿವೆ ರಸ್ತೆ ಮೂಲಕ ಸೇನಾ ವಾಹನಗಳು ಸಾಗುತ್ತಿದ್ದ ಸಂದರ್ಭ ಯೋಧ ದಿವಿನ್ ಅವರಿದ್ದ ವಾಹನ ಚಾಲಕನ ನಿಯಂತ್ರಣ ತಪ್ಪಿ 150 ಅಡಿ ಆಳದ ಕಂದಕಕ್ಕೆ ಉರುಳಿ ಬಿದ್ದಿತ್ತು. ಪರಿಣಾಮ ಐವರು ಯೋಧರು ಸ್ಥಳದಲ್ಲೇ ಮೃತಪಟ್ಟಿದ್ದರು. ಉಳಿದ ಯೋಧರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಶ್ರೀನಗರದ ಸೇನಾ ಆಸ್ಪತ್ರೆಯ ಐಸಿಯು ಘಟಕಕ್ಕೆ ದಾಖಲಿಸಲಾಗಿದೆ. ಈ ಪೈಕಿ ಸೋಮವಾರ ಪೇಟೆಯ ಪಳಂಗೋಟು ಗ್ರಾಮ ಯೋಧ ■ 9ನೇ ಪುಟಕ್ಕೆ

ದಕ್ಷಿಣ ಕೊರಿಯಾ ವಿಮಾನ ದುರಂತ: 179 ಮಂದಿ ಸಾವು


ದಕ್ಷಿಣ ಕೊರಿಯಾದಲ್ಲಿ ಹೊತ್ತಿ ಉರಿಯುತ್ತಿರುವ ವಿಮಾನ.

ಮುವಾನ್, ಡಿ.29– ದಕ್ಷಿಣ ಕೊರಿಯಾದ ಮುವಾನ್ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ ಭೀಕರ ವಿಮಾನ ದುರಂತದಲ್ಲಿ 179 ಮಂದಿ ಸಾವಿಗೀಡಾಗಿದ್ದಾರೆ. ರಕ್ಷಣಾ ಸಿಬ್ಬಂದಿ ಹರಸಾಹಸಪಟ್ಟು ಇಬ್ಬರನ್ನು ಮಾತ್ರ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಿಬ್ಬಂದಿ ಸೇರಿ 181 ಜನರಿದ್ದ ವಿಮಾನ ಲ್ಯಾಂಡಿಂಗ್ ವೇಳೆ ರನ್‌ವೇಯಿಂದ ಜಾರಿ ಹೊರಗೆ ಸರಿದು ಮುವಾನ್ ವಿಮಾನ ನಿಲ್ದಾಣದ ತಡೆಗೋಡೆಗೆ ಡಿಕ್ಕಿಯಾಗಿ ಸ್ಫೋಟಗೊಂಡಿತು. ಈ ಭೀಕರ ಅಪಘಾತದಲ್ಲಿ 179 ಜನರು ಸಾವನ್ನಪ್ಪಿದ್ದಾರೆ ಮತ್ತು ಇಬ್ಬರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ವಿಮಾನದಲ್ಲಿದ್ದ 181 ಜನರ ಪೈಕಿ 175 ಪ್ರಯಾಣಿಕರು ಮತ್ತು ಆರು ಮಂದಿ ವಿಮಾನ ಸಿಬ್ಬಂದಿ ಇದ್ದರು ಎನ್ನಲಾಗಿದೆ. ಜೆಜು ವಿಮಾನಯಾನ ಸಂಸ್ಥೆಗೆ ಸೇರಿದ ಏರ್ ಫ್ಲೈಟ್ 2216 ಥೈಲ್ಯಾಂಡ್‌ನಿಂದ ಹಿಂತಿರುಗುತ್ತಿದ್ದಾಗ ದಕ್ಷಿಣ ಜಿಯೋಲ್ಲಾ ಪ್ರಾಂತ್ಯದಲ್ಲಿ ಅಪಘಾತಕ್ಕೀಡಾಗಿದೆ.

ದುರಂತಕ್ಕೆ ಪಕ್ಷಿಗಳ ದಾಳಿ ಕಾರಣ: ಈ ಭೀಕರ ವಿಮಾನ ಅಪಘಾತಕ್ಕೆ ಪಕ್ಷಿಗಳ ದಾಳಿ ಕಾರಣ ಎಂದು ಶಂಕಿಸಲಾಗುತ್ತಿದ್ದು, ವಿಮಾನ ಪತನಕ್ಕೂ ಮುನ್ನ ವಿಮಾನದ ಪೈಲಟ್ ವಾಯುಗೋಪುರಕ್ಕೆ 'ಮೇಡೇ' ■ 9ನೇ ಪುಟಕ್ಕೆ

ನಾರ್ವೆಯಲ್ಲಿ ರನ್‌ವೇ ಬಿಟ್ಟು ಬದಿಗೆ ಜಾರಿದ ಡಚ್ ವಿಮಾನ; 182 ಪ್ರಯಾಣಿಕರು ಪಾರು



ಆಮ್‌ಸ್ಟರ್‌ಡ್ಯಾಮ್, ಡಿ.29– ನಾರ್ವೆಯ ಓಸ್ಲೋ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ್ದ ಡಚ್ ವಿಮಾನಯಾನ ಸಂಸ್ಥೆ ಕೆಎಲ್‌ಎಂನ ಬೋಯಿಂಗ್ 737 ವಿಮಾನ, ರನ್ ವೇ ಬಿಟ್ಟು ಪಕ್ಕದ ಹುಲ್ಲಿನ ಹಾಸಿನ ಮೇಲೆ ಜಾರಿದ ಘಟನೆ ಶನಿವಾರ ನಡೆದಿದೆ. ವಿಮಾನದಲ್ಲಿದ್ದ 182 ಮಂದಿ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಓಸ್ಲೋ ವಿಮಾನ ನಿಲ್ದಾಣದಿಂದ ಆಮ್‌ಸ್ಟರ್‌ಡ್ಯಾಮ್‌ಗೆ ಹೊರಟಿದ್ದ ಬೋಯಿಂಗ್ 737 ವಿಮಾನದಲ್ಲಿ ಟೇಕಾಫ್ ಆದ ಸ್ವಲ್ಪ ಸಮಯದ ನಂತರ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ತಕ್ಷಣ ಎಚ್ಚೆತ್ತ ಸಿಬ್ಬಂದಿ ಓಸ್ಲೋದಿಂದ ದಕ್ಷಿಣಕ್ಕೆ 110 ಕಿ.ಮೀ ದೂರದಲ್ಲಿರುವ ಓಸ್ಲೋ ಟಾರ್ಪ್ ಸ್ಯಾಂಡೆಫ್ಜೋರ್ಡ್ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನವು ಓಸ್ಲೋ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಲ್ಯಾಂಡಿಂಗ್ ಮಾಡಿತ್ತಾದರೂ ರನ್‌ವೇ 18ರಲ್ಲಿ ಸಾಗುವ ವೇಳೆ ನಿಯಂತ್ರಣ ಕಳೆದುಕೊಂಡಿತ್ತು. ಸುದೈವವಶಾತ್ ಕೊನೆಗೆ ಟ್ಯಾಕ್ಸಿ ವೇ ಪಕ್ಕದಲ್ಲಿರುವ ಮೃದುವಾದ ಹುಲ್ಲು ಹಾಸಿನ ಮೇಲೆ ನಿಂತಿತ್ತು ಎಂದು ಅವರು ತಿಳಿಸಿದ್ದಾರೆ. ಈ ವಿಮಾನದಲ್ಲಿ ಸಿಬ್ಬಂದಿ ಮತ್ತು ಪ್ರಯಾಣಿಕರು ಸೇರಿ ಒಟ್ಟು 182 ಮಂದಿ ಪ್ರಯಾಣಿಸುತ್ತಿದ್ದರು. ಘಟನೆಯಲ್ಲಿ ಯಾವುದೇ ಪ್ರಾಣ ಹಾನಿಯಾಗಿಲ್ಲ ಎಂದು ತಿಳಿಸಿದ್ದಾರೆ. ಅವಘಡದ ಬಗ್ಗೆ ವಿಮಾನಯಾನ ಸಂಸ್ಥೆ ಕೆಎಲ್‌ಎಂ ಯಾವುದೇ ಹೇಳಿಕೆ ಬಿಡುಗಡೆ ಮಾಡಿಲ್ಲ.

ಮೈಸೂರು ಮಿತ್ರ

ಸೋಮವಾರ 30 ಡಿಸೆಂಬರ್ 2024

ಮೈಸೂರಿನ ರಿಂಗ್ ರಸ್ತೆಗೆ ವಿ.ಶ್ರೀನಿವಾಸಪ್ರಸಾದ್ ಹೆಸರಿಡಿ

ಕರ್ನಾಟಕ ದಲಿತ ಪ್ಯಾಂಥರ್ಸ್ ಸಂಘಟನೆ ಒತ್ತಾಯ

ಮೈಸೂರು,ಡಿ.29(ಪಿಎಂ)–ಮೈಸೂರಿನ ರಿಂಗ್ ರಸ್ತೆಗೆ ಧೀಮಂತ ದಲಿತ



ನಾಯಕರೂ ಆದ ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರ ಹೆಸರು ನಾಮಕರಣ ಮಾಡಬೇಕೆಂದು ಗಾಂಧಿನಗರದ ಕರ್ನಾಟಕ ದಲಿತ ಪ್ಯಾಂಥರ್ಸ್ ಸಂಘಟನೆ ಒತ್ತಾಯಿಸಿದೆ. ಹಿರಿಯ ರಾಜಕೀಯ ಮುತ್ಸದ್ದಿ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರು 50 ವರ್ಷಗಳ ತಮ್ಮ ರಾಜಕಾರಣದಲ್ಲಿ ಕೇಂದ್ರ ಆಹಾರ ನಾಗರಿಕ ಪೂರೈಕೆ ರಾಜ್ಯ ಖಾತೆ ಸಚಿವರಾಗಿ ಹಾಗೂ ರಾಜ್ಯ ಸರ್ಕಾರದಲ್ಲಿ ಕಂದಾಯ ಮತ್ತು ಮುಜರಾಯಿ ಸಚಿವರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಹಳೇ ಮೈಸೂರು ಭಾಗದ ಪ್ರಭಾವಿ ದಲಿತ ನಾಯಕರಾಗಿದ್ದ ಅವರು, ಪಕ್ಷಾತೀತವಾಗಿ ಮೈಸೂರಿಗೆ ಗಣನೀಯ ಕೊಡುಗೆ ನೀಡಿದ್ದಾರೆ. ಇದನ್ನು ಗುರುತಿಸಿ ಇವರ ಹೆಸರನ್ನು ಮೈಸೂರು ರಿಂಗ್ ರಸ್ತೆಗೆ ನಾಮಕರಣ ಮಾಡಲು ಜಿಲ್ಲಾಡಳಿತ ಕ್ರಮ ವಹಿಸಬೇಕೆಂದು ಸಂಘಟನೆಯ ಅಧ್ಯಕ್ಷ ಯೋಗ ನರಸಿಂಹ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಮಕ್ಕಳ ಸಿಂಗಲ್ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ



ಮಕ್ಕಳ ಸಿಂಗಲ್ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ವಿಜೇತರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.29–ಸ್ಪಂದನ ಮತ್ತು ಶ್ರೀ ಸಾಯಿ ಸ್ಪೋರ್ಟ್ಸ್ ವತಿಯಿಂದ ಮಕ್ಕಳ ಸಿಂಗಲ್ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಕುವೆಂಪುನಗರದ ತಪೋನಂದನ ಉದ್ಯಾನವನದಲ್ಲಿ ಆಯೋಜಿಸಲಾಗಿತ್ತು.

ಪಂದ್ಯಾವಳಿಯಲ್ಲಿ 32 ಮಕ್ಕಳು ಭಾಗವಹಿಸಿದ್ದರು. ವಿನ್ನರ್ ಆಗಿ ಮಿಥುನ್, ರನ್ನರ್ ಆಗಿ ಮನೋಜ್ ಹೊರಹೊಮ್ಮಿದರು. ರಾಹುಲ್ ಮತ್ತು ತನ್ಮಯಿ ಮೂರನೇ ಸ್ಥಾನಗಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಪ್ರಾಧ್ಯಾಪಕ ಡಾ.ಸಿ.ವೆಂಕಟೇಶ್ ವಿಜೇತರಿಗೆ ಟ್ರೋಫಿ ಮತ್ತು ಟೀ ಷರ್ಟ್‌ಗಳನ್ನು ವಿತರಿಸಿ, ಮಕ್ಕಳಿಗೆ ಕ್ರೀಡಾ ಸಾಧನೆ ಹಾದಿಯ ಬಗ್ಗೆ ವಿವರಿಸಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಕಿಶೋರ್, ಮಕ್ಕಳನ್ನು ಉದ್ದೇಶಿಸಿ ಕ್ರೀಡೆಯ ಬಗ್ಗೆ ಹೆಚ್ಚು ಒಲವು ಬೆಳಸಿಕೊಂಡು ಶ್ರಮವಹಿಸಿ ರಾಜ್ಯ, ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸುವಂತಾಗಲಿ ಎಂದು ಹಾರೈಸಿದರು. ಬ್ಯಾಡ್ಮಿಂಟನ್ ಕೋಚ್ ಪಿ.ವಿ.ದರ್ಶನ್ ಅವರ ಮಾರ್ಗದರ್ಶನದಲ್ಲಿ ಷಟಲ್ ಬ್ಯಾಡ್ಮಿಂಟನ್ ಮಾಸ್ಟರ್ ವಿಭಾಗದಲ್ಲಿ ರಾಜ್ಯಮಟ್ಟದಲ್ಲಿ ಪ್ರತಿನಿಧಿಸಿರುವ ಶ್ರೀಮತಿ ಶೋಭ ನಟೇಶ್ ಹಾಗೂ ಮಕ್ಕಳ ಬ್ಯಾಡ್ಮಿಂಟನ್ ವಿಭಾಗದ ಮನೋಜ್ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು.

ಟಿ.ರಾಮಕೃಷ್ಣಗೌಡ, ಯೋಗೀಂದ್ರ, ರಾಮಪ್ಪ, ರಾಘವೇಂದ್ರ, ದಿವಾಕರ್ ಶೆಟ್ಟಿ, ಸಾಯಿ, ಮಯೂರ್, ಮೋಹನ್ ಕುಮಾರ್, ಸುನಿಲ್, ತಲಕಾಡು ಮಹದೇವ್, ಸುಹಾಸ್, ರಾಘವೇಂದ್ರ ಭಾಗವಹಿಸಿದ್ದರು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಟೀಂ ಮೈಸೂರು ವತಿಯಿಂದ 2025ರ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ದೇವರಾಜ ಅರಸು ರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ತ್ರಿಪುರ ಭೈರವಿ ಮಠದ ಶ್ರೀ ಕೃಷ್ಣಮೋಹಾನಂದ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಿದ್ದರು. ಪಾಲಿಕೆ ಮಾಜಿ ಸದಸ್ಯರಾದ ರಂಗಸ್ವಾಮಿ, ಪ್ರಶಾಂತ್ ಗೌಡ, ಅಶೋಕ್ ಫಾರ್ಮದ ಅಶೋಕ್ ಕಪೂರ್, ತಂಡದ ಪರವಾಗಿ ಯತೀಶ್ ಹಾಗೂ ಟೀಂ ಮೈಸೂರು ತಂಡದ ಸದಸ್ಯರು ಭಾಗವಹಿಸಿದ್ದರು. ನವಕಾರ್ ಪ್ರಿಂಟರ್ಸ್‌ನ ಶಿವುಶಂಕರ್, ಮೈಸೂರು ಪತ್ರಕರ್ತರ ಸಂಘದ ಉಪಾಧ್ಯಕ್ಷ ರವಿ ಪಾಂಡವಪುರ ಅವರನ್ನು ಈ ವೇಳೆ ಸನ್ಮಾನಿಸಲಾಯಿತು.

ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್‌ರಿಗೆ ನಮನ



ಮೈಸೂರಿನ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಕೆ.ಆರ್. ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ರಾಘವೇಂದ್ರ, ಭಾರತೀಯ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆಲನಹಳ್ಳಿ ಎಂ.ಎನ್.ಚೇತನ್‌ಗೌಡ, ಎಸ್.ಎನ್.ರಾಜೇಶ್, ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು, ವಿನಯ್ ಕಣಗಾಲ್, ರಾಕೇಶ್, ಚಕ್ರಪಾಣಿ, ಸಚೀಂದ್ರ, ಮಹಾನ್ ಶ್ರೇಯಸ್, ಹರೀಶ್‌ನಾಯ್ಡು ಇನ್ನಿತರರಿದ್ದರು.

ಕೆಆರ್‌ಎಸ್ ರಸ್ತೆಗೆ ಸಿದ್ದು ಹೆಸರು: ಎಎಪಿ ವಿರೋಧ

ಮೈಸೂರು, ಡಿ.29(ಜಿಎ)–ಮೈಸೂರಿನ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿಡುವುದು ಸರಿಯಾದ ಕ್ರಮವಲ್ಲ ಎಂದು ಆಮ್ ಆದ್ಮಿ ಪಕ್ಷ ಜಿಲ್ಲಾಧ್ಯಕ್ಷ ಆರ್.ರಂಗಯ್ಯ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಡಾ ಹಗರಣದಲ್ಲಿ ಆರೋಪಿ ಸ್ಥಾನದಲ್ಲಿ ಇದ್ದಾರೆ. ಅಧಿಕಾರಿಗಳು ತರಾತುರಿಯಲ್ಲಿ ಅವರ ಹೆಸರನ್ನು ಯಾರದೋ ಒತ್ತಡಕ್ಕೆ ಮಣಿದು ಹಾಕಿದರೆ ಸಿದ್ದರಾಮಯ್ಯ ವ್ಯಕ್ತಿತ್ವಕ್ಕೂ ಧಕ್ಕೆ ಬರಬಹುದು. ಈಗಾಗಲೇ ಆ ರಸ್ತೆಗೆ ಕೆಆರ್‌ಎಸ್ ರಸ್ತೆ ಎಂದು ಹೆಸರು ಇರುವಾಗ ಆ ರಸ್ತೆಗೆ ಪುನರ್ ನಾಮಕರಣ ಮಾಡುವುದು ಸರಿಯಾದ ಕ್ರಮವಲ್ಲ. ಮೈಸೂರು ಭಾಗದವರು ಮುಖ್ಯಮಂತ್ರಿಯಾಗಿರುವುದು ನಮ್ಮ ಸುದೈವ, ಅವರ ಹೆಸರು ಶಾಶ್ವತವಾಗಿ ಉಳಿಯಲು ಅವರ ಉಳಿದ ಅಧಿಕಾರವಧಿಯಲ್ಲಿ ಯಾವುದಾದರೂ ಹೊಸದಾಗಿ ಸುಂದರವಾದ ಮೇಲುಸೇತುವೆ ರಸ್ತೆ ಅಥವಾ ರಸ್ತೆಯ ಅಗಲೀಕರಣ ಮಾಡಿಸಿ ಅವರ ಹೆಸರನ್ನು ಹಾಕುವುದು ಸೂಕ್ತವಾಗಿದ್ದು, ಇದಕ್ಕೆ ಅಧಿಕಾರಿಗಳು ಒತ್ತು ನೀಡಲಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಕೆ.ಎಸ್.ಶ್ರೀನಿವಾಸ್



ಮೈಸೂರು, ಡಿ. 29–ಮೈಸೂರಿನ ಶಾರದಾದೇವಿನಗರದಲ್ಲಿರುವ ತಪೋವನ ಸೊಲೇಸ್ ಅಪಾರ್ಟ್‌ಮೆಂಟ್ ನಿವಾಸಿ ಮಂಗಳೂರಿನ ಬಿಹೆಚ್‌ಇಎಲ್ ನಿವೃತ್ತ ಜನರಲ್ ಮ್ಯಾನೇಜರ್ ಕೆ.ಎಸ್.ಶ್ರೀನಿವಾಸ್(84) ಅವರು ಶನಿವಾರ ನಿಧನರಾದರು.

ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಗೋಕುಲಂ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ಹನುಮಂತರಾಯ



ಮೈಸೂರಿನ ಗಾಯತ್ರಿಪುರಂ ನಿವಾಸಿ ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್ ಹನುಮಂತರಾಯ(81) ಅವರು ಇಂದು ನಿಧನರಾದರು. ಮೃತರು ಕೆಪಿಸಿಸಿ ಹಿಂದುಳಿದ ವರ್ಗದ ಉಪಾಧ್ಯಕ್ಷ ಎಂ.ಹೆಚ್.ಕಿರಣ್, ಎಂ.ಹೆಚ್.ಅರುಣ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಡಿ. 30) ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀ ವೇದವಾಗ್ದೇವಿ ಸರ್ವಮಂತ್ರ ಸಂಗ್ರಹ ಗ್ರಂಥ ಲೋಕಾರ್ಪಣೆ

ಮೈಸೂರು, ಡಿ.29(ಬಿಎಲ್‌ಯು)–ಮೈಸೂರಿನ ಶ್ರೀ ವೇದಮಾತಾ ಗುರುಕುಲ ಧಾರ್ಮಿಕ ದತ್ತಿ ಸಂಸ್ಥೆಯ 19ನೇ ವಾರ್ಷಿಕೋತ್ಸವ ಹಾಗೂ ಶ್ರೀ ವೇದ ವಾಗ್ದೇವಿ ಸರ್ವಮಂತ್ರ ಸಂಗ್ರಹ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು.

ನಗರದ ಅಗ್ರಹಾರದ ನಟರಾಜ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮವನ್ನು ಮಹಾರಾಜ ಸಂಸ್ಕೃತ ಪಾಠಶಾಲೆಯ ನಿವೃತ್ತ ಪ್ರಾಧ್ಯಾಪಕ ಲೋಕೇಶ್ ಆರಾಧ್ಯ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ವೇದ ಸೇರಿದಂತೆ ಯಾವುದೇ ಕಲಿಕೆಗೆ ಗುರಗಳು ಬೇಕಿಲ್ಲ, ಆದರೆ ಇಚ್ಛಾಶಕ್ತಿ, ಬದ್ಧತೆ ಹಾಗೂ ತಾವು ಕಲಿಯುತ್ತಿರುವ ವಿದ್ಯೆ ಬಗ್ಗೆ ಸಮಾಧಾನ ಸಂಗತಿ ಇದ್ದರೆ ಅದರಲ್ಲಿ ಯಶಸ್ವಿಯಾಗಬಹುದು ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಅಗ್ರಹಾರದ ನಟರಾಜ ಕಲ್ಯಾಣ ಮಂಟಪದಲ್ಲಿ ನಡೆದ ಶ್ರೀ ವೇದಮಾತಾ ಗುರುಕುಲ ಧಾರ್ಮಿಕ ದತ್ತಿ ಸಂಸ್ಥೆಯ 19ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಶ್ರೀ ದೇವವಾಗ್ದೇವಿ ಸರ್ವಮಂತ್ರ ಸಂಗ್ರಹ ಗ್ರಂಥ ಲೋಕಾರ್ಪಣೆ ಮಾಡಲಾಯಿತು.

ಮನುಷ್ಯನಿಗೆ ವಿದ್ಯೆ ಬಹಳ ಮುಖ್ಯ. ಆಸಕ್ತಿಯಿಂದ ವಿದ್ಯೆ ಕಲಿತರೆ ವಿನಯ ತನಗೆ ತಾನಾಗಿಯೇ ಬರಲಿದೆ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಶ್ರೀ ವೇದಮಾತಾ ಗುರುಕುಲ ಧಾರ್ಮಿಕ ದತ್ತಿ ಸಂಸ್ಥೆ ಸಂಸ್ಥಾಪಕ ಮಂಜುನಾಥ್ ಆರಾಧ್ಯ, 1996ರಲ್ಲಿ ಈ ಸಂಸ್ಥೆ ಆರಂಭವಾಯಿತು. ವೇದ ಕಲಿಕೆಯನ್ನು ಒಂದು ಜಾತಿ, ಧರ್ಮಕ್ಕೆ ಸೀಮಿತಗೊಳಿಸದೆ ಎಲ್ಲರಿಗೂ ಕಲಿಸಲಾಗುತ್ತಿದೆ. ಈ ತನಕ ನಮ್ಮ ಸಂಸ್ಥೆ 6 ಸಾವಿರ ವಿದ್ಯಾರ್ಥಿಗಳಿಗೆ ವೇದ ಪಾಠ ಮಾಡಿದೆ. ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಂದ ಇಲ್ಲಿ ಬಂದು ವೇದ ಪಾಠ ಕಲಿಯುತ್ತಿದ್ದಾರೆ ಎಂದು ಮಂಜುನಾಥ್ ಆರಾಧ್ಯ ತಿಳಿಸಿದರು.

ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಆಗಮಿಕ ಡಾ.ಎನ್. ಶಶಿಶೇಖರ ದೀಕ್ಷಿತ್, ಜ್ಯೋತಿಷಿ ಎಂ.ರಾಜುಸ್ವಾಮಿ ಆರಾಧ್ಯ, ಕೊಳ್ಳೇಗಾಲದ ಶ್ರೀ ಸುಬ್ರಹ್ಮಣ್ಯೇಶ್ವರ ದೇವಸ್ಥಾನದ ಆಗಮಿಕ ಬಾಲಸುಬ್ರಹ್ಮಣ್ಯ ಶಾಸ್ತ್ರಿ, ಮಾಯಕಾರ ಗುರುಕುಲದ ಸಂಸ್ಥಾಪಕ ಮೂಗೂರು ಮಧು ದೀಕ್ಷಿತ್, ರೋಟರಿ ಹೆರಿಟೇಜ್ ಅಧ್ಯಕ್ಷ ಆರ್.ರಾಜೇಶ್, ಶ್ರೀ ದೇವಿ ಗುರುಕುಲದ ಸಂಸ್ಥಾಪಕ ದಯಾನಂದ ಶಾಸ್ತ್ರೀ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇಂದು ಕನ್ನಡ–ಹಿಂದಿ ಚಿತ್ರಗೀತೆಗಳ ಎಂದೂ ಮರೆಯದ ಹಾಡು ಚಿತ್ರಗೀತೆ

ಮೈಸೂರು,ಡಿ.29(ಜಿಎ)–ಹಳೇಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ ಡಿ.30ರಂದು ಸಂಜೆ 5 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ನುರಿತ ಕಲಾವಿದರಿಂದ ಕನ್ನಡ–ಹಿಂದಿ ಹಾಡುಗಳ ಎಂದೂ ಮರೆಯದ ಹಾಡು ಚಿತ್ರಗೀತೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಶ್ರೀಕಂಠರಾವ್ ಈ ವಿಷಯ ತಿಳಿಸಿ, ಕಾರ್ಯಕ್ರಮಕ್ಕೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ ನೀಡುವರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅಧ್ಯಕ್ಷತೆ ವಹಿಸುವರು. ಈ ವೇಳೆ ಕನ್ನಡ ಮತ್ತು ಹಿಂದಿ ಚಿತ್ರಗಳ ಸುಮಾರು 30 ಹಾಡು ಹಾಡಲಾಗುವುದು. ಇದು ಕರೋಕೆ ಕಾರ್ಯಕ್ರಮವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಮಥ ಮಂಜುನಾಥ್, ಗಣೇಶ್ ರಾವ್, ಶುಭಾ ಪಲ್ಲವಿ ಉಪಸ್ಥಿತರಿದ್ದರು.

ಎಸ್‌ಬಿಎಂ ಮಂಜು ತಂಡದಿಂದ ಮತಯಾಚನೆ



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ 2025–30ನೇ ಸಾಲಿನ ನಿರ್ದೇಶಕರ ಚುನಾವಣೆಗೆ ಎಸ್‌ಬಿಎಂ ಮಂಜು ಅವರ ನೇತೃತ್ವದ ತಂಡದವರು ಒಂಟಿಕೊಪ್ಪಲಿನ ದೇವಸ್ಥಾನದ ಧರ್ಮದರ್ಶಿಗಳ ಬಳಿ ಅಭ್ಯರ್ಥಿಗಳೊಂದಿಗೆ ಮತಯಾಚಿಸಿದರು.

ಮೈಸೂರು,ಡಿ.29–ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ 2025–30ನೇ ಸಾಲಿನ ನಿರ್ದೇಶಕರ ಚುನಾವಣೆಗೆ ಎಸ್‌ಬಿಎಂ ಮಂಜು ನೇತೃತ್ವದ ತಂಡದವರು ಒಂಟಿಕೊಪ್ಪಲಿನ ದೇವಸ್ಥಾನದ ಧರ್ಮದರ್ಶಿಗಳ ಬಳಿ 10 ಮಂದಿ ಅಭ್ಯರ್ಥಿಗಳೊಂದಿಗೆ ಮತಯಾಚಿಸಿದರು.

ಈ ಸಂದರ್ಭದಲ್ಲಿ ಮೈಸೂರು ಕೋಆಪರೇಟಿವ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಇಜ್ಜಿಲು ಅಂಗಡಿ ಸೋಮಣ್ಣನವರ ಅಳಿಯ ಹೈಕೋರ್ಟ್ ವಕೀಲ ಸಚಿನ್ ಅವರು ಎಸ್‌ಬಿಎಂ ಮಂಜು ತಂಡವನ್ನು ಬೆಂಬಲಿಸಿ ಮತಯಾಚಿಸಿದರು. ಶ್ರೀರಾಮ ಕಲ್ಯಾಣ ಮಂದಿರ ದೇವಸ್ಥಾನದ ಅಧ್ಯಕ್ಷ ನಾಗರಾಜಣ್ಣ, ಕಾರ್ಯದರ್ಶಿ, ರವಿಕುಮಾರ್ ಧರ್ಮದರ್ಶಿಗಳಾದ ಜಯಪ್ರಕಾಶ್ (ಜೆಪಿ), ನಟರಾಜಣ್ಣ, ಸೋಮಶೇಖರ್, ಬಸವರಾಜಣ್ಣ, ನೀಲಕಂಠ, ಶ್ರೀಕಂಠ, ಸೋಮಣ್ಣ, ಜಗದೀಶ್ ಉಪಸ್ಥಿತರಿದ್ದರು. ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಅಭ್ಯರ್ಥಿಗಳಾದ ಎಸ್‌ಬಿಎಂ ಮಂಜು, ರಾಜಕೀಯ ರವಿಕುಮಾರ್, ಕುಮಾರ್‌ಗೌಡ, ರೋಹಿತ್, ಮಂಚಪ್ಪ, ರವಿಕುಮಾರ್, ಎಸ್‌ಆರ್ ಅರವಿಂದ, ವಿಕಾಶ್ ವೈ, ವಸಂತ, ಮನೀಶ್, ಚಾಯಮ್ಮ, ಹೇಮಾ ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.

ಮನಮೋಹನ್‌ಸಿಂಗ್ ಮಾನವೀಯ ಮೌಲ್ಯಗಳಿಗೆ ಆದ್ಯತೆ ನೀಡಿದ್ದರು

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಗುಣಗಾನ



ಮೈಸೂರು ಯುವ ಬಳಗದ ವತಿಯಿಂದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಮೈಸೂರು,ಡಿ.29–ಮೈಸೂರು ಯುವ ಬಳಗದ ವತಿಯಿಂದ ಆಯೋಜಿಸಿದ್ದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಸಂತಾಪ ಸಭೆಯಲ್ಲಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಶಾಸಕ ಕೆ.ಹರೀಶ್ ಗೌಡ, ಮನಮೋಹನ ಸಿಂಗ್ ಅವರ ನಿಧನದಿಂದ, ಭಾರತ ಶ್ರೇಷ್ಠ ರತ್ನವೊಂದನ್ನು ಕಳೆದುಕೊಂಡಂತಾಗಿದೆ. ಜಗತ್ತಿನ ಆರ್ಥಿಕ ನಾಯಕರಾಗಿ, ಹಲವಾರು ರಾಷ್ಟ್ರಗಳ ಆರ್ಥಿಕ ಸಂಕಷ್ಟದ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ್ದರು. ಮಾನವೀಯ ಮೌಲ್ಯಗಳಿಗೆ ಹೆಚ್ಚು ಗೌರವ ನೀಡಿದ್ದ ನಾಯಕ, ನಮ್ಮನ್ನು ಅಗಲಿದ್ದಾರೆ ಎಂದರು.

ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ವಾರ್ಡ್ ನಂ. 41ರ ಅಧ್ಯಕ್ಷ ನಂಜುಂಡಸ್ವಾಮಿ, ವಾರ್ಡ್ ನಂ.23ರ ಮುಖಂಡ ರವಿಚಂದ್ರ, ಈರೇಗೌಡ, ರವಿ,ಮಂಜುನಾಥ್ ಗೌಡ, ನಿತಿನ್, ಸಂತೋಷ, ನವೀನ, ಶ್ರೀನಿವಾಸ್ ಆಚಾರ್, ವಿನೋದ್, ಪ್ರಜ್ವಲ್, ರಾಜೇಶ, ಭಗವಾನ್, ಅಜಿತ್, ಭಾರತೀಯ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆಲನಹಳ್ಳಿ ಎಂ.ಎನ್. ಚೇತನ್‌ಗೌಡ, ಮಹಾನ್ ಶ್ರೇಯಸ್ ಹಾಗೂ ಇನ್ನಿತರರು ಹಾಜರಿದ್ದರು.

ಸಂಶೋಧನೆ, ನಾವೀನ್ಯತೆಯಲ್ಲಿ ಐಪಿಆರ್ ಪರಿಣಾಮಗಳು ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರ

ಮೈಸೂರು, ಡಿ. 29– ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎ.ಸಿ ಘಟಕ, ಸ್ನಾತಕೋತ್ತರ ವಾಣಿಜ್ಯಶಾಸ್ತ್ರದ ಅಧ್ಯಯನ ವಿಭಾಗ, ವಿದ್ಯಾವರ್ಧಕ ಸಂಶೋಧನಾ ಪ್ರತಿಷ್ಠಾನ ಹಾಗೂ ಐ.ಪಿ.ಆರ್ ಸೆಲ್‌ನ ಸಹಯೋಗದೊಂದಿಗೆ ಸಂಶೋಧನೆ ಮತ್ತು ನಾವೀನ್ಯತೆಯಲ್ಲಿ ಐಪಿಆರ್ ಪರಿಣಾಮಗಳು ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾನಿಲಯದ ವ್ಯವಹಾರ ಆಡಳಿತ ವಿಭಾಗದ ಪ್ರಾಧ್ಯಾಪಕ ಡಾ.ಎ.ಸೆಲ್ವರಸು ಉದ್ಘಾಟಿಸಿದರು.



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಶೋಧನೆ ಮತ್ತು ನಾವೀನ್ಯತೆಯಲ್ಲಿ ಐಪಿಆರ್ ಪರಿಣಾಮಗಳು ಕುರಿತು ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಡಾ.ಎ.ಸೆಲ್ವರಸು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಇಂದು ಕ್ಷಿಪ್ರವಾಗಿ ವಿಕಸನಗೊಳ್ಳುತ್ತಿರುವ ಈ ಜಗತ್ತಿನಲ್ಲಿ, ಐಪಿಆರ್ ಒಂದು ಪ್ರಮುಖ ಸಂಪತ್ತಾಗಿ ಹೊರಹೊಮ್ಮಿದೆ. ಹೊಸ ನಾವೀನ್ಯತೆಗೆ ಇದು ಚಾಲನೆ ನೀಡುತ್ತದೆ. ಸೃಜನಶೀಲ ಬರಹಗಾರರ ರಕ್ಷಣೆಯ ಭರವಸೆಯಾಗಿದೆ. ಇಂದು ಶಿಕ್ಷಣಕ್ಕೆ, ಶೈಕ್ಷಣಿಕ ಬೆಳವಣಿಗೆಗೆ, ಉದ್ಯಮಶೀಲತೆಗೆ, ಸುಸ್ಥಿರ ಅಭಿವೃದ್ಧಿಗೆ ಮತ್ತು ಕೆಲಸದ ಪ್ರಯೋಜನಗಳನ್ನು ಭದ್ರಪಡಿಸಿಕೊಳ್ಳಲು ಐ.ಪಿ.ಆರ್ ತುಂಬಾ ಅವಶ್ಯಕವಾಗಿದೆ. ನಿಮ್ಮ ಪರಿಶ್ರಮವು ನಿಮಗೆ ಹಲವು ವೇದಿಕೆಗಳನ್ನು ಒದಗಿಸುತ್ತದೆ. ಈ ಕಾರ್ಯಾಗಾರಗಳು ಶಿಕ್ಷಣ ತಜ್ಞರು, ಸಂಶೋಧಕರು ಮತ್ತು ವಿದ್ಯಾರ್ಥಿಗಳಿಗೆ ಐ.ಪಿ.ಆರ್ ಅನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಪ್ರಾಮುಖ್ಯತೆಯನ್ನು ಒತ್ತಿ ಹೇಳಲು ಒಂದು ಉತ್ತಮ ವೇದಿಕೆಯಾಗಿದೆ. ಉದ್ಯಮಿಗಳನ್ನು ಪ್ರೋತ್ಸಾಹಿಸುವಲ್ಲಿಯೂ ಸಂಶೋಧನೆ ಮತ್ತು ಮಾರುಕಟ್ಟೆಯ ಸಿದ್ಧತೆಗಳನ್ನು ಹೆಚ್ಚಿಸುವ ವಿಧಾನಗಳನ್ನು ಸಹ ಇದು ಪರಿಶೋಧಿಸುತ್ತದೆ. ಇಂದು ಕೃತಕ ಬುದ್ಧಿಮತ್ತೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿಯಾಗಿದೆ. ಐಪಿಆರ್ ಹಣಗಳಿಕೆ ಮತ್ತು ವಾಣಿಜ್ಯ ಅಂಶಗಳನ್ನು ಇಂತಹ ಕಾರ್ಯಾಗಾರಗಳಲ್ಲಿ ತಿಳಿದುಕೊಳ್ಳಬಹುದು ಎಂದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರಿಗೌಡ, ವಿವಿ ಅಧ್ಯಕ್ಷ ಗುಂಡಪ್ಪಗೌಡ, ಎಂ.ಕಾಂ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಪೂರ್ಣಿಮಾ, ಐಪಿಆರ್ ಸೆಲ್ ಸಂಚಾಲಕರಾದ ಪ್ರೊ.ದೀಪಾ ಎಂ., ಪ್ರೊ.ಸುನೀಲ್ ಎಂ.ಜಿ. ಇತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.12.2024 ಸೋಮವಾರ, ಮಳೆ ನಕ್ಷತ್ರ: ಪೂಷಾ, 29.12.2024ರಿಂದ 16.01.2025
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಸುಪ್ರಭ ನಾಗೇಶರಾವ್ ಸೇವಾ ಪ್ರತಿಷ್ಠಾನ :** ವಿಶ್ವ ಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಏಕವ್ಯಕ್ತಿಯಿಂದ ನಿರಂತರವಾಗಿ 108 ಬಾರಿ ಪಾರಾಯಣ, ಸ್ಥಳ: #622, 2ನೇ ಮೇನ್, 2ನೇ ಕ್ರಾಸ್, ಶಾರದಾದೇವಿನಗರ, ಬೆಳಗ್ಗೆಯಿಂದ.


■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15ರಿಂದ.

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಹಿರಿಯ ಸ್ವಾಮೀಜಿ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಆರಾಧನೆ ಪಯುಕ್ತ ಜ್ಞಾನಯಜ್ಞ ಸಂಭ್ರಮ ಕಾರ್ಯಕ್ರಮದಡಿ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರಿಂದ ಮಹಾಭಾರತದಲ್ಲಿ ಭೀಷ್ಮಪರ್ವ ಕುರಿತು ಪ್ರವಚನ, ಸ್ಥಳ: ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಸಂಜೆ 6.30ರಿಂದ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ಶ್ರೀ ಮದ್ಭಾಗವತ ಸಪ್ತಾಹ, ವಿದುಷಿ ಡಾ.ಜ್ಯೋತಿ ಶಂಕರ್ ಅವರಿಂದ ಭೂದೇವಿಯ ಪ್ರಾರ್ಥನೆ–ಶಾರದಾದೇವಿ ಮಹಿಳಾ ಸಮಾಜ, ರಾಮಕೃಷ್ಣನಗರ, ಐ–ಬ್ಲಾಕ್, ಸ್ಥಳ: ರಜತ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಹಿರಿಯ ಸ್ವಾಮೀಜಿ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಆರಾಧನೆ ಪ್ರಯುಕ್ತ, ಜ್ಞಾನ ಯಜ್ಞ ಸಂಭ್ರಮ ಕಾರ್ಯಕ್ರಮದಡಿ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರಿಂದ ಮಹಾಭಾರತದಲ್ಲಿ ಭೀಷ್ಮ ಪರ್ವ ಕುರಿತು ಪ್ರವಚನ, ಸ್ಥಳ: ಶ್ರೀ ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35–ಮತ್ತು ಸಂಜೆ 6.10: ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ.ಶೋಭಾ, ವ್ಯಾಖ್ಯಾನ–ಜಿ.ಆರ್. ತಿಪ್ಪೇಸ್ವಾಮಿ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿಮಾತು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00– ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂತ ಉಡುಪಿಯ ಪೇಜಾವರ ಮಠದ ಶ್ರೀವಿಶ್ವೇಶತೀರ್ಥ ಸ್ವಾಮೀಜಿಯವರೊಂದಿಗೆ ಡಾ.ಎಂ.ಎಸ್. ವಿಜಯಾಹರನ್ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ.ವಿ.ಸುಬ್ರಹ್ಮಣ್ಯಂ–ವೈಯೋಲಿನ್ ವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ–ಪ್ರಸ್ತುತಿ: ದಿಗ್ವಿಜಯ್ ಬಿ., 12.05–ವನಿತಾ ವಿಹಾರ, 12.35–ದೇವರನಾಮ–ವಿಜಯಾ ನವಿಲೂರು, 12.45–ನಮ್ಮ ಆರೋಗ್ಯ: ಮಕ್ಕಳಲ್ಲಿ ಮಧುಮೇಹ–ನಿರ್ವಹಣೆ ಮತ್ತು ಚಿಕಿತ್ಸೆ' ಕುರಿತು ಮಕ್ಕಳು ಹಾಗೂ ಹದಿಹರೆಯದವರ ಎಂಡೋಕ್ರೈನಾಲಜಿ ತಜ್ಞರಾದ ಡಾ.ತೃಪ್ತಿ. ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಅಲ್ಪಸಂಖ್ಯಾತರಿಗಾಗಿ ಇರುವ ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮ, ಪತ್ರಕರ್ತ ರವಿಕುಮಾರ್ ಪಿ.ಕೆ. ಅವರೊಂದಿಗೆ ಸಂದರ್ಶನ. ಸಂದರ್ಶಕರು: ಜಾಂಪಣ್ಣ ಆಶೀಹಾಳ್, 1.20–ಭಾವಗೀತೆಗಳು–2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಉಷಾ, ಹಾಡುಗಾರಿಕೆ, 4.00–ಮಹಿಳಾರಂಗ–"ನಾನು ನನ್ನ ಕಂಪನಿ" ಮದುವೆ ಸಮಾರಂಭಗಳಿಗೆ ವಿವಿಧ ರೀತಿಯ ತಿಂಡಿಗಳನ್ನು ತಯಾರಿಸುವ ಉಮಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನಾ, 4.45–ಹಿಂದಿ ಪಾಠ, ಎಸ್.ಎನ್.ಭಟ್ ಸೈಪಂಗಲ್ಲು, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಕೃಷಿ ಚಕ್ರ –ವರ್ಷದ ಕೃಷಿ ಕಾರ್ಯಕ್ರಮಗಳ ಹಿನ್ನೋಟ. ಪ್ರಸ್ತುತಿ: ಎನ್.ಕೇಶವಮೂರ್ತಿ ಹಾಗೂ ಆರ್. ಲೋಕೇಶ್ವರಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ–'ಹೊಸ ವರ್ಷ –ಹೊಸ ಹರ್ಷ' ಕುರಿತ ವಿಶೇಷ ಚಿತ್ರ ಚಿತ್ತಾರ ಕಾರ್ಯಕ್ರಮ. ಪ್ರಸ್ತುತ ಪಡಿಸುತ್ತಾರೆ ಮಂಡ್ಯ ಜಿಲ್ಲೆಯ ಚಿನಕುರಳಿಯ ಎಸ್.ಟಿ.ಜಿ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿನಿ ಶ್ರಾವಣಿ. ಜಿ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿ.ಎಂ.ಮಧುರನಾಥ್–ಕೊಳಲುವಾದನ, 10.00–ರೂಪಕ / ಚರ್ಚೆ / ನುಡಿಚಿತ್ರ, 10.30–ಸವಿನೆನಪು.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಸಂಜೆ 5.30ಕ್ಕೆ ಅಭಿನವ ವೀರಭದ್ರೇಶ್ವರ ತಂಡದ ವೀರಗಾಸೆ ಜನಪದ ನೃತ್ಯ, ಸಂಜೆ 6.15ಕ್ಕೆ ಸಮಾರೋಪ ಸಮಾರಂಭ, ಉಪಸ್ಥಿತರು : ಖ್ಯಾತ ಕವಿ ಎಸ್.ಜಿ.ಸಿದ್ದರಾಮಯ್ಯ, ರಂಗಕರ್ಮಿ ಮತ್ತು ಖ್ಯಾತ ಚಲನಚಿತ್ರ ನಟರಾದ ಪ್ರಕಾಶ್ ರಾಜ್, ನಿರಂತರದ ಸುಗುಣ, ಸಂಜೆ 7ಕ್ಕೆ ಭಳಿರೇ ವಿಚಿತ್ರಮ್ ತಂಡದಿಂದ 'ದಶಾನನ ಸ್ವಪ್ನ ಸಿದ್ಧಿ' ನಾಟಕ, ಸ್ಥಳ: ಕಿರುರಂಗ ಮಂದಿರ, ರಂಗಾಯಣ.

■ **ಕಲಾಸೌರಭ :** ಶ್ರೀ ವಾಲ್ಮೀಕಿ ರಾಮಾಯಣ ಕಥಾ ಮಾಲಿಕೆಯ ದ್ವಿತೀಯ ಮಾಲಿಕೆ, ಉಪನ್ಯಾಸ: ಶ್ರೀಮತಿ ಲಲಿತಾ ಶ್ರೀನಿವಾಸನ್, ಸ್ಥಳ: ಡಾ.ಚಿತ್ರ ಐಯ್ಯರ್, ಟಿ–3, ಸಂಭ್ರಮ ಅಪಾರ್ಟ್‌ಮೆಂಟ್, ವಿವಿ ಮೊಹಲ್ಲಾ.

ರೋಚಕ ಹಂತದಲ್ಲಿ ಬಾಕ್ಸಿಂಗ್ ಡೇ ಟೆಸ್ಟ್



ಮೆಲ್ಬೋರ್ನ್, ಡಿ.29– ಭಾರತ–ಆಸ್ಟ್ರೇಲಿಯಾ ನಡುವಿನ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯ ರೋಚಕ ಹಂತ ತಲುಪಿದೆ. 4ನೇ ದಿನದ ಕೊನೆ ಓವರ್‌ನಲ್ಲಿ ಜಸ್ಪ್ರೀತ್ ಬುಮ್ರಾ ಅವರ ನೋಬಾಲ್ ಎಡವಟ್ಟಿನಿಂದ 1 ವಿಕೆಟ್ ಉಳಿಸಿಕೊಂಡಿರುವ ಆಸೀಸ್ ತನ್ನ 2ನೇ ಇನ್ನಿಂಗ್ಸ್‌ನಲ್ಲಿ 82 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 228 ರನ್ ಗಳಿಸಿದ್ದು, 333 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿದೆ.

ದ್ವಿತೀಯ ಇನ್ನಿಂಗ್ಸ್ ಆರಂಭದಲ್ಲೇ ಉರಿ ಚೆಂಡಿನ ದಾಳಿ ನಡೆಸಿ ಅಗ್ರ ಬ್ಯಾಟ್ಸ್‌ಮನ್‌ಗಳನ್ನು ಪೆವಿಲಿಯನ್‌ಗಟ್ಟಿದ ಬುಮ್ರಾ ದಿನದ ಕೊನೆ ಓವರ್‌ನ 4ನೇ ಎಸೆತದಲ್ಲಿ ವಿಕೆಟ್ ಕಿತ್ತು ಆಲೌಟ್ ಮಾಡಿದ್ದರು. ಆದರೆ ಅದು ನೋಬಾಲ್ ಆದ ಪರಿಣಾಮ ಆಲೌಟ್‌ನಿಂದ ಆಸೀಸ್ ಪಾರಾಯಿತು. ಹೀಗಾಗಿ ಕೊನೆ ದಿನ ಆಸೀಸ್ ವಿರುದ್ಧ ಗೆಲ್ಲುವುದು ಕಠಿಣ ಸವಾಲಿನ ಕೆಲಸವಾಗಿದೆ. ಈ ಪಂದ್ಯದ ಗೆಲುವಿನ ಮೇಲೆ ಭಾರತ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಅರ್ಹತೆ ಪಡೆಯಲಿದೆಯೇ ಇಲ್ಲವೇ ಎಂಬುದು ನಿರ್ಧಾರವಾಗಲಿದೆ.

3ನೇ ದಿನದ ಅಂತ್ಯಕ್ಕೆ 9 ವಿಕೆಟ್ ನಷ್ಟಕ್ಕೆ 358 ರನ್ ಗಳಿಸಿದ್ದ ಭಾರತ 4ನೇ ದಿನದ ಆರಂಭದಲ್ಲಿ 11 ರನ್ ಗಳಿಸುವಷ್ಟರಲ್ಲಿ ಕೊನೆ ವಿಕೆಟ್ ಕಳೆದುಕೊಂಡು, 369 ರನ್‌ಗಳಿಗೆ ಆಲೌಟ್ ಆಯಿತು. ಬಳಿಕ 2ನೇ ಇನ್ನಿಂಗ್ಸ್ ಆರಂಭಿಸಿದ ಆಸೀಸ್ 91 ರನ್‌ಗಳಿಗೆ ಪ್ರಮುಖ 6 ವಿಕೆಟ್ ಕಳೆದುಕೊಂಡಿತ್ತು. ಈ ನಡುವೆ ನಾಯಕ ಪ್ಯಾಟ್ ಕಮ್ಮಿನ್ಸ್, ಮಾರ್ನಸ್ ಲಾಬುಶೇನ್ ಹಾಗೂ ಮುರಿಯದ ಕೊನೆ ವಿಕೆಟ್‌ಗೆ ನಥಾನ್ ಲಿಯಾನ್– ಸ್ಕಾಟ್ ಬೊಲ್ಯಾಂಡ್ ಅವರ ಅರ್ಧಶತಕಗಳ ಜೊತೆಯಾಟ ತಂಡಕ್ಕೆ ಶಕ್ತಿ ತುಂಬಿತು. ಅಂತಿಮವಾಗಿ ಆಸೀಸ್ ಪರ ಮಾರ್ನಸ್ ಲಾಬುಶೇನ್ 70, ಪ್ಯಾಟ್ ಕಮ್ಮಿನ್ಸ್ 41, ಉಸ್ಮಾನ್ ಖವಾಜ 21, ಸ್ಯಾಮ್ ಕಾನ್‌ಸ್ಟಾಸ್ 8, ಟ್ರಾವಿಸ್ ಹೆಡ್ 1, ಅಲೆಕ್ಸ್ ಕ್ಯಾರಿ 2 ರನ್ ಗಳಿಸಿದರೆ ಮಿಚೆಲ್ ಮಾರ್ಷ್ ಶೂನ್ಯ ಸುತ್ತಿದರು. ನಥಾನ್ ಲಿಯಾನ್ 41, ಸ್ಕಾಟ್ ಬೊಲ್ಯಾಂಡ್ 10 ರನ್ ಗಳಿಸಿ 5ನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ. ಭಾರತದ ಪರ ಬುಮ್ರಾ 4, ಮೊಹಮ್ಮದ್ ಸಿರಾಜ್ 3 ಹಾಗೂ ರವೀಂದ್ರ ಜಡೇಜಾ 1 ವಿಕೆಟ್ ಪಡೆದು ಮಿಂಚಿದರು.

ಸಮಾಜದಿಂದ ದ್ವೇಷ ತೊಲಗಿಸುವುದು ಮಹಾ ಕುಂಭಮೇಳದ ಸಂದೇಶ

ಮನ್ ಕೀ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ

ನವದೆಹಲಿ, ಡಿ.29– ಮುಂಬರುವ 'ಮಹಾ ಕುಂಭಮೇಳ'ವನ್ನು ಏಕತೆಯ ಮಹಾಕುಂಭ ಎಂದು ಬಣ್ಣಿಸಿದ ಪ್ರಧಾನಿ ನರೇಂದ್ರ ಮೋದಿ, ಸಮಾಜದಿಂದ ದ್ವೇಷ ಮತ್ತು ವಿಭಜನೆಯನ್ನು ತೊಡೆದು ಹಾಕುವ ಸಂಕಲ್ಪದೊಂದಿಗೆ ಭವ್ಯವಾದ ಧಾರ್ಮಿಕ ಸಭೆಯಿಂದ ಹಿಂತಿರುಗಿ ಎಂದು ಜನರಿಗೆ ಭಾನುವಾರ ಮನವಿ ಮಾಡಿದ್ದಾರೆ.



ತಮ್ಮ ಮಾಸಿಕ ಮನ್ ಕೀ ಬಾತ್ ರೇಡಿಯೋ ಕಾರ್ಯಕ್ರಮದ 117ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, 'ಮಹಾಕುಂಭ್ ಕಾ ಸಂದೇಶ್ ಏಕ್ ಹೋ ಪೂರಾ ದೇಶ್ (ಇಡೀ ದೇಶವನ್ನು ಒಗ್ಗೂಡಿಸುವುದು ಮಹಾ ಕುಂಭದ ಸಂದೇಶ ಆಗಿರುಬೇಕು)'. ಜ.13 ರಿಂದ ಪ್ರಯಾಗ್‌ರಾಜ್‌ನಲ್ಲಿ ನಡೆಯಲಿರುವ ಕುಂಭಮೇಳಕ್ಕೆ ಭೇಟಿ ನೀಡುವ ವಿವಿಧ ಜನರನ್ನು ಉಲ್ಲೇಖಿಸಿದ ಅವರು, ವಿವಿಧತೆಯಲ್ಲಿ ಏಕತೆಯನ್ನು ಸಾರುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಇಲ್ಲ ಎಂದು ಹೇಳಿದರು.

ಪ್ರತಿ 12 ವರ್ಷಗಳಿಗೊಮ್ಮೆ ಬೃಹತ್ ಧಾರ್ಮಿಕ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಮುಂದಿನ ಗಣರಾಜ್ಯೋತ್ಸವವು ಸಂವಿಧಾನದ ಅನುಷ್ಠಾನದ 75ನೇ ವಾರ್ಷಿಕೋತ್ಸವ ಆಗಿದೆ. ಇದು ದೇಶವಾಸಿಗಳಿಗೆ ಹೆಮ್ಮೆಯ ವಿಷಯವಾಗಿದೆ. ಸಂವಿಧಾನವು ಪ್ರತಿಯೊಂದು ಕಾಲಘಟ್ಟದಲ್ಲೂ ನಿಂತಿದೆ. ಇದು ನಮ್ಮ ಪಾಲಿಗೆ ಮಾರ್ಗದರ್ಶನ ನೀಡುವ ಬೆಳಕಾಗಿದೆ. ಸಂವಿಧಾನದಿಂದಲೇ ತಾನು ಇಂದು ಈ ಸ್ಥಾನಕ್ಕೆ ತಲುಪಲು ಸಾಧ್ಯವಾಯಿತು ಎಂದಿದ್ದಾರೆ.

ಜನರನ್ನು ಸಂವಿಧಾನದ ನಿಬಂಧನೆಗಳು ಮತ್ತು ಆತ್ಮದೊಂದಿಗೆ ಸಂಪರ್ಕಿಸಲು constitution75.com ಎಂಬ ವೆಬ್‌ಸೈಟ್ ಅನ್ನು ಪ್ರಾರಂಭಿಸಲಾಗಿದೆ ಎಂದರು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂವಿಧಾನವನ್ನು ದುರ್ಬಲಗೊಳಿಸುತ್ತಿದೆ ಎಂಬ ವಿರೋಧ ಪಕ್ಷಗಳ ಆರೋಪವನ್ನು ತಳ್ಳಿಹಾಕಿದರು.

ಸಾಂವಿಧಾನಿಕ ಮೌಲ್ಯಗಳು ಮತ್ತು ಚೈತನ್ಯವನ್ನು ಬಲಪಡಿಸುವ ತಮ್ಮ ಸರ್ಕಾರದ ಪ್ರಯತ್ನಗಳನ್ನು ನಿರಂತರವಾಗಿವೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ದೇಶದ ಮಾರ್ಗದರ್ಶಿ ದಾಖಲೆಯನ್ನೇ ಬುಡಮೇಲು ಮಾಡಿದ್ದರು ಎಂದು ಆರೋಪಿಸಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಚಿನ್ ನಿವಾಸಕ್ಕೆ ಬಿಜೆಪಿ ನಿಯೋಗ ಭೇಟಿ

ಸಿಬಿಐ ತನಿಖೆಗೆ ಕುಟುಂಬಸ್ಥರ ಒತ್ತಾಯ



ಬೀದರ್, ಡಿ.29– ಆತ್ಮಹತ್ಯೆಗೆ ಶರಣಾಗಿರುವ ಅಮಾಯಕ ಗುತ್ತಿಗೆದಾರ ಸಚಿನ್ ಅವರ ನಿವಾಸಕ್ಕೆ ಭಾನುವಾರ ತೆರಳಿದ ಬಿಜೆಪಿ ನಿಯೋಗ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿತು. ಭಾಲ್ಕಿ ತಾಲೂಕಿನ ಕಟ್ಟಿತೊಗಾಂವ್ ಗ್ರಾಮದಲ್ಲಿರುವ ಸಚಿನ್ ಪಾಂಚಾಳ್ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಪರಿಷತ್ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಶಾಸಕರು ಮತ್ತು ಮುಖಂಡರು ಭೇಟಿ ನೀಡಿ, ಸಚಿನ್ ಆತ್ಮಹತ್ಯೆ ಬಗ್ಗೆ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಕುಟುಂಬಸ್ಥರು, ಪೊಲೀಸರು ಸ್ವಲ್ಪ ಹೆಲ್ಪ್ ಮಾಡಿದ್ದರೆ ಸಚಿನ್ ಜೀವ ಉಳಿಯುತ್ತಿತ್ತು ಅಮುತುಬಾ ಕ್ರೂರಿಗಳು. ಆರೋಪಿಗಳ ಪರವಾಗಿ, ಅನ್ಯಾಯದ, ಕೊಲೆಗಡುಕರ ಪರವಾಗಿ ನಿಂತಿದ್ದಾರೆ. ನಮ್ಮ ಅಣ್ಣನ ಬಾಡಿ ಮೇಲೆ ಎರಡು ಮೂರು ಟ್ರೈನ್ ಓಡಾಡಿವೆ. ನಮಗೆ ಈ ಪೊಲೀಸರ ಮೇಲೆ ನಂಬಿಕೆ, ಭರವಸೆ ಇಲ್ಲ. ಈ ಪೊಲೀಸರು ತನಿಖೆ ಮಾಡುವುದರಿಂದ ನಮ್ಮಣ್ಣನ ಸಾವಿಗೆ ನ್ಯಾಯ ಸಿಗುತ್ತದೆ ಅನ್ನುವ ಯಾವ ಭರವಸೆ ಇಲ್ಲ. ಪ್ರಕರಣವನ್ನು ಸಿಬಿಐಗೆ ಕೊಡಿ ಎಂದು ಬಿಜೆಪಿ ನಿಯೋಗವನ್ನು ಒತ್ತಾಯಿಸಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ ಅವರ ದುಷ್ಟ ಕೂಟದ ಸದಸ್ಯರ ಕಿರುಕುಳ, ಬೆದರಿಕೆಗಳನ್ನು ಸಹಿಸಲಾಗದೇ ಆತ್ಮಹತ್ಯೆ ಮಾಡಿಕೊಂಡ ಸಚಿನ್ ಸಾವಿನಿಂದ ದಿಜ್ಮೂಢ ಸ್ಥಿತಿಯಲ್ಲಿರುವ ಕುಟುಂಬದ ಸ್ಥಿತಿ ಮಾನವೀಯತೆ ಇರುವ ಎಂಥವರ ಅಂತಃಕರಣವನ್ನೂ ಕಲಕುತ್ತದೆ. ಅನಾಥ ಪ್ರಜ್ಞೆ ಎದುರಿಸುತ್ತಿರುವ ಮೃತರ ಆಶ್ರಯಿಸಿದ್ದ ಕುಟುಂಬ ಸದಸ್ಯರ ಹಾಗೂ ಬಂಧುಗಳ ಆಕ್ರಂದನದ ಶಾಪ ಕಾಂಗ್ರೆಸ್ ಸರ್ಕಾರವನ್ನು ತಟ್ಟದೇ ಬಿಡದು. ದುಷ್ಕರ್ಮಿಗಳ ಗುಂಪನ್ನು ಪೋಷಿಸುತ್ತಿರುವ ಪ್ರಿಯಾಂಕ್ ಖರ್ಗೆ ಇದರ ಫಲ ಅನುಭವಿಸಲೇಬೇಕು. ಸಚಿನ್ ಕುಟುಂಬಕ್ಕೆ ನ್ಯಾಯ ಸಿಗುವವರೆಗೆ ಬಿಜೆಪಿ ಹೋರಾಟ ಮುಂದುವರೆಸಲಿದೆ ಎಂದು ವಿಜಯೇಂದ್ರ ಹೇಳಿದ್ದಾರೆ.

ವಿರೋಧ ಪಕ್ಷದಲ್ಲಿದ್ದಾಗ ಇಂಥದ್ದೇ ಪ್ರಕರಣಗಳಲ್ಲಿ ಅಧಿಕಾರದಲ್ಲಿದ್ದವರ ರಾಜೀನಾಮೆಗೆ ಆರ್ಭಟಿಸುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮದೇ ಸರ್ಕಾರದ ಅವಧಿಯಲ್ಲಿ ನಡೆದಿರುವ ಘಟನೆಯ ಹಿನ್ನೆಲೆಯಲ್ಲಿ ಈ ಕೂಡಲೇ ದುಷ್ಟರು, ಪುಂಡರು, ಕಮಿಷನ್ ವಸೂಲಿಗಾರರನ್ನು ಜೊತೆಗಿಟ್ಟುಕೊಂಡು ಒಬ್ಬ ಅಮಾಯಕ ಗುತ್ತಿಗೆದಾರನ ಆತ್ಮಹತ್ಯೆಗೆ ಕಾರಣರಾಗಿರುವ ಪ್ರಿಯಾಂಕ್ ಖರ್ಗೆ ಅವರ ರಾಜೀನಾಮೆ ಪಡೆದುಕೊಂಡು ತನಿಖೆಯು ಪಾರದರ್ಶಕವಾಗಿ ನಡೆಯಲು ಅವಕಾಶ ಮಾಡಿಕೊಡಲಿ ಎಂದು ಒತ್ತಾಯಿಸಿದ್ದಾರೆ.

ಸಮಾಜದಲ್ಲಿ ನ್ಯಾಯ ಇದೆಯೇ ಎಂಬುದರ ಬಗ್ಗೆ ಚರ್ಚೆ ಅಗತ್ಯ

ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಂಗ್ರೇಶಿ ಅಭಿಮತ



'ಸಮಕಾಲೀನ ಯುಗದಲ್ಲಿ ಸಾಮಾಜಿಕ ನ್ಯಾಯದ ಬದಲಾದ ಮಜಲುಗಳು' ವಿಚಾರ ಸಂಕಿರಣದ ರಾಷ್ಟ್ರೀಯ ಕಾರ್ಯಾಗಾರದ ಸಮಾರೋಪದಲ್ಲಿ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ, ಗದಗದ ಕೆಎಸ್‌ಆರ್‌ಡಿಪಿಆರ್ ವಿಶ್ವವಿದ್ಯಾನಿಲಯದ ಉಪಕುಲಪತಿ(ಕಾರ್ಯ ನಿರ್ವಹಣೆ) ಪ್ರೊ.ಸುರೇಶ್ ವಿ.ನಾಡಗೌಡರ್, ಕರ್ನಾಟಕ ರಾಜ್ಯ ಕಾನೂನು ವಿವಿ ಉಪಕುಲಪತಿ ಪ್ರೊ.ಸಿ.ಬಸವರಾಜು ಉಪಸ್ಥಿತರಿದ್ದರು.

ಮೈಸೂರು,ಡಿ.29(ಎಸ್‌ಪಿಎನ್)– ಸಾಮಾಜಿಕ ತಳಹದಿಯ ಮೇಲೆ ನಮ್ಮ ದೇಶದ ಭವಿಷ್ಯ ಅಡಕವಾಗಿದೆ. ಸಮಾಜದಲ್ಲಿ ನ್ಯಾಯ ಇದೆಯೋ ಅಥವಾ ಇನ್ನೂ ಸುಧಾರಣೆ ಆಗಬೇಕೇ ಎಂಬುದರ ಕುರಿತು ಮತ್ತಷ್ಟು ಚರ್ಚೆ ಅಗತ್ಯ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ ಅಭಿಪ್ರಾಯಪಟ್ಟರು.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಕಾಲೇಜಿನಲ್ಲಿ ಹುಬ್ಬಳ್ಳಿ ಕಾನೂನು ವಿಶ್ವವಿದ್ಯಾನಿಲಯದ ನೆರವಿನೊಂದಿಗೆ ಏರ್ಪಡಿಸಿದ್ದ 'ಸಮಕಾಲೀನ ಯುಗದಲ್ಲಿ ಸಾಮಾಜಿಕ ನ್ಯಾಯದ ಬದಲಾದ ಮಜಲುಗಳು' ವಿಚಾರ ಸಂಕಿರಣದ ರಾಷ್ಟ್ರೀಯ ಕಾರ್ಯಾಗಾರದ ಸಮಾರೋಪದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭಾರತದಲ್ಲಿ ನಮ್ಮ ಹಕ್ಕುಗಳನ್ನು ಕೇಳುವುದರ ಜತೆಗೆ ಜಗತ್ತಿನ ಸಾಮಾಜಿಕ ನ್ಯಾಯಯುತ ಬೇಡಿಕೆಗಳಿಗೂ ದನಿಯಾಗುತ್ತಿದ್ದೇವೆ. ಕೇವಲ ಜಾತಿ, ಧರ್ಮದ ಆಧಾರದ ಮೇಲೆ ನ್ಯಾಯದಾನ ದೊರಕುವುದಿಲ್ಲ. ನ್ಯಾಯದಾನದಲ್ಲಿ ಸಾಮಾಜಿಕ ತಾರತಮ್ಯ ಮಾಡದೇ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು, ಸಾಮಾಜಿಕ ಕಳಕಳಿ ಇದ್ದಾಗ ಮಾತ್ರ ನ್ಯಾಯದಾನ ಸಮರ್ಪಕ ಬಳಕೆಯಾಗಲು ಸಾಧ್ಯವಿದೆ ಎಂದು ಒತ್ತಿ ಹೇಳಿದರು.

ಗದಗದ ಕೆಎಸ್‌ಆರ್‌ಡಿಪಿಆರ್ ವಿಶ್ವವಿದ್ಯಾನಿಲಯದ ಉಪಕುಲಪತಿ(ಕಾರ್ಯ ನಿರ್ವಹಣೆ) ಪ್ರೊ.ಸುರೇಶ್ ವಿ.ನಾಡಗೌಡರ್ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಶ್ರೀಮಂತ ಮತ್ತು ಬಡವರ ನಡುವಿನ ತಾರತಮ್ಯ ಹೆಚ್ಚಾಗುತ್ತಿದೆ. ಈ ನ್ಯಾಯವನ್ನು ಸರಿದೂಗಿಸಲು ಮಧ್ಯಮ ವರ್ಗದ ಜನರಿಗೆ ಸಂಪತ್ತಿನ ಹಂಚಿಕೆ ವಿಚಾರದಲ್ಲಿ ಸಮಾನ ಅವಕಾಶ ಸಿಗಬೇಕು. ಈ ಕುರಿತು ವ್ಯಾಪಕ ಚರ್ಚೆ ಆಗಬೇಕು ಎಂದರಲ್ಲದೆ, ಎಲ್ಲಾ ವರ್ಗದ ಜನರಿಗೂ ತ್ವರಿತಗತಿಯಲ್ಲಿ ನ್ಯಾಯ ಸಿಗುವಂತಾಗಲು ಜಿಲ್ಲಾ ಹಂತ ನ್ಯಾಯಾಲಯಗಳಿಗೆ ಹೆಚ್ಚಿನ ಅಧಿಕಾರ ನೀಡುವುದು. ಗ್ರಾಮ ನ್ಯಾಯಾಲಯ ಸ್ಥಾಪನೆ, ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯದ ಇತ್ಯಾದಿ ವಿಚಾರಗಳ ಬಗ್ಗೆ ವ್ಯಾಪಕ ಚರ್ಚೆಯಾಗಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಕಾನೂನು ವಿವಿ ಉಪಕುಲಪತಿ ಪ್ರೊ.ಸಿ.ಬಸವರಾಜು ಮಾತನಾಡಿ, ಸರ್ಕಾರದಿಂದ ದೊರೆಯುವ ಮೂಲ ಸೌಕರ್ಯವನ್ನು ಸಾರ್ವಜನಿಕರಿಗೆ ಸಮಾನವಾಗಿ ಹಂಚಬೇಕು. ಪ್ರಸ್ತುತ ಜಗತ್ತಿನಲ್ಲಿ ನಾವು ಒಂದು ಕಡೆ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಿದರೆ, ಮತ್ತೊಂದೆಡೆ ತಾರತಮ್ಯದ ಬಗ್ಗೆ ಚರ್ಚೆಗಳು ಹೆಚ್ಚಾಗುತ್ತವೆ ಎಂದರು.

ಈ ವೇಳೆ ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕವೀಶ್‌ಗೌಡ, ವಿದ್ಯಾವರ್ಧಕ ಕಾನೂನು ಕಾಲೇಜು ನಿರ್ವಹಣಾ ಸಮಿತಿಯ ಶಿವಲಿಂಗಯ್ಯ ಮಾತನಾಡಿದರು. ಈ ವೇಳೆ ಶಾರದಾ ವಿಲಾಸ ಕಾನೂನು ಕಾಲೇಜು ನರಸಿಂಹ, ವಿದ್ಯಾವಿಕಾಸ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ರಾಜೇಶ್ವರಿ ಹೆಗ್ಡೆ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕಿ ಭವ್ಯ ವಂದಿಸಿದರು. ವಿದ್ಯಾರ್ಥಿನಿ ಸ್ನೇಹ ಪ್ರಾರ್ಥಿಸಿದರು. ಈ ವೇಳೆ ಕಾನೂನು ಕಾಲೇಜಿನ ಪ್ರಾಧ್ಯಾಪಕರು, ಪ್ರಾಧ್ಯಾಪಕರನ್ನು ಸನ್ಮಾನಿಸಲಾಯಿತು.

ದಾರ್ಶನಿಕರ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಮಹಾತ್ಮಗಾಂಧೀಜಿ ತಂಡಕ್ಕೆ ಬಹುಮಾನ



ದಾರ್ಶನಿಕರ ಚಿಂತನಾ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು,ಡಿ.29(ಎಸ್‌ಪಿಎನ್)– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ ಹಾಗೂ ಯುವ ಘಟಕದ ಸಹಯೋಗದೊಂದಿಗೆ ಆಯೋಜಿಸಿದ್ದ ದಾರ್ಶನಿಕರ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನಗಳಿಸಿದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಮಹಾತ್ಮ ಗಾಂಧೀಜಿ ತಂಡದ ಬಹುಮಾನ ವಿತರಿಸಲಾಯಿತು.

ಜೆಪಿ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಭಾಂಗಣದಲ್ಲಿ ನಡೆದ ದತ್ತಿ ಕಾರ್ಯಕ್ರಮ ಹಾಗೂ ದಾರ್ಶನಿಕರ ಚಿಂತನಾ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮದಲ್ಲಿ ವಿಜೇತರಾದವರಿಗೆ ಪತ್ರಿಕೋದ್ಯಮಿ ರಶ್ಮಿಕೋಟಿ ಬಹುಮಾನ ವಿತರಿಸಿದರು.

ದಾರ್ಶನಿಕರ ರಸಪ್ರಶ್ನೆ ಸ್ಪರ್ಧೆಯಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಮಹಾತ್ಮ ಗಾಂಧೀಜಿ ತಂಡದ ಶ್ರಾವ್ಯ ಮತ್ತು ಚೈತನ್ಯ ಮಹೇಶ್ ತಂಡ 65 ಅಂಕಗಳಿಸಿ ಪ್ರಥಮ ಸ್ಥಾನಗಳಿಸಿ ಬಹುಮಾನ ಪಡೆದರು. 50.5 ಅಂಕ ಗಳಿಸಿದ ಗ್ರೀಷ್ಮ ಮತ್ತು ಸೃಜನ್ (ಅಲ್ಲಮ ಪ್ರಭು ತಂಡ) ದ್ವಿತೀಯ, 50 ಅಂಕ ಗಳಿಸಿದ ಮೋಕ್ಷಿತಾ ಮತ್ತು ದೀಕ್ಷಾಶ್ರೀ (ಅಕ್ಕಮಹಾದೇವಿ ತಂಡ) ತೃತೀಯ ಸ್ಥಾನ ಗಳಿಸಿ ಬಹುಮಾನ ಪಡೆದರು.

ನಂತರ ಮಾತನಾಡಿದ ಪತ್ರಿಕೋದ್ಯಮಿ ರಶ್ಮಿ ಕೋಟಿ, ದಾರ್ಶನಿಕರು ಬೋಧಿಸಿದ್ದ ತತ್ವಗಳು ಎಲ್ಲಾ ಕಾಲಕ್ಕೂ ಪ್ರಸ್ತುತ. ಅವರ ಚಿಂತನೆಗಳು ನಮ್ಮನ್ನು ಪ್ರಜ್ಞಾವಂತರಾಗಿಸಲು ಮಾರ್ಗ ದರ್ಶನವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಜೆ.ಪಿ.ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಕೆ.ಸ್ಮಿತಾ ಕುರುಪ್, ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಅಧ್ಯಕ್ಷತೆ ವಹಿಸಿದ್ದರು. ದತ್ತಿ ದಾನಿ ಎಸ್.ಜೀವಾರಳ್ಳಿ ಪುಟ್ಟರಾಜಪ್ಪ, ಶರಣ ಸಾಹಿತ್ಯ ಪರಿಷತ್ತಿನ ಯುವ ಘಟಕದ ಸಂಚಾಲಕ ಚಂಚಲಸ್ವಾಮಿ ಇತರರು ಹಾಜರಿದ್ದರು. ಕೃತಿಕ ಮತ್ತು ದೃತಿ ಪ್ರಾರ್ಥಿಸಿದರು. ಲೇಖನ ಸ್ವಾಗತಿಸಿದರು. ಕೆ.ಪೂಜಾ ಮತ್ತು ಜಿ.ಪುಷ್ಪ ಅವರು ರಸಪ್ರಶ್ನೆ ನಡೆಸಿಕೊಟ್ಟರು.

ಎಚ್‌ಬಿಒ ಸಂಸ್ಥಾಪಕ ಚಾರ್ಲ್ಸ್ ಡೋಲನ್ ನಿಧನ

ನವದೆಹಲಿ, ಡಿ. 29– ಎಚ್‌ಬಿಒ ಮತ್ತು ಕೇಬಲ್ ವಿಷನ್‌ನ ಸಂಸ್ಥಾಪಕ ಚಾರ್ಲ್ಸ್ ಡೋಲನ್ ಅವರು 98ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.



ಡೋಲನ್ ಅವರ ವೃತ್ತಿ ಜೀವನವು ವಿಂಡೋಸ್‌ನೊಂದಿಗೆ 1952ರಲ್ಲಿ ಪ್ರಾರಂಭವಾಗಿದೆ, ಆಗ ಅವರು ಕೇವಲ 26 ವರ್ಷ ವಯಸ್ಸಿನವರಾಗಿದ್ದರು. ಅವರು 1962ರಲ್ಲಿ ಸ್ಟರ್ಲಿಂಗ್ ಮ್ಯಾನ್‌ಹ್ಯಾಟನ್ ಕೇಬಲ್ ಸ್ಥಾಪಿಸಿದ್ದಾರೆ, ಇದು ನಿಕ್ಸ್ ಮತ್ತು ರೇಂಜರ್ಸ್ ಸೇರಿದಂತೆ ಯುಎಸ್ ಮೂಲದ ಪರ ಕ್ರೀಡಾ ತಂಡಗಳೊಂದಿಗೆ ವಿಶೇಷ ಒಪ್ಪಂದಗಳನ್ನು ಹೊಂದಿದೆ. ಏರ್ ಫೋರ್ಸ್ ಅನುಭವಿ 1972 ರಲ್ಲಿ ಹೋಮ್ ಬಾಕ್ಸ್ ಆಫೀಸ್ ಸ್ಥಾಪಿಸಿದ್ದಾರೆ. ಇದನ್ನು ಈಗ ಸಾಮಾನ್ಯವಾಗಿ ಎಚ್‌ಬಿಒ ಎಂದು ಕರೆಯಲಾಗುತ್ತದೆ.

ಎಚ್‌ಬಿಒ, ಕೇಬಲ್ ವಿಷನ್ ಮತ್ತು ಮೊದಲ 24–ಗಂಟೆಗಳ ಸ್ಥಳೀಯ ಸುದ್ದಿ ವಾಹಿನಿ, ನ್ಯೂಸ್ 12 ಪ್ರಾರಂಭಿಸುವಲ್ಲಿ ಡೋಲನ್ ಪ್ರಮುಖ ಪಾತ್ರ ವಹಿಸಿದ್ದರು ಮತ್ತು ಪ್ರಮುಖ ಕ್ರೀಡಾ ತಂಡಗಳಲ್ಲಿ ಪಾಲನ್ನು ಹೊಂದಿದ್ದಾರೆ.

ನ್ಯೂಯಾರ್ಕ್‌ನ ಲಾಂಗ್ ಐಲ್ಯಾಂಡ್‌ನಲ್ಲಿರುವ ಕೋವ್ ನೆಕ್ ವಿಲೇಜ್‌ನಲ್ಲಿರುವ ಡೋಲನ್ ಅವರ ಪ್ರಾಥಮಿಕ ಮನೆಯಾಗಿದ್ದು, ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್, ರೇಡಿಯೋ ಸಿಟಿ ಮ್ಯೂಸಿಕ್ ಹಾಲ್, ನ್ಯೂಯಾರ್ಕ್ ನಿಕ್ಸ್ ಮತ್ತು ನ್ಯೂಯಾರ್ಕ್ ರೇಂಜರ್ಸ್ ಮಾಲೀಕತ್ವದ ಕಂಪನಿಗಳಲ್ಲಿ ನಿಯಂತ್ರಣದ ಪಾಲನ್ನು ಹೊಂದಿದ್ದಾರೆ ಎನ್ನಲಾಗಿದೆ.

ಡೋಲನ್ ಆರು ಮಕ್ಕಳು, 19 ಮೊಮ್ಮಕ್ಕಳು ಮತ್ತು ಐದು ಮೊಮ್ಮಕ್ಕಳನ್ನು ಅಗಲಿದ್ದಾರೆ. ಅವರ ಪತ್ನಿ ಹೆಲೆನ್ ಆನ್ ಡೋಲನ್ 2023 ರಲ್ಲಿ ನಿಧನರಾಗಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ...



ಮೈಸೂರಿನ ತೊಣಚಿಕೊಪ್ಪಲಿನಲ್ಲಿರುವ ಶ್ರೀ ಕನಕ ಕಾಗಿನೆಲೆ ಗೃಹ ನಿರ್ಮಾಣ ಸಹಕಾರ ಸಂಘದ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಸಿದ್ದಯ್ಯ ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಉಮಾಶಂಕರ್, ಹೇಮಣ್ಣ, ಪುಟ್ಟಮ್ಮ, ವಾಸು, ನಾಗರಾಜು, ಕುಮಾರ್, ಕಾರ್ಯದರ್ಶಿ ವಿನೋದ್ ಮತ್ತಿತರರು ಉಪಸ್ಥಿತರಿದ್ದರು.

ಹೊಸ ವರ್ಷಾಚರಣೆ ವಿರುದ್ಧ ಫತ್ವಾ ಹೊರಡಿಸಿದ ಮುಸ್ಲಿಂ ಸಂಘಟನೆ!

ನವದೆಹಲಿ: ಹೊಸ ವರ್ಷಾಚರಣೆಗೆ ದೇಶಾದ್ಯಂತ ಭರ್ಜರಿ ತಯಾರಿ ನಡೆಯುತ್ತಿರುವಂತೆಯೇ, ಅಖಿಲ ಭಾರತ ಮುಸ್ಲಿಂ ಜಮಾತ್‌ನ ರಾಷ್ಟ್ರೀಯ ಅಧ್ಯಕ್ಷ ಮೌಲಾನಾ ಶಹಾಬುದ್ದೀನ್ ರಜ್ವಿ ಬರೇಲ್ವಿ ಭಾನುವಾರ ಹೊಸ ವರ್ಷಾಚರಣೆಯ ವಿರುದ್ಧ ಫತ್ವಾ ಹೊರಡಿಸಿದ್ದು, ಮುಸ್ಲಿಮರು ಅದನ್ನು ಆಚರಿಸದಂತೆ ತಿಳಿಸಿದ್ದಾರೆ. ಬದಲಿಗೆ ಅವರ ನಂಬಿಕೆಗೆ ಹೊಂದಿಕೆಯಾಗುವ ಧಾರ್ಮಿಕ ಆಚರಣೆಗಳತ್ತ ಗಮನ ಹರಿಸುವಂತೆ ಒತ್ತಾಯಿಸಿದ್ದಾರೆ.



ಚಶ್ಮೆ ದರ್ಫ್ತಾ ಬರೇಲಿ ಅವರು ಈ ಫತ್ವಾ ಹೊರಡಿಸಿದ್ದು, ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮುಸ್ಲಿಂ ಯುವಕರು ಮತ್ತು ಯುವತಿಯರು ಪಾಲ್ಗೊಳ್ಳಬಾರದು ಎಂದು ರಜ್ವಿ ಬರೇಲ್ವಿ ಹೇಳಿದ್ದಾರೆ. ಹೊಸ ವರ್ಷ ಆಚರಿಸುವುದು ಹೆಮ್ಮೆಯ ವಿಷಯವಲ್ಲ. ಇದನ್ನು ಆಚರಿಸಬಾರದು ಅಥವಾ ಅಭಿನಂದಿಸಬಾರದು ಎಂದು ಹೊಸ ವರ್ಷ ಆಚರಿಸುವ ಯುವಕ– ಯುವತಿಯರಿಗೆ ಫತ್ವಾದಲ್ಲಿ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹೊಸ ವರ್ಷ ಕ್ರಿಶ್ಚಿಯನ್ ಕ್ಯಾಲೆಂಡರ್ ಆರಂಭ' ಅಥವಾ ಇಂಗ್ಲೀಷರ ವರ್ಷವಾಗಿದೆ ಎಂದು ಪ್ರತಿಪಾದಿಸಿರುವ ರಜ್ವಿ ಬರೇಲ್ವಿ, ಅಂತಹ ಧಾರ್ಮಿಕೇತರ ಆಚರಣೆಗಳನ್ನು ಮುಸ್ಲಿಮರಿಗೆ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಹೇಳಿದ್ದಾರೆ. ಮುಸ್ಲಿಂ ಯುವಕ–ಯುವತಿಯರು ಹೊಸ ವರ್ಷದ ಆಚರಣೆಗಳಲ್ಲಿ ಪಾಲ್ಗೊಳ್ಳುವ ಬದಲಿಗೆ ತಮ್ಮ ನಂಬಿಕೆಗೆ ಹೊಂದಿಕೆಯಾಗುವ ಧಾರ್ಮಿಕ ಆಚರಣೆಗಳತ್ತ ಗಮನ ಹರಿಸಬೇಕು ಎಂದು ನಿರ್ದೇಶಿಸಿದ್ದಾರೆ.

ಕೆಎಎಸ್ ಪರೀಕ್ಷೆಯಲ್ಲಿ ಮತ್ತೆ ಎಡವಟ್ಟು: ನೋಂದಣಿ–ಓಎಂಆರ್ ಶೀಟ್ ನಂಬರ್ ಅದಲು ಬದಲು

ವಿಜಯಪುರ, ಡಿ. 29– ಕರ್ನಾಟಕದಾದ್ಯಂತ ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುತ್ತಿದ್ದ ಕೆಎಎಸ್ ಶ್ರೇಣಿಯ ಗ್ರೂಪ್ ಎ ಹಾಗೂ ಗ್ರೂಪ್ ಬಿ ಹುದ್ದೆಗಳಿಗೆ ಇಂದು ನಡೆಸಲಾಗುತ್ತಿದ್ದ ಪರೀಕ್ಷೆಯಲ್ಲಿ ದೊಡ್ಡ ಎಡವಟ್ಟು ಉಂಟಾಗಿದೆ. ಓಎಂಆರ್ ಶೀಟ್‌ನಲ್ಲಿ ನೊಂದಣಿ ಸಂಖ್ಯೆ ಅದಲು ಬದಲು ಆರೋಪ ಕೇಳಿಬಂದಿದ್ದು, ಪರೀಕ್ಷೆ ಬರೆಯದೆ ಪರೀಕ್ಷಾರ್ಥಿಗಳು ಹೊರ ಬಂದಿದ್ದಾರೆ. ಈಗಾಗಲೇ ಪ್ರಶ್ನೆ ಪತ್ರಿಕೆಯಲ್ಲಿ ಎಡವಟ್ಟು ಆಗಿದ್ದರಿಂದ ಕೆಪಿಎಸ್‌ಸಿ ಮತ್ತೊಮ್ಮೆ ಪರೀಕ್ಷೆ ನಡೆಸುತ್ತಿತ್ತು. ಆದರೆ ಇದೀಗ ಮತ್ತೆ ಅದೇ ಎಡವಟ್ಟು ಮಾಡಿದೆ. ಇದರಿಂದ ಅಭ್ಯರ್ಥಿಗಳು ಪ್ರತಿಭಟನೆ ಮಾಡಿದ್ದಾರೆ.

ವಿಜಯಪುರ ಜಿಲ್ಲೆಯಲ್ಲಿ 32 ಪರೀಕ್ಷಾ ಕೇಂದ್ರಗಳಲ್ಲಿ 12,741 ಪರೀಕ್ಷಾರ್ಥಿಗಳು ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ ಎ ಹಾಗೂ ಬಿ ಹುದ್ದೆಗಳಿಗಾಗಿ ಪರೀಕ್ಷೆ ಬರೆಯುತ್ತಿದ್ದಾರೆ. ಈ ಪೈಕಿ ನಗರದ ಸಿಕ್ಯಾಬ್ ಶಿಕ್ಷಣ ಸಂಸ್ಥೆಯ ಎರಡು ಪರೀಕ್ಷಾ ಕೇಂದ್ರಗಳು ಮರಾಠಿ ಮಹಾವಿದ್ಯಾಲಯ ಹಾಗೂ ವಿಕಾಸ ಮಹಾವಿದ್ಯಾಲಯದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳ ನೋಂದಣಿ ಸಂಖ್ಯೆ ಹಾಗೂ ಓಎಂಆರ್ ಶೀಟ್‌ನಲ್ಲಿನ ನಂಬರ್ ಅದಲು ಬದಲಾಗಿರುವುದು ಕಂಡು ಬಂದಿದೆ. ಇದನ್ನು ವಿರೋಧಿಸಿ ಸಿಕ್ಯಾಬ್ ಸಂಸ್ಥೆಯ ಪರೀಕ್ಷಾ ಕೇಂದ್ರಗಳಲ್ಲಿನ ಹಲವಾರು ಪರೀಕ್ಷಾರ್ಥಿಗಳು ಪರೀಕ್ಷೆ ಬರೆಯದೆ ಹೊರ ಬಂದಿದ್ದಾರೆ.

ಆಗ ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹಾಗೂ ಜಿಲ್ಲಾ ಪಂಚಾಯತಿ ಸಿಇಓ ರಿಶಿ ಆನಂದ ಪರೀಕ್ಷಾರ್ಥಿಗಳ ಸಮಸ್ಯೆಗಳನ್ನು ಆಲಿಸಿದರು. ಬಳಿಕ ಪರೀಕ್ಷಾರ್ಥಿಗಳ ನೋಂದಣಿ ನಂಬರ್ ಹಾಗೂ ಓಎಂಆರ್ ಶೀಟ್‌ನಲ್ಲಿನ ನಂಬರ್ ಬದಲಾಗಿದೆ ಎಂದು ಕೆಪಿಎಸ್‌ಸಿ ಅಧಿಕಾರಿಗಳ ಜೊತೆಗೆ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹಾಗೂ ಜಿಲ್ಲಾ ಪಂಚಾಯತಿ ಸಿಇಓ ರಿಶಿ ಆನಂದ ಮಾತನಾಡಿದರು.

ಈ ವಿಚಾರವಾಗಿ ಪರೀಕ್ಷಾರ್ಥಿಗಳ ನೋಂದಣಿ ನಂಬರ್ ಅನ್ನು ಓಎಂಆರ್ ಶೀಟ್‌ನಲ್ಲಿ ಪ್ರತ್ಯೇಕವಾಗಿ ನೋಂದಾಯಿಸಲು ಕೆಪಿಎಸ್‌ಸಿ ಅಧಿಕಾರಿಗಳು ಸಲಹೆ ನೀಡಿದ್ದಾರೆ. ಇದೇ ವಿಚಾರವನ್ನು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹಾಗೂ ಜಿಲ್ಲಾ ಪಂಚಾಯತಿ ಸಿಇಓ ರಿಶಿ ಆನಂದ ಪರೀಕ್ಷಾರ್ಥಿಗಳಿಗೆ ತಿಳಿ ಹೇಳಿದ್ದಾರೆ. ಓಎಂಆರ್ ಶೀಟ್‌ನಲ್ಲಿ ಪರೀಕ್ಷಾರ್ಥಿಗಳ ನೋಂದಣಿ ನಂಬರ್ ನಮೂದಿಸಲು ಸೂಚನೆ ನೀಡಿ ಪರೀಕ್ಷೆ ಬರೆಯುವಂತೆ ಮನವೊಲಿಕೆ ಮಾಡಿದ್ದಾರೆ.

ಇನ್ನು ಪರೀಕ್ಷೆ ಬರೆಯದೇ ವಿಳಂಬವಾಗಿರುವ ಸಮಯವನ್ನು ಹೆಚ್ಚುವರಿ ನೀಡಲಾಗುತ್ತದೆ ಎಂದು ಸಹ ಭರವಸೆ ನೀಡಿದ್ದಾರೆ. ಅಧಿಕಾರಿಗಳು ಸಮಸ್ಯೆ ಬಗೆಹರಿಸಿದ ಬಳಿಕ ಪರೀಕ್ಷಾರ್ಥಿಗಳು ಪರೀಕ್ಷೆ ಬರೆಯುವುದಕ್ಕೆ ತೆರಳಿದರು. ಇನ್ನು ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ.

ಕೋಲಾರದಲ್ಲೂ ಎಡವಟ್ಟು: ಇನ್ನು ವಿಜಯಪುರ ಬಳಿಕ ಕೋಲಾರದ ಪರೀಕ್ಷಾ ಕೇಂದ್ರದಲ್ಲೂ ಇದೇ ಎಡವಟ್ಟಾಗಿದೆ. ಪ್ರವೇಶ ಪತ್ರದ ಸಂಖ್ಯೆ, ಓಎಂಆರ್ ಸಂಖ್ಯೆ ಹೊಂದಾಣಿಕೆ ಆಗದ ಆರೋಪ ಕೇಳಿಬಂತು. ಹೀಗಾಗಿ ಪರೀಕ್ಷಾ ಕೇಂದ್ರದಿಂದ ಹೊರಬಂದು ಪರೀಕ್ಷಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು. ಪ್ರವೇಶ ಪತ್ರ ಓಎಂಆರ್ ಶೀಟ್‌ನಲ್ಲಿ ಬೇರೆ ರಿಜಿಸ್ಟರ್ ನಂಬರ್ ಇದೆ. ಬೇರೆ ಬೇರೆ ರಿಜಿಸ್ಟರ್ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಇದನ್ನು ಪ್ರಶ್ನೆ ಮಾಡಿದ್ದಕ್ಕೆ ಪರೀಕ್ಷೆ ಬರೆಯಿರಿ ಇಲ್ಲವಾದರೆ ಬಿಡಿ ಎಂದು ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಪರೀಕ್ಷಾರ್ಥಿಗಳಿಗೆ ಧಮ್ಕಿ ಹಾಕಿದ ಆರೋಪ ಮಾಡಲಾಗಿದೆ.

ಲಂಬಾಣಿ ಕಸೂತಿ ಕಲೆ ಕಾರ್ಯಾಗಾರದಲ್ಲಿ ಬಂಜಾರ ಸಂಸ್ಕೃತಿ ಅನಾವರಣ



ಮೈಸೂರಿನ ಗೋಕುಲಂನಲ್ಲಿ 'ಲಂಬಾಣಿ ಕಸೂತಿ ಕಲೆ ಕಾರ್ಯಾಗಾರ' ಆಯೋಜಿಸಲಾಗಿತ್ತು.

ಮೈಸೂರು, ಡಿ.29(ಎಸ್‌ಬಿಡಿ)– ಬಂಜಾರ ಕಸೂತಿ ಕಲೆ ಉಳಿವಿಗೆ ಶ್ರಮಿಸುತ್ತಿರುವ ವಿಜಯಪುರ ಮೂಲಕ 'ಬಂಜಾರ ಕಸೂತಿ' ಸಂಸ್ಥೆ ವತಿಯಿಂದ ಮೈಸೂರಿನಲ್ಲಿ ಎರಡು ದಿನಗಳ ಕಾಲ ವಿಶೇಷ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ನಗರದ ಗೋಕುಲಂನಲ್ಲಿರುವ ಆರ್ಗ್ಯಾನಿಕ್ ಕೆಫೆ ಅಂಡ್ ಬೇಕ್ ಹೌಸ್‌ನಲ್ಲಿ ನಿನ್ನೆ ಮತ್ತು ಇಂದು ನಡೆದ 'ಲಂಬಾಣಿ ಕಸೂತಿ ಕಲೆ ಕಾರ್ಯಾಗಾರ'ದಲ್ಲಿ ಹತ್ತಾರು ಸ್ಥಳೀಯ ಮಹಿಳೆಯರು ಹಾಗೂ ವಿದೇಶಿಯರು ಭಾಗವಹಿಸಿ, ಕರ್ನಾಟಕ ಸೇರಿದಂತೆ ದೇಶದ ಇತರ ಭಾಗಗಳಲ್ಲಿರುವ ಅಲೆಮಾರಿ ಸಮುದಾಯದವರ ಸಾಂಪ್ರದಾಯಿಕ ವಿಶಿಷ್ಟ ಕಸೂತಿ ಬಗ್ಗೆ ತಿಳಿದುಕೊಂಡರು.

ಸಂಸ್ಥೆಯ ಸಹ ಸಂಸ್ಥಾಪಕಿ ಸೀಮಾ ಕಿಶೋರ್ ಸಮ್ಮುಖದಲ್ಲಿ ಸಂಸ್ಥೆಯ ಕಲಾವಿದರಾದ ಲಲಿತಾ ಜಾದವ್ ಹಾಗೂ ಸವಿತಾ ರಾಥೋಡ್ ಅವರು ಪ್ರಾಯೋಗಿಕವಾಗಿ ಬಂಜಾರ ಕಸೂತಿ ಕಲೆಯ ವೈಶಿಷ್ಟ್ಯತೆ ತಿಳಿಸುವುದರೊಂದಿಗೆ ಆಧುನಿಕ ಶೈಲಿಯ ಬಟ್ಟೆ, ಸೀರೆ, ಬ್ಯಾಗ್, ಜಾಕೆಟ್ ಮೇಲೂ ಕಸೂತಿ ಮಾಡುವ ವಿಧಾನವನ್ನು ಮನದಟ್ಟು ಮಾಡಿದರು.

ಕಲೆ ಉಳಿವಿಗೆ ಪರಿಶ್ರಮ: ಲಂಬಾಣಿ ಸಮುದಾಯದ ಬಂಜಾರ ಕಲೆ ನಶಿಸದಂತೆ ರಕ್ಷಣೆ ಮಾಡುವ ಉದ್ದೇಶದಿಂದ 2017ರಲ್ಲಿ 'ಬಂಜಾರ ಕಸೂತಿ' ಸಂಘಟನೆ ಆರಂಭವಾಯಿತು. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ಪತ್ನಿ ಆಶಾ ಪಾಟೀಲ್ ಈ ಸಂಸ್ಥೆಯ ಸಂಸ್ಥಾಪಕರು. ಇವರೊಂದಿಗೆ ಸಹ ಸಂಸ್ಥಾಪಕರಾದ ಸೀಮಾ ಕಿಶೋರ್ ಜೊತೆಗೂಡಿ ತಮ್ಮ ಇಡೀ ತಂಡದೊಂದಿಗೆ ಕಲೆ ರಕ್ಷಣೆಗೆ ಶ್ರಮಿಸುತ್ತಿದ್ದಾರೆ.

ಬಂಜಾರ ಕಸೂತಿ ಕಲೆಯನ್ನು ಉಳಿಸುವುದರೊಂದಿಗೆ ಲಂಬಾಣಿ ಮಹಿಳೆಯರಿಗೆ ಘನತೆ, ಸಾಮಾಜಿಕ ಭದ್ರತೆ ಮತ್ತು ಆರ್ಥಿಕ ಸ್ವಾತಂತ್ರ್ಯ ಕಲ್ಪಿಸುವ ಉದ್ದೇಶದೊಂದಿಗೆ ಬಂಜಾರ ಕಸೂತಿ ಸಂಸ್ಥೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿದೆ. ಆಶಾ ಪಾಟೀಲ್ ಹಾಗೂ ಸೀಮಾ ಕಿಶೋರ್ ಈ ಕಲೆಯನ್ನು ಪ್ರಚುರಪಡಿಸುತ್ತಿದ್ದಾರೆ. ಅದರಂತೆ ಮೈಸೂರಿನಲ್ಲೂ ವಿಶೇಷ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕಲೆ ಅಳಿವಿಗೆ ಹಲವು ಕಾರಣಗಳಿವೆ ಅದರಲ್ಲೂ ಆರ್ಥಿಕ ಸಮಸ್ಯೆ ಪ್ರಮುಖ ಕಾರಣವಾಗಿದೆ. ಕರ್ನಾಟಕದಲ್ಲಿ ಅದರಲ್ಲೂ ಉತ್ತರಕರ್ನಾಟಕದ ಸಾಂಪ್ರದಾಯಿಕ ಬಂಜಾರ ಕಸೂತಿ ಕಲೆ ನಶಿಸುವ ಆತಂಕ ನಿರ್ಮಾಣವಾಗಿದೆ. ಲಂಬಾಣಿ ಮಹಿಳೆಯರು ಕೂಲಿ ಕೆಲಸಕ್ಕೆ ಹೋಗುವುದರಿಂದ ಕಲೆಗೆ ಸಮಯ ನೀಡಲಾಗುವುದಿಲ್ಲ. ಹಾಗಾಗಿ ಕಸೂತಿ ಕಲಾವಿದರಿಗೆ ಪ್ರೋತ್ಸಾಹ ನೀಡಿ, ಆರ್ಥಿಕ ಸಹಾಯ ಹಾಗೂ ಮಾರುಕಟ್ಟೆ ವ್ಯವಸ್ಥೆ ನೆರವು ನೀಡುವ ಮೂಲಕ ಕಲೆ ಉಳಿಸುವ ಪ್ರಯತ್ನವನ್ನು ಆಶಾ ಪಾಟೀಲ್ ನೇತೃತ್ವದಲ್ಲಿ ನಡೆಸಲಾಗುತ್ತಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ ಹೋಂ ವರ್ಕ್ ಮಾಡದೇ ಶಾಲೆಗೆ ಹೋಗಿದ್ದರಿಂದ ಗಣಿತದ ಮೇಷ್ಟ್ರು ಸಿಕ್ಕಾಪಟ್ಟೆ ಹೊಡೆದರು. ಗುಂಡ ಸೀದಾ ಮೇಷ್ಟ್ರು ಮನೆಗೆ ಹೋಗಿ ಬಾಗಿಲು ತಟ್ಟಿದ. ಮೇಷ್ಟ್ರು ಹೆಂಡತಿ ಬಾಗಿಲು ತೆಗೆದರು.

ಗುಂಡ : ಇದು ಮೇಷ್ಟ್ರು ಮನೆ ತಾನೆ? ನೀವ್ಯಾರು?

ಮೇಷ್ಟ್ರು ಹೆಂಡತಿ: ಹೌದು ಇದು ಮೇಷ್ಟ್ರು ಮನೆ. ಯಾಕೆ? ನಾನು ಅವರ ಹೆಂಡತಿ..

ಗುಂಡ : ಹೌದಾ! ಮತ್ತೆ ಆಗಾಗ ಮೇಷ್ಟ್ರನ್ನೂ ಹುಡುಕಿಕೊಂಡು ಶಾಲೆಗೆ ಬರುವವರು ಯಾರು?

ಗುಂಡ ಸೇಡು ತೀರಿಸಿಕೊಂಡ.

ಮೈಸೂರು ಮಿತ್ರ
ಸೋಮವಾರ, 30 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

'ಎಂದಿಗೂ ಯಾರನ್ನೂ ದ್ವೇಷಿಸಬೇಡಿ, ಏಕೆಂದರೆ ದ್ವೇಷ ತುಂಬಿದ ಮನದಲ್ಲಿ ದೇವರು ಖಂಡಿತ ವಾಸ ಮಾಡುವುದಿಲ್ಲ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕೋತಿ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ'

ನಿಮ್ಮ ಪತ್ರಗಳು

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಕಟ್ಟಡ ದಾಸಪ್ಪ ಕುಟುಂಬಸ್ಥರಿಂದಲೇ ನಿರ್ಮಾಣವಾಗಲಿದೆ

ಮಾನ್ಯರೆ,

29-12-2024ರ 'ಮೈಸೂರು ಮಿತ್ರ' 'ಓದುಗರ ಪತ್ರಗಳು' ವಿಭಾಗದಲ್ಲಿ ಬೂಕನಕೆರೆ ವಿಜೇಂದ್ರ ಎಂಬುವವರು ರಾಜ್ಯದ ಮೊದಲ ರೈಲ್ವೆ ಸಚಿವ ಹೆಚ್.ಸಿ.ದಾಸಪ್ಪ, ರಾಜ್ಯದ ಮೊದಲ ಮಹಿಳಾ ಸಚಿವೆ



ಶ್ರೀಮತಿ ಯಶೋಧರಾ ದಾಸಪ್ಪ, ಮೈಸೂರು ಲೋಕಸಭಾ ಕ್ಷೇತ್ರದ ಏಕೈಕ ಸಂಸದರಾದ ಹೆಚ್.ಡಿ.ತುಳಸಿದಾಸಪ್ಪ ಕುಟುಂಬದ ಬಗ್ಗೆ ಹಗುರವಾಗಿ ಬರೆದಿರುವುದು ವಿಷಾದನೀಯ ಹಾಗೂ ಕ್ಷಮಿಸಲಾರದ ಅಪರಾಧ.

ಶ್ರೀಮತಿ ಯಶೋಧರಾ ದಾಸಪ್ಪ ತಂದೆ ಕೆ.ಹೆಚ್.ರಾಮಯ್ಯ 1906ರಲ್ಲಿ 'ರಾಜ್ಯ ಒಕ್ಕಲಿಗರ ಸಂಘ' ಮತ್ತು 1928ರಲ್ಲಿ 'ಆದಿಚುಂಚನಗಿರಿ ಮಠ' ಸ್ಥಾಪಿಸಿದವರು. ತುಳಸಿದಾಸಪ್ಪನವರು 3 ಬಾರಿ ಸಂಸದರಾದರೂ, ಅಂದು ಮೈಸೂರಿನ ಹೊರವಲಯದ ಶ್ರೀರಾಂಪುರದಲ್ಲಿ ಬೇಸಾಯ ಮಾಡಿಕೊಂಡಿದ್ದರು. ವಾಣಿ ವಿಲಾಸ ಮೊಹಲ್ಲಾದ ಬಂಗಲೆಯಂತಹ ತಮ್ಮ ವಾಸದ ಮನೆಯನ್ನು ಹೆಣ್ಣು ಮಕ್ಕಳ ಹಾಸ್ಟೆಲ್‌ಗೆ ಕೊಟ್ಟು, ಶ್ರೀರಾಂಪುರದ ಹೊಲದಲ್ಲಿ ಶೀಟ್ ಮನೆಯಲ್ಲಿ ವಾಸಿಸುತ್ತಿದ್ದರು. ಇಂತಹ ಕುಟುಂಬ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಗೆ ನೀಡಿದ ಸಿಎ ನಿವೇಶನವನ್ನು ತಮ್ಮ ಕುಟುಂಬದ ಹಿಡಿತಕ್ಕೆ ತೆಗೆದುಕೊಳ್ಳುವ ಸಲುವಾಗಿ ಖಾಲಿ ಬಿಟ್ಟಿದ್ದಾರೆ ಎಂಬುದು ಎಷ್ಟು ಸರಿ?

ಸುಮಾರು 50 ವರ್ಷಗಳಿಂದ ತೊಣಚಿಕೊಪ್ಪಲಿನ ಮಾರುತಿ ಮಂದಿರ ರಸ್ತೆಯ ಸಿಎ ನಿವೇಶನ ಖಾಲಿ ಬಿದ್ದಿರುವುದಕ್ಕೆ ಕಾರಣ, ಆ ಕುಟುಂಬ ಯಾರ ಬಳಿಯೂ ದೇಣಿಗೆ ಕೇಳಲು ಮುಂದಾಗದಿರುವುದೇ ಆಗಿದೆ. 2020ರಲ್ಲಿ ಮಾಜಿ ಶಾಸಕ ವಾಸು ಸಂಸ್ಥೆಯ ಅಧ್ಯಕ್ಷರಾಗಿ ನಿವೇಶನ ಮುಡಾದಿಂದ ಮುಟ್ಟುಗೋಲಾಗುತ್ತಿದ್ದುದನ್ನು ತಪ್ಪಿಸಿದರು. 2 ವರ್ಷದಲ್ಲಿ ಕಟ್ಟಡ ನಿರ್ಮಿಸುವ ಹೈಕೋರ್ಟ್ ಸೂಚನೆಯಂತೆ ನಿವೇಶನದ ಕಂದಾಯ 5 ಲಕ್ಷ ರೂ., 3 ಅಂತಸ್ತಿನ ಕಟ್ಟಡ ನಿರ್ಮಾಣದ ಲೈಸೆನ್ಸ್‌ಗೆ ನಗರ ಪಾಲಿಕೆಗೆ 18.5 ಲಕ್ಷ ರೂ. ಕಟ್ಟಿದ್ದೂ ಸಹ ದಾಸಪ್ಪ ಅವರ ಕುಟುಂಬವೇ. ಅಲ್ಲದೇ ಅಲ್ಲಿ ಕಟ್ಟಡ ನಿರ್ಮಾಣಕ್ಕೆ 1 ಕೋಟಿ ರೂ. ಕೊಟ್ಟಿರುವುದು ಅದೇ ದಾಸಪ್ಪನವರ ಕುಟುಂಬ. ಈಗ ಅಲ್ಲಿ ಯಾವುದೇ ವಿಳಂಬವಿಲ್ಲದೇ ಕಟ್ಟಡ ನಿರ್ಮಾಣ ಕಾರ್ಯ ಸಾಂಗವಾಗಿ ನಡೆಯಲಿದೆ. ಈ ಬಗ್ಗೆ ಯಾರಿಗೂ ಅನುಮಾನ ಬೇಡ.

ಕಟ್ಟಡ ನಿರ್ಮಾಣಕ್ಕೆ ನಿವೃತ್ತ ಹಿರಿಯ ಅಧಿಕಾರಿಗಳು ಮುಂದೆ ಬಂದಿದ್ದಾರೆ ಎಂದು ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ, ಈ ಹಿರಿಯ ಅಧಿಕಾರಿಗಳು ಸಂಸ್ಥೆಯ ಸದಸ್ಯರಾಗಿದ್ದರೂ, ಕೆಲವೊಂದು ಕಾನೂನಿನ ತೊಡಕಿನಿಂದಾಗಿ ಅವರನ್ನು ದೂರ ಇರಿಸಲಾಗಿದೆ. ಆದರೂ ಅವರು ಪ್ರತ್ಯೇಕ ಸಂಸ್ಥೆ ಸ್ಥಾಪಿಸಿಕೊಂಡು ಕಾರ್ಯಾಚರಿಸುತ್ತಿದ್ದಾರೆ ಎಂಬುದು ಕಂಡು ಬಂದಿದೆ. ಅವರಿಗೆ ಸಂಸ್ಥೆಯು ಕಾನೂನಾತ್ಮಕವಾಗಿ ತಕ್ಕ ಉತ್ತರ ನೀಡಲಿದೆ.

– ಎಸ್.ಪ್ರಕಾಶ್ ಬಾಬು, ಕಾರ್ಯಕಾರಿ ಸಮಿತಿ ಸದಸ್ಯ, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ

ಮಾರ್ಗ @ ದಾರಿ!

ಮಾನ್ಯರೆ,

ಮಾರ್ಗವೊಂದಕ್ಕೆ ಸಿದ್ದರಾಮಯ್ಯವವರ ಹೆಸರಿಡುವ ವಿಚಾರವಾಗಿ ಚರ್ಚೆ ನಡೆಯುತ್ತಿದೆ. ಶ್ರೇಷ್ಠ ವ್ಯಕ್ತಿಗಳ ಸ್ಮರಣೆಗಾಗಿ ವಿವಿಧ ಮಾರ್ಗ, ವೃತ್ತ, ಚೌಕ, ನಿಲ್ದಾಣ ಇತ್ಯಾದಿಗಳಿಗೆ ಮೃತರ ಹೆಸರನ್ನು ನಾಮಕರಣ ಮಾಡಿ ಸ್ಮರಿಸಲಾಗುತ್ತದೆ. ಇದು ಸ್ಮಾರಕ ಇದ್ದಂತೆ! ಗಣ್ಯರ ಹೆಸರನ್ನಿಟ್ಟುಕೊಂಡ ರಸ್ತೆಗಳು ಕುಲಗೆಟ್ಟು ಹೋದರೆ ರಸ್ತೆಯೊಂದಿಗೆ ಆ ಗಣ್ಯರ ಹೆಸರಿಗೂ ಕಳಂಕವಾಗುತ್ತದೆ. ಹಾಗಾಗ ಬಾರದು! ಹಾಗಾಗಿ ಯಾವುದೇ ರಸ್ತೆಗೆ ತಮ್ಮ ಹೆಸರಿಡಬಾರದೆಂದು ತಾವೇ ನಿರ್ಧರಿಸುವುದು ಸೂಕ್ತ. (ತಮ್ಮ ಹೆಸರಿನ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವ ಜವಾಬ್ದಾರಿಯನ್ನು ಹೊರಲು ತಾವು ಸಿದ್ಧವಾಗಿದ್ದರೆ ನಗರದ ಎಲ್ಲಾ ರಸ್ತೆಗಳಿಗೂ ಸಿದ್ದರಾಮಯ್ಯನವರ ಹೆಸರಿಡಲು ಯಾರ ಅಭ್ಯಂತರವೂ ಇರಲಾರದು!)

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

'ಮೈಸೂರು ಮಿತ್ರ'ನ ಭಾನುವಾರ(ಡಿ.29)ದ ಸಂಚಿಕೆಯ 11ನೇ ಪುಟದಲ್ಲಿ 'ಖಾಸಗಿ ಕಂಪನಿಗಳು ಮೆರಿಟ್ ಇದ್ದವರಿಗಷ್ಟೇ ಮಣೆ', ಹೈಕೋರ್ಟ್ ನ್ಯಾಯಮೂರ್ತಿ ಶಿವಶಂಕರೇಗೌಡ ವಿಷಾಧ' ಶೀರ್ಷಿಕೆಯ ಸುದ್ದಿಯಲ್ಲಿ ತಪ್ಪಾಗಿ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಸಮಾರಂಭದ ಚಿತ್ರ ಪ್ರಕಟವಾಗಿದೆ. ಅದಕ್ಕಾಗಿ ವಿಷಾಧಿಸುತ್ತೇವೆ.

ಸದರಿ ಸುದ್ದಿಗೆ ಸಂಬಂಧಿಸಿದ ಚಿತ್ರ ಈ ಕೆಳಕಂಡದ್ದು.



ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಹೈಕೋರ್ಟ್ ನ್ಯಾಯಮೂರ್ತಿ ಶಿವಶಂಕರೇಗೌಡ ಉದ್ಘಾಟಿಸಿದರು. ಚಿತ್ರದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್, ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ವಿಜಯಲಕ್ಷ್ಮಿ ಮುರಳೀಧರ್ ಇನ್ನಿತರರಿದ್ದಾರೆ.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

50. ನಾಟಕದ ನರಸಿಂಹಯ್ಯ



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685



ಮಂಡ್ಯಂ ರಂಗಾಚಾರ್ಯರ ನಾಟಕ ಮಂಡಲಿ.

ಮೈಸೂರಿನ ಅರಮನೆಯ 'ದಶಾವತಾರದ ಕಂಪನಿ' 1814ರಿಂದಲೂ ಕಲಾರಾಧನೆ ಮಾಡುತ್ತಿತ್ತು. ಕೊಡುಗೈ ದೊರೆಗಳಾದ ಮುಮ್ಮಡಿಯವರ ನಂತರ, ಚಾಮರಾಜ ಒಡೆಯರು 1881ರಲ್ಲಿ ಪಟ್ಟವನ್ನು ಏರಿದ ಮೇಲೆ ರಂಗಮಂಟಪ ಇನ್ನೂ ಹೆಚ್ಚಿನ ಬೆಳಕು ಕಂಡಿತು. ಮರಾಠೀ, ಪಾರ್ಸೀ ಕಂಪನಿಗಳಿಗೆ ರಾಜಸನ್ನಿಧಾನದಲ್ಲಿ ನಾಟಕಗಳನ್ನಾಡುವ ಅವಕಾಶ ದೊರೆಯಿತು. ರಾಜರ ಆಣತಿಯಂತೆ ಹೆಸರಾಂತ ಸಂಸ್ಕೃತ ನಾಟಕಗಳು ಕನ್ನಡಕ್ಕೆ ಅನುವಾದಗೊಂಡು ರಂಗದ ಮೇಲೆ ಬಂದವು. ದೊರೆಗಳೂ ರಾಣಿಯರೂ ನಟರಿಗೆ ಮಾದರಿಯಾಗಿದ್ದರು. ನಾಟಕದ ಲೋಪದೋಷಗಳನ್ನು ಕುರಿತು ತಿಳಿಸುತ್ತಿದ್ದರು.

ಮಹಾರಾಜರ ಪ್ರತ್ಯಕ್ಷ ಉತ್ತೇಜನ, ಅರಮನೆಯ ಸೌಕರ್ಯಗಳು, ಪಂಡಿತರ ಹಾಗೂ ಸಂಗೀತ ವಿದ್ವಾಂಸರ ನೆರವೂ ನಾಟಕಗಳಿಗೆ ದೊರೆಯಿತು. ಆದರೆ ಖಾಸಗೀ ಕಂಪನಿಗಳ ಕೊಡುಗೆ ಕಡಿಮೆ ಏನಿರಲಿಲ್ಲ. ಅರಮನೆಯ ಹೊರಗಡೆ ರಾಜ ಬೆಂಬಲವಿಲ್ಲದೆ ಅವೂ ವಿಶೇಷ ಕಾಣಿಕೆ ಕೊಡಲಾರಂಭಿಸಿದವು. ಮೊದಲಿಗೆ ಅರಮನೆ ಕಂಪನಿಯ ಹಿರಿಮೆಯನ್ನು ಮೆರೆಯಿಸುವಂತಹ ನಾಟಕ ಸಂಘವನ್ನು ಮಂಡ್ಯದ ರಂಗಾಚಾರ್ಯರು ಕಟ್ಟಿದರು. ಸರಸ್ವತೀ ವಿಲಾಸ ನಾಟಕ ಸಭೆ ಅರಮನೆಯ ನಾಟಕ ಕಂಪನಿಯಷ್ಟೇ ಪ್ರಸಿದ್ಧಿಯಾಯಿತು. ಅದರ ಜೀವನಶಕ್ತಿ ಎಂದರೆ ರಾಜಾಪಾರ್ಟಿನ ರಂಗಾಚಾರ್ಯರು ರಾಣೀ ಪಾರ್ಟಿನ ಗೌರೀ ನರಸಿಂಹಯ್ಯನವರು.

ರಂಗಾಚಾರ್ಯರು ಸರಸ್ವತೀ ವಿಲಾಸ ನಾಟಕ ಸಭೆಯನ್ನು ಕಟ್ಟಿ ಸ್ವಲ್ಪ ಕಾಲದ ನಂತರ ಬಿಟ್ಟು ಹೋದರೆ, ಗೌರೀ ನರಸಿಂಹಯ್ಯನವರು ಕನ್ನಡ ರಂಗಭೂಮಿಯ ಮುನ್ನಡೆಗಾಗಿ ತನುಮನ ಧನಗಳನ್ನು ಅರ್ಪಿಸಿ ಕಲೆಯ ತಪಸ್ಸಾಧನೆ ಮಾಡಿದರು.

ಗೌರೀ ನರಸಿಂಹಯ್ಯನವರು ಅರಮನೆಯ ಗೌರೀ ಪೂಜೆಯ ಪುರೋಹಿತರಾಗಿದ್ದ ಅಚ್ಚಂಭಟ್ಟರ ಮಕ್ಕಳು. ಪುರೋಹಿತರ ಬದುಕು. ಅರಮನೆಯ ನಂಟಿದ್ದರೂ ಬಡತನವೇ ಹೆಚ್ಚು. ತಂದೆ ಅಚ್ಚಂಭಟ್ಟರು ಊರಿನ ದೇವದಾಸಿಯರ ಮನೆಗಳ ಪುರೋಹಿತರೂ ಆಗಿ ಕುಟುಂಬ ನಿರ್ವಹಿಸುತ್ತಿದ್ದರು. ಸೊಗಸಾದ ಕಂಠಶ್ರೀ ಹೊಂದಿದ್ದ ನರಸಿಂಹಯ್ಯ ಸಂಗೀತ ಸಾಹಿತ್ಯ ಜ್ಞಾನವನ್ನು ಸಂಪಾದಿಸಿ ಅರಸುಗಳ ಮನೆಯಲ್ಲಿ ಕುಮಾರವ್ಯಾಸ ಭಾರತವನ್ನು ವಾಚನ ಮಾಡಲಾರಂಭಿಸಿದರು.

ಗಮಕ ಕಲೆಯಲ್ಲಷ್ಟೇ ಅಲ್ಲದೆ ಬಾಲ್ಯದಿಂದಲೂ ನರಸಿಂಹಯ್ಯನವರಿಗೆ ನಾಟಕದಲ್ಲಿ ಹೆಚ್ಚಿನ ಅಭಿರುಚಿ. ಆಕರ್ಷಕ ರೂಪು, ಸೊಗಸಾದ ಕಂಠಶ್ರೀ. ಹೀಗಾಗಿ ಅಂದಿನ ನಟರಲ್ಲಿ ಸಿಂಹನೆನಿಸಿದ ಮಂಡ್ಯದ ರಂಗಾಚಾರ್ಯರ ಗಮನ ಇವರತ್ತ ಬಿದ್ದಿದ್ದರಲ್ಲಿ ಆಶ್ಚರ್ಯವಿಲ್ಲ. ಅವರ ಸಂಸ್ಥೆಯಲ್ಲಿ ಕ್ರಮೇಣ ಮೊದಲ ರಾಣಿಯ ಪಾತ್ರ ಇವರಿಗೆ ಮೀಸಲಾಯಿತು. ಅವರು ಅದಕ್ಕೆ ತಕ್ಕದ್ದಾಗಿದ್ದರು. ಅವರ ಪಾತ್ರ ಪ್ರತಿಭೆ ಅಪೂರ್ವವಾದದ್ದಾಗಿತ್ತು. ರಂಗದ ಮೇಲೆ ಸ್ತ್ರೀಯಾಗಿ ನಿಂತರೆ ಅವರು ನೂರಕ್ಕೆ ನೂರು ಪಾಲು ಹೆಣ್ಣೇ ಸರಿ.

ರಂಗಾಚಾರ್ಯರ ಕಂಪನಿಯಲ್ಲಿ ನರಸಿಂಹಯ್ಯ ಸ್ತ್ರೀ ಪಾತ್ರಧಾರಿಯಾಗಿ ಯಶಸ್ಸು ಸಾಧಿಸಿದ್ದರಲ್ಲಿ ಆಶ್ಚರ್ಯವಿಲ್ಲ. ರಂಗಾಚಾರ್ಯರದು ರಾಜನ ಪಾತ್ರ; ನರಸಿಂಹಯ್ಯನವರದು ರಾಣೀ ಪಾರ್ಟು, ಜೊತೆಗೆ ಹಾಡುಗಾರಿಕೆ. ನಾಟಕಗಳು ಜನರ ಮೆಚ್ಚುಗೆ ಪಡೆದವು. ನರಸಿಂಹಯ್ಯ ಬೆಂಗಳೂರಿಗೆ ಬಂದು ನಾಟಕಗಳನ್ನು ಆಡಿದರು. ನರಸಿಂಹಯ್ಯನವರ ಪಾತ್ರ ನಿರ್ವಹಣೆ ಹಾಗೂ ಹಾಡುಗಾರಿಕೆ ರಂಗಾಚಾರ್ಯರ ಅಭಿನಯಕಲೆ ಜನಮನವನ್ನು ಸೂರೆಗೊಂಡಿತು. ಸಂಸ್ಥೆ ಬೆಂಗಳೂರಿನಲ್ಲಿ ಜಯಭೇರಿ ಹೊಡೆದು ಬಳ್ಳಾರಿಗೆ ಪ್ರಯಾಣ ಮಾಡಿತು. ಎರಡು ಕಡೆಯೂ ಕೀರ್ತಿಯನ್ನೂ ಧನವನ್ನೂ ಗಳಿಸಿ ಮೈಸೂರಿಗೆ ವಾಪಸ್ ಬಂದಿತು.

ನರಸಿಂಹಯ್ಯನವರ ಹಾಡುಗಾರಿಕೆ, ವಾಚನ ಎಷ್ಟು ಸಿರಿತನದಲ್ಲಿ ಕೂಡಿತ್ತೆಂದರೆ ಒಮ್ಮೆ ಶೃಂಗೇರಿ ಪೀಠದ ಜಗದ್ಗುರುಗಳಾದ ನೃಸಿಂಹ ಭಾರತೀ ಸ್ವಾಮಿಗಳು ಮೈಸೂರಿಗೆ ಬಂದಿದ್ದರು. ಕೋಟೆಯ ತ್ರಿನಯನೇಶ್ವರ ದೇಗುಲದಲ್ಲಿ ಪಾದಪೂಜೆ. ಅಲ್ಲಿದ್ದ ನರಸಿಂಹಯ್ಯನವರನ್ನು ಹತ್ತಿರದಲ್ಲಿದ್ದವರು, 'ಇವರು ಗೌರೀ ನರಸಿಂಹಯ್ಯ' ಎಂದು ಪರಿಚಯಿಸಿದರು. ಸ್ವಾಮಿಗಳು ನಗುತ್ತಾ, 'ಉಗ್ರನರಸಿಂಹ, ಭೋಗನರಸಿಂಹ, ಯೋಗನರಸಿಂಹ, ಲಕ್ಷ್ಮೀನರಸಿಂಹ' ಹೆಸರುಗಳ ಜನ ಇರುತ್ತಾರೆ. ಗೌರೀ ನರಸಿಂಹನನ್ನು ಇಂದೇ ಕಂಡುದು ಎಂದಾಗ ಅರಮನೆ ಪುರೋಹಿತ ಪುಟ್ಟಣ್ಣನವರು, 'ಮನೆತನದಿಂದ ಇವರ ವಂಶ ಅರಮನೆಯಲ್ಲಿ ಗೌರೀ ಪೂಜೆ ಮಾಡಿಸುತ್ತಿದೆ. ಆದ್ದರಿಂದ ಈ ಹೆಸರು' ಎಂದು ಬಿನ್ನವಿಸಿಕೊಂಡು 'ಇವರು ನಾಟಕ ಕಂಪನಿಯ ಒಡೆಯರೂ ಆಗಿದ್ದಾರೆ. ರಾಣಿಯ ಪಾತ್ರವನ್ನು ಬಲು ಚೆನ್ನಾಗಿ ನಿರ್ವಹಿಸುತ್ತಾರೆ. ಜೊತೆಗೆ ಶ್ರೇಷ್ಠ ಗಮಕಿಗಳೂ ಹೌದು. ಸ್ವಾಮಿಗಳು ಇವರ ಭಾರತವನ್ನು ಕೇಳಬಹುದು' ಎಂದು ನಿವೇದಿಸಿಕೊಂಡರು.

ಅಂದು ಸ್ವಾಮಿಗಳು ಭೋಜನ ಪಂಕ್ತಿಯ ಮೇಲೆ ಬಂದಾಗ ನರಸಿಂಹಯ್ಯನವರ ಕಡೆ ನೋಡಿ ನಕ್ಕರು. ನರಸಿಂಹಯ್ಯನವರು ಕೂಡಲೇ ಶ್ಯಾಮಲಾ ದಂಡಕವನ್ನು ಭಾವಾವೇಶದಿಂದ ಹೇಳಲಾರಂಭಿಸಿದರು. ಊಟ ಮಾಡುತ್ತಿದ್ದವರೂ, ಬಡಿಸುತ್ತಿದ್ದವರೂ ಪ್ರತಿಮೆಗಳಾಗಿ ಹೋದರು. ಸ್ವಾಮಿಗಳು ಕಣ್ಣುಮುಚ್ಚಿ ಭಾವಪರವಶರಾದರು. ದಂಡಕ ಮುಗಿದ ಮೇಲೆ 'ಭಲೆ ಭಲೆ' ಎಂದು ಸ್ವಾಮಿಗಳು ಮೆಲ್ಲನೆ ಮುನ್ನಡೆದರು. ಆ ಸಂಜೆ ಸಂಸ್ಕೃತ ಮಹಾಪಾಠಶಾಲೆಯ ಹಜಾರದಲ್ಲಿ ಸೇರಿದ ವಿದ್ವತ್ಸಭೆಯಲ್ಲಿ ನರಸಿಂಹಯ್ಯನವರು ಕುಮಾರವ್ಯಾಸ, ಲಕ್ಷ್ಮೀಶರ ಪದ್ಯಗಳನ್ನು ಗಮಕಪೂರ್ಣವಾಗಿ ಹಾಡಿದಾಗ ಜನ ತಲೆದೂಗಿತು. 'ಲಕ್ಷ್ಮೀಂ ಕ್ಷೀರಾಬ್ಧಿ ಕನ್ಯಾಂ, ತ್ರಿಭುವನ ಜನನೀಂ ವಿಷ್ಣು ವಕ್ಷಸ್ಥಲಸ್ಥಾಂ' ಎಂಬ ರಚನೆಯನ್ನು ಅವರು ಶಂಕರಾಭರಣದಲ್ಲಿ ಹಾಡಿದಾಗ ಸ್ವಾಮಿಗಳ ಕಣ್ಣು ತುಂಬಿಬಂದಿತು. ಮುಂದೆ ನರಸಿಂಹಯ್ಯ ಪುರಂದರದಾಸರ ಹಾಗೂ ಕನಕದಾಸರ ಒಂದೊಂದು ಕೃತಿಗಳನ್ನು ಹಾಡಿ ಮುಗಿಸಿದರೂ ಸ್ವಾಮಿಗಳಿಗೆ ತೃಪ್ತಿಯಾಗಲಿಲ್ಲ. ನಂತರ 'ಶಂಕರ ಗುರುವರ ಮಹಿಮಂ' ಎಂಬ ಮಹಾವೈದ್ಯನಾಥ ಭಾಗವತರ ಕೃತಿಯನ್ನು ರಾಗಮಾಲಿಕೆಯಲ್ಲಿ ಅಪೂರ್ವವೆನಿಸುವಂತೆ ಹಾಡಿ ಮಂಗಳ ಮಾಡಿದರು. ಆ ರಾತ್ರಿ ಸ್ವಾಮಿಗಳು ನರಸಿಂಹಯ್ಯನವರನ್ನು ಬರಮಾಡಿಕೊಂಡು ತಮ್ಮೊಡನೆ ಬರಲು ಆಹ್ವಾನಿಸಿದರು. ನಾಟಕ ಕಂಪನಿ ಹೊಣೆ ಹೊತ್ತಿದ್ದ ನರಸಿಂಹಯ್ಯ, 'ಹತ್ತು ಸಂಸಾರಗಳು ನನ್ನನ್ನು ನಂಬಿ ನಿಂತಿವೆ. ನಾನು ಊರು ಬಿಟ್ಟುಬರುವಂತಿಲ್ಲವೆಂದು ಸ್ವಾಮಿಗಳ ಸನ್ನಿಧಿಯಲ್ಲಿ ನಿವೇದಿಸಿಕೊಳ್ಳಬೇಕಾಗಿದೆ' ಎಂದರು. ಆಗ ಸ್ವಾಮಿಗಳು, 'ನಾವು ಈ ಊರಿನಲ್ಲಿ ಇರುವಷ್ಟು ದಿನ ಪೂಜೆಯಾಗುವಾಗ, ಪಂಕ್ತಿಯ ಮೇಲೆ ಬರುವಾಗ ನೀವು ಹಾಡಬೇಕು' ಎಂದು ತಿಳಿಸಿದರು. ಮುಂದೆ ನರಸಿಂಹಯ್ಯನನ್ನು ತಮ್ಮ ಜೊತೆ ನಂಜನಗೂಡಿಗೆ ಕರೆದುಕೊಂಡು ಹೋದರು. ಅಲ್ಲಿಂದ ಪ್ರಯಾಣ ಮಾಡುವಾಗ, ನರಸಿಂಹಯ್ಯನವರಿಗೆ ಫಲ ಮಂತ್ರಾಕ್ಷತೆಯನ್ನು ಬೆಲೆ ಬಾಳುವ ಶಾಲುಜೋಡಿ ಖಿಲ್ಲತ್ತುಗಳನ್ನು ಕೃಪೆ ಮಾಡಿದರು. ಅಂತಹ ಪ್ರತಿಭೆ ನರಸಿಂಹಯ್ಯನವರದು.

ಕೆಲ ತಿಂಗಳ ನಂತರ ರಂಗಾಚಾರ್ಯರು ರಂಗಕ್ಷೇತ್ರ ತೊರೆದು ಸ್ವಗ್ರಾಮಕ್ಕೆ ತೆರಳಿದರು. ಆಗ ತಮ್ಮ ಅಭಿನಯ ಕಲೆಯಿಂದ ಕೀರ್ತಿ ಗಳಿಸಲಾರಂಭಿಸಿದ್ದ ವರದಾಚಾರ್ಯರನ್ನೇ ಒಲಿಸಿ ತರಲು ನರಸಿಂಹಯ್ಯನವರು ನಿರ್ಧರಿಸಿದರು. ಬೆಂಗಳೂರಿಗೆ ಬಂದು ವರದಾಚಾರ್ಯರನ್ನು ಅಭಿಮಾನದಿಂದ ಮಾತನಾಡಿಸಿ ಮೈಸೂರಿಗೆ ಬರುವಂತೆ ಪ್ರಾರ್ಥಿಸಿದರು. ಅವರು ಒಪ್ಪಿದ ಮೇಲೆ ಜೊತೆಯಲ್ಲಿಯೇ ರೈಲಿನ ಮೊದಲ ತರಗತಿಯಲ್ಲಿ ಪ್ರಯಾಣ ಮಾಡಿ, ಸ್ಟೇಷನ್ನಿನಿಂದ ಮನೆಗೆ ಜೋಡು ಕುದುರೆ ಸಾರೋಟಿನಲ್ಲಿ ಕೋಟೆಯ ಮೋತಿಖಾನೆ ಬೀದಿಯಲ್ಲಿದ್ದ ತಮ್ಮ ಮನೆಗೆ ಕರೆತಂದರು. ಕಂಪನಿಯವರೆಲ್ಲ ಬಾಗಿಲಲ್ಲಿ ನಿಂತು ಸ್ವಾಗತಿಸಿದರು. ಮೇಲು ಮಹಡಿಯ ವಿಶಾಲವಾದ ಕೋಣೆಯಲ್ಲಿ ಆಚಾರ್ಯರ ಬಿಡಾರವಾಯಿತು.

ಪ್ರತಿದಿನ ಆಚಾರ್ಯರೂ ನರಸಿಂಹಯ್ಯನೂ ಕೂಡಿ ವಾದ್ಯಗಾರರೊಡನೆ ಸಂಗೀತದ ಅಭ್ಯಾಸ ಮಾಡಿದರು. ತಿಂಗಳು ಕಳೆದಂತೆ ಸಂಗೀತದಲ್ಲಿಯೂ ಆಚಾರ್ಯರ ಅಪೂರ್ವವಾದ ಪ್ರತಿಭೆ ಮೈದಾಳಿತು. ಕಂದಪದ್ಯಗಳನ್ನು ಹಾಡುವುದರಲ್ಲಿ ಅಪೂರ್ವವಾದ ಹೆಸರು ಗಳಿಸಿದ್ದ ನರಸಿಂಹಯ್ಯನನ್ನೂ ಆಚಾರ್ಯರು ಹಿಂದಿಕ್ಕಿದರು.

ಆಚಾರ್ಯರಿಗೂ ನರಸಿಂಹಯ್ಯನವರ ಸಂಸ್ಥೆಗೂ ಅಪಾರ ಕೀರ್ತಿಯನ್ನು ತಂದ ಮೊದಲ ನಾಟಕ 'ಶಾಕುಂತಲ'. ಆಚಾರ್ಯರ ಮೊಟ್ಟಮೊದಲಿನ ಪಾತ್ರವೇ ದುಷ್ಯಂತ. ಅವರೊಡನೆ ಪಟ್ಟಾಭಿ ಶಾಸ್ತ್ರಿಗಳು ಶಕುಂತಲೆ, ಪಂಡಿತರು ಮಾಂಡವ್ಯ. ಅಳುಕುತ್ತಿದ್ದ ಆಚಾರ್ಯರಿಗೆ ಧೈರ್ಯ ತುಂಬಿ, ನರಸಿಂಹಯ್ಯನವರು ಅವರ ಬೆನ್ನುತಟ್ಟಿ ಹುರಿದುಂಬಿಸಿ ರಂಗಪ್ರವೇಶ ಮಾಡಿಸಿದರು. ಆಚಾರ್ಯರು ಮೊದಲ ಸುತ್ತಿಗೇ ದಿಗ್ವಿಜಯ ಮಾಡಿಬಿಟ್ಟರು. ಗೌರೀ ನರಸಿಂಹಯ್ಯನವರ ಕಂಪನಿಯ ಮುಂದೆ ಅರಮನೆ ಕಂಪನಿಯಲ್ಲಿ ಕೂಡ ಕತ್ತಲಿಟ್ಟುಹೋಯಿತು. ಆಚಾರ್ಯರ ಮನೆಯವರೂ ಮೈಸೂರಿಗೆ ಬಂದು ನರಸಿಂಹಯ್ಯನವರ ಮನೆಯಲ್ಲಿಯೇ ಉಳಿದರು. ಮುಂದೊಂದು ದಿನ ಆಚಾರ್ಯರ ಮುದ್ದು ಮಗ ಕುಪ್ಪಣ್ಣ ಮೈಸೂರಿಗೆ ಬಂದವನು ಇದ್ದಕ್ಕಿದ್ದಂತೆ ತೀರಿಕೊಂಡುಬಿಟ್ಟ, ಜೀವನದಲ್ಲಿ ಜಿಗುಪ್ಸೆ ಹುಟ್ಟಿ ಆಚಾರ್ಯರು, ತುಂಬಿದೆದೆಯಿಂದ ನರಸಿಂಹಯ್ಯನವರನ್ನು ಬೀಳ್ಕೊಂಡು ಬೆಂಗಳೂರಿಗೆ ಹಿಂತಿರುಗಿದರು.

ವರದಾಚಾರ್ಯರು ಬಿಟ್ಟುಹೋದದ್ದು ನರಸಿಂಹಯ್ಯನವರ ಹೊಣೆಗಾರಿಕೆಯನ್ನು ಹೆಚ್ಚಿಸಿತು. ಆದರೆ ಧೃತಿಗೆಡದೆ ಕಂಪನಿಯನ್ನು ಮುನ್ನಡೆಸಿದರು. ನಾಯಕ ಪಾತ್ರಗಳನ್ನು ತಾವೇ ನಿರ್ವಹಿಸತೊಡಗಿದರು. ರಾಣೀ ಪಾರ್ಟಿನ ನರಸಿಂಹಯ್ಯನನ್ನು ರಾಜಾ ಪಾರ್ಟಿನಲ್ಲಿ ನೋಡುವ ಕುತೂಹಲದಿಂದ ಜನ ಬಂದರು. ಸಂಸ್ಥೆಯ ನಾಯಕ ನಟನಾಗಿ, ಸಂಸ್ಥೆಯ ನೇತಾರನಾಗಿ ಗೌರೀ ನರಸಿಂಹಯ್ಯ ಇನ್ನೂ ಹುರುಡು ಕಟ್ಟಿ ಸೆಣಸಾಡಿ ತಮ್ಮ ಸಂಘವನ್ನು ಮುನ್ನಡೆಸಿದರು. ಅಷ್ಟರಲ್ಲಿ ಊರಲ್ಲಿ ಪ್ಲೇಗು ರೋಗ ದಾಳಿಯಿಟ್ಟಿತು. ಒಂದೇ ಸಮನೆ ಜನರನ್ನು ಆಹುತಿ ತೆಗೆದುಕೊಳ್ಳಲಾರಂಭಿಸಿತು. ವ್ಯಾಪಾರ ವ್ಯವಹಾರ ಕುಸಿಯಿತು. ನಾಟಕ ನೋಡುವವರು ಇಲ್ಲವಾಯಿತು. ಸಂಸ್ಥೆಯನ್ನು ಮುಚ್ಚಿ ನರಸಿಂಹಯ್ಯ ಶ್ರೀರಂಗಪಟ್ಟಣ ಸೇರಿದರು. ಹೊಟ್ಟೆಯ ಪಾಡಿಗಾಗಿ ಅಲ್ಲಿನ ಗ್ರಾಮಗಳಲ್ಲಿ ಕುಮಾರವ್ಯಾಸನ ಭಾರತವನ್ನು ಪ್ರತಿ ದಿನ ವಾಚನ ಮಾಡಲಾರಂಭಿಸಿದರು.

ಸುತ್ತಮುತ್ತಣ ಕ್ಷೇತ್ರಗಳಲ್ಲಿ 'ಗಮಕಿ' ನರಸಿಂಹಯ್ಯನವರ ಖ್ಯಾತಿ ಹಬ್ಬಿತು. ಊರಿಗೆ ಹಿರಿಯವರಾಗಿದ್ದ 'ಪೋಕರಿ' ಶ್ರೀಕಂಠಯ್ಯನವರ ಒತ್ತಾಯದ ಮೇಲೆ ನಂಜನಗೂಡಿಗೆ ಪ್ರಯಾಣ ಮಾಡಿದರು. ಶ್ರೀಕಂಠಯ್ಯನವರೂ ಸ್ವತಃ ಗಮಕಿಗಳು, ಬಂಧುಗಳು. ನಂಜನಗೂಡಿನಲ್ಲಿ ನರಸಿಂಹಯ್ಯನವರ ಪ್ರವಚನಗಳು ಭಾರೀ ಜನಸಂದಣಿಯನ್ನು ಆಕರ್ಷಿಸಿದವು.

ಪಕ್ಕದ ಮೈಸೂರಿನಲ್ಲಿ ಪ್ಲೇಗು ಮೂರನೆಯ ಬಾರಿಗೆ ದಾಳಿ ಇಟ್ಟಿತು. ಜ್ವಾಲೆಗೆ ಸಿಕ್ಕಿದ ಜನ ಹುಳುಗಳಂತೆ ಸಾಯುತ್ತಿದ್ದರು. ಊರವರು ಬೇಡಬೇಡವೆಂದು ತಡೆಯುತ್ತಿದ್ದರೂ ನರಸಿಂಹಯ್ಯ ಅವರನ್ನು ಪ್ರೀತಿಯ ಮಾತಿನಿಂದ ಒಪ್ಪಿಸಿ ಮೈಸೂರಿಗೆ ಬಂದರು. ಪ್ರೇಮದ ಮೂರ್ತಿಯಾಗಿ, ಅತ್ಯಂತ ಅನುಕಂಪದಿಂದ ರೋಗಿಗಳ ಶುಶ್ರೂಶೆಯಲ್ಲಿ ತೊಡಗಿದ್ದ ಸರಕಾರೀ ಡಾಕ್ಟರ್ ಅಚ್ಯುತರಾಯರ ನೆರವಿಗೆ ನಿಂತರು. ಕಂಪನಿಯ ಕಲಾವಿದರನ್ನು ಮತ್ತೆ ಒಂದುಗೂಡಿಸಿದರು. ಅಭ್ಯಾಸ ಮಾಡಿಸಿ ತಾವೇ ನಾಯಕ ಪಾತ್ರದಲ್ಲಿ ನಿಂತು ಎರಡು ನಾಟಕಗಳನ್ನಾಡಿದರು. ಬಂದ ಉತ್ಪತ್ತಿಯ ಕಡೆಯ ಕಾಸನ್ನೂ ರೋಗಿಗಳ ಹಾಗೂ ಸಂತ್ರಸ್ತರ ಕಷ್ಟ ನಿವಾರಣೆಗಾಗಿ ವಿನಿಯೋಗಿಸಿದರು.

ಒಂದು ಮುಂಜಾನೆ ನರಸಿಂಹಯ್ಯನವರ ದೇಹದಲ್ಲಿ ಜ್ವರ ಕಾಣಿಸಿತು. ಗಾಬರಿಯಿಂದ ಡಾಕ್ಟರುಗಳೂ, ಚೇತರಿಸಿಕೊಳ್ಳುತ್ತಿದ್ದ ರೋಗಿಗಳೂ ಅವರ ಪ್ರಾಣ ರಕ್ಷಣೆಗೆ ತನು ಮನುಗಳನ್ನು ತಾಗಿಸಿದರು. ಹತ್ತು ಜನರನ್ನು ಉಳಿಸಿದ ಆತನನ್ನು ಬದುಕಿಸಬೇಕೆಂದು ದೇವರನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದರು. ಆದರೆ ಔಷಧಿ, ಉಪಚಾರ ವ್ಯರ್ಥವಾಯಿತು. ಕನ್ನಡ ರಂಗಮಂಟಪದ ರತ್ನದಾರತಿ ಆರಿಹೋದ ದುರ್ಭರ ವಾರ್ತೆ ಊರಲ್ಲಿ ಹಬ್ಬಿತು. ಗೌರೀ ನರಸಿಂಹಯ್ಯನವರ ಅಸಂಖ್ಯ ಅಭಿಮಾನಿಗಳು ಅಲ್ಲಿ ನೆರೆದರು. ರಂಗಮಂಟಪದ ಔಪಾಸಕರೂ, ನಟ ನಟಿಯರೂ ಸೇರಿ ಅಪೂರ್ವ ಕಲಾವಂತನನ್ನು, ನಿಸ್ವಾರ್ಥಿಯಾದ ಆ ವಿರಾಗಿಯನ್ನು ಅಗ್ನಿದೇವನಿಗೆ ಅರ್ಪಿಸಿ ಅಶ್ರುತರ್ಪಣ ನೀಡಿದರು. ರಂಗಮಂಟಪದಲ್ಲಿ ಪಾಳು ಸುರಿಯಿತು.

(ಡಾ.ಎಚ್.ಕೆ.ರಂಗನಾಥ್ ಅವರ ಉಪನ್ಯಾಸದ ಆಧಾರ).

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ



ನಂಜನಗೂಡು ತಾಲೂಕು ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತ್ಯುತ್ಸವ ಮೆರವಣಿಗೆ ನಡೆಯಿತು. ಈ ಸಂದರ್ಭ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿವಿಧ ಮಠಾಧೀಶರು, ಚಿತ್ರನಟರಾದ ಡಾಲಿ ಧನಂಜಯ, ನಾಗಭೂಷಣ್, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ವಿಶ್ವ ರೈತ ದಿನಾಚರಣೆ

ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗಿ

ಮೈಸೂರು, ಡಿ.29(ಜಿಎ)–ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ರೈತ ಸಂಘ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘಗಳ ವತಿಯಿಂದ ಡಿ.31ರಂದು ಬೆಳಗ್ಗೆ 11 ಗಂಟೆಗೆ ನಗರದ ಕಲಾಮಂದಿರದಲ್ಲಿ ವಿಶ್ವ ರೈತ ದಿನಾಚರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಬ್ಬು ಬೆಳೆಗಾರರ ಸಂಘದ ಗೌರವಾಧ್ಯಕ್ಷರಾದ ಪ್ರೊ.ಎಸ್. ಶಿವರಾಜಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಇನ್ನಿತರ ಗಣ್ಯರು ಆಗಮಿಸಲಿದ್ದಾರೆ ಎಂದರು.

ದಿನವಿಡೀ ನಡೆಯುವ ಈ ಕಾರ್ಯಕ್ರಮದಲ್ಲಿ ಕೃಷಿಗೆ ಸಂಬಂಧಿಸಿದ ವಿಚಾರಗೋಷ್ಠಿ, ವಿಶೇಷ ಉಪನ್ಯಾಸ, ಸಂವಾದ, ಕೃಷಿ ಉತ್ಪಾದನೆ ಮಾರಾಟ, ರೈತರ ಆರ್ಥಿಕಾಭಿವೃದ್ಧಿ, ರೈತರ ಬೆಳೆಗಳಿಗೆ ಬಾಧಿಸುವ ಸಮಸ್ಯೆ, ಕಬ್ಬು ಬೆಳೆಗಾರರ ಸಮಸ್ಯೆ ಮತ್ತು ಪರಿಹಾರ ಮೊದಲಾದ ಹಲವಾರು ವಿಷಯ ಕುರಿತು ಚಿಂತನ ಮಂಥನ ಇರಲಿದೆ ಎಂದರು.

ಈ ಸಮಾವೇಶಕ್ಕೆ ರಾಜ್ಯ ಹಾಗೂ ಅಂತರ ರಾಜ್ಯಗಳ ಕೃಷಿ ತಜ್ಞರು, ಶಿಕ್ಷಣ ತಜ್ಞರು, ಕೃಷಿ ವಿಜ್ಞಾನಿಗಳು, ರೈತ ಮುಖಂಡರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ರೈತ ಪ್ರತಿನಿಧಿಗಳು, ರೈತ ಪರ ಚಿಂತಕರು, ರೈತ ಪೋಷಕರು, ತಾಂತ್ರಿಕ ವರ್ಗ, ಬಿತ್ತನೆ ಬೀಜ ಮಾರಾಟಗಾರರು ಮೊದಲಾದವರು ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ಪ್ರೊ.ಮಹದೇವಯ್ಯ, ಸ್ವಾಮಿರಾಜ್, ಹಾಡ್ಯ ರವಿ, ಹನುಮಯ್ಯ, ರಾಜಣ್ಣ, ಶಿವರುದ್ರಪ್ಪ ಉಪಸ್ಥಿತರಿದ್ದರು.

ಸಂದೇಶ್ ಡಿಸೋಜಾಗೆ ಪಿಹೆಚ್.ಡಿ



ಮೈಸೂರು,ಡಿ.29(ಪಿಎಂ)– ವಾಣಿಜ್ಯಶಾಸ್ತ್ರ ವಿಷಯದಲ್ಲಿ ಡಾ.ಬಿ.ಮಹದೇವಪ್ಪ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಸಂದೇಶ್ ಡಿಸೋಜಾ ಅವರು ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಚಾಮುಂಡೇಶ್ವರಿ ದೇವಾಲಯದ ಸೀರೆ ಮಾರಾಟ ಪ್ರಕರಣ

ಸ್ನೇಹಮಯಿ ಕೃಷ್ಣ ದೂರರ್ಜಿ ಮುಕ್ತಾಯಗೊಳಿಸಿದ ಪೊಲೀಸರು



ಸ್ನೇಹಮಯಿ ಕೃಷ್ಣ

ಮೈಸೂರು, ಡಿ.29(ಬಿಎಲ್‌ಯು)– ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ದೇವರಿಗೆ ಭಕ್ತರು ಉಡುಗೊರೆಯಾಗಿ ನೀಡಿದ್ದ ಸೀರೆಗಳನ್ನು ಕಳುವು ಮಾಡಿ ಕಾಳ ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದಾಖಲಿಸಿದ್ದ ದೂರನ್ನು ಪೊಲೀಸರು ವಜಾ ಮಾಡಿದ್ದಾರೆ.


ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪ ಅವರು ದೇವರಿಗೆ ನೀಡಿದ್ದ ಸೀರೆಗಳನ್ನು ಕಳುವು ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ವಿಡಿಯೋ ತುಣುಕು ಸಹಿತ ಸ್ನೇಹಮಯಿ ಕೃಷ್ಣ ನಗರದ ಕೆ.ಆರ್.ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು.

ಈ ಸಂಬಂಧ ಕೃಷ್ಣರಾಜ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಹರೀಶ್ ವಿಚಾರಣೆ ನಂತರ ಸ್ನೇಹಮಯಿ ಕೃಷ್ಣಗೆ ಹಿಂಬರಹ ನೀಡಿದ್ದಾರೆ. ನಿಮ್ಮ ದೂರಿನ ಸಂಬಂಧ ಪ್ರಾಥಮಿಕ ವಿಚಾರಣೆ ನಡೆಸಲಾಗಿದೆ. ರೂಪ ಮತ್ತು ಅವರ ಸಿಬ್ಬಂದಿಗಳನ್ನು ವಿಚಾರಣೆ ಮಾಡಿ ಹೇಳಿಕೆ ಕೂಡ ದಾಖಲಿಸಲಾಗಿದೆ. ಜೊತೆಗೆ ಸಾಕ್ಷ್ಯಾಧಾರಗಳು ಹಾಗೂ ದಾಖಲಾತಿಗಳನ್ನು ಕೂಡ ಪರಿಶೀಲಿಸಲಾಗಿದೆ ಎಂದು ಹೇಳಿದ್ದಾರೆ.

ವಿಚಾರಣೆ ವೇಳೆ ಸೀರೆ ಕಳುವು ಮಾಡಿ ಮಾರಾಟ ಮಾಡಿರುವ ಬಗ್ಗೆ ಯಾವುದೇ ಉಪಯುಕ್ತ ಮಾಹಿತಿಗಳು ದೊರೆತಿಲ್ಲ. ಆದ ಕಾರಣ ನೀವು ನೀಡಿರುವ ದೂರು ಅರ್ಜಿಯನ್ನು ಮುಂದುವರೆಸದೆ ಮುಕ್ತಾಯ ಮಾಡಲಾಗಿದೆ ಎಂದು ಸಬ್‌ಇನ್ಸ್‌ಪೆಕ್ಟರ್ ಹರೀಶ್ ಹಿಂಬರಹದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ಗೆ ಪ್ರತಿಕ್ರಿಯೆ ನೀಡಿರುವ ಸ್ನೇಹಮಯಿ ಕೃಷ್ಣ, ಈ ಪ್ರಕರಣದ ಬಗ್ಗೆ ಖುದ್ದು ಎಸಿಪಿ ಅವರೇ ತನಿಖೆ ನಡೆಸುವಂತೆ ಕೃಷ್ಣರಾಜ ಎಸಿಪಿ ಅವರಿಗೆ ಲಿಖಿತ ಮನವಿ ಸಲ್ಲಿಸುತ್ತೇನೆ ಎಂದರು.

ಮೈಸೂರಿನ ಸಾಮಾಜಿಕ ಉದ್ಯಮ ಕೃಷಿಕಲಾಗೆ ಪ್ರತಿಷ್ಠಿತ ತ್ರಿವೇಣಿ ಪ್ರಶಸ್ತಿ



ಕೃಷಿಕಲಾ ಸಂಸ್ಥೆಯ ಸಂಸ್ಥಾಪಕಿ ಸೀಮಾ ಪ್ರಸಾದ್‌ರಿಗೆ ಪ್ರತಿಷ್ಠಿತ ತ್ರಿವೇಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಡಿ. 29– ಸೋರೆ ಕಲೆಯ ಮೂಲಕ ಗ್ರಾಮೀಣ ಮಹಿಳೆಯರ ಜೀವನೋಪಾಯ ಅವಕಾಶಗಳನ್ನು ಉತ್ತಮಗೊಳಿಸುವ ಮತ್ತು ಕೃಷಿ ವೈವಿಧ್ಯವನ್ನು ಸಂರಕ್ಷಿಸುವ ವಿಶಿಷ್ಟ ಪ್ರಯತ್ನಗಳಿಗಾಗಿ, ಮೈಸೂರು ಮೂಲದ ಸಾಮಾಜಿಕ ಉದ್ಯಮವಾದ ಕೃಷಿಕಲಾ ಪ್ರತಿಷ್ಠಿತ ತ್ರಿವೇಣಿ ಪ್ರಶಸ್ತಿ ಗೆದ್ದುಕೊಂಡಿದೆ.

ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಕೃಷಿಕಲಾದ ಸಂಸ್ಥಾಪಕಿ ಸೀಮಾ ಪ್ರಸಾದ್ ಪ್ರಶಸ್ತಿಯನ್ನು ಸ್ವೀಕರಿಸಿದರು. M3M ಫೌಂಡೇಶನ್ ವತಿಯಿಂದ ನೀಡಲಾಗುವ ತ್ರಿವೇಣಿ ಪ್ರಶಸ್ತಿ, ಸಮಾಜ್ (ಸಮಾಜ), ಸರ್ಕಾರ್ (ಸರ್ಕಾರ) ಮತ್ತು ಬಜಾರ್ (ಮಾರುಕಟ್ಟೆ) ಅನ್ನು ಒಗ್ಗೂಡಿಸಿ ಪರಿವರ್ತನಾ ಬದಲಾವಣೆಗೆ ಚಾಲನೆ ನೀಡುವ ಉದ್ದೇಶ ಹೊಂದಿದೆ. ಸಾಮಾಜಿಕ ಉದ್ಯಮಗಳ ಪರಿಶ್ರಮವನ್ನು ಗುರುತಿಸಿ, ಅವುಗಳ ಕಾರ್ಯಚಟುವಟಿಕೆಯನ್ನು ಉತ್ತಮಗೊಳಿಸಲು ಮತ್ತು ದೀರ್ಘಕಾಲಿನ ಸುಸ್ಥಿರತೆಯನ್ನು ಸಾಧಿಸಲು ಅಗತ್ಯವಿರುವ ಆರ್ಥಿಕ ಬೆಂಬಲವನ್ನು ತ್ರಿವೇಣಿ ಪ್ರಶಸ್ತಿ ಒದಗಿಸುತ್ತದೆ.

ಮೈಸೂರಿನ ಕೃಷಿಕಲಾ ಅಂತಿಮ ಸುತ್ತಿನಲ್ಲಿ ವಿಜಯ ಸಾಧಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಪ್ರಶಸ್ತಿಯು ಏಳು ಲಕ್ಷ ರೂಪಾಯಿಗಳ ಅನುದಾನ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಕೃಷಿಕಲಾ ಸಂಸ್ಥಾಪಕಿ ಸೀಮಾ ಪ್ರಸಾದ್ ಮಾತನಾಡಿ, ಈ ಪ್ರಶಸ್ತಿ ಗ್ರಾಮೀಣ ಕಲಾವಿದರು ಮತ್ತು ಕೃಷಿ ಆಧಾರಿತ ಕಲೆಗಳನ್ನು ಉಳಿಸುವ ನಮ್ಮ ಬದ್ಧತೆಯನ್ನು ಬಲಪಡಿಸುತ್ತದೆ. ಕೃಷಿ ವೈವಿಧ್ಯವನ್ನು ಸಂರಕ್ಷಿಸುವುದರ ಜೊತೆಗೆ, ರೈತರು ಮತ್ತು ಗ್ರಾಮೀಣ ಮಹಿಳೆಯರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಹಾಯಕವಾಗಿದೆ ಎಂದು ಅತೀವ ಸಂತೋಷ ವ್ಯಕ್ತಪಡಿಸಿದರು.

ಸಹಜ ಸಮೃದ್ಧ ಸಂಸ್ಥೆಯ ಬೆಂಬಲದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಕೃಷಿಕಲಾ, ಸಾಂಪ್ರದಾಯಿಕ ತಳಿಗಳು ಮತ್ತು ಅವುಗಳಿಗೆ ಸಂಬಂಧಿಸಿದ ಕಲಾ ರೂಪಗಳನ್ನು ಉಳಿಸಲು ಶ್ರಮಿಸುತ್ತಿದೆ. ನಾಶದ ಅಂಚಿನಲ್ಲಿರುವ 45 ಸೋರೆ ತಳಿಗಳನ್ನು ಸಂರಕ್ಷಿಸಿರುವ ಕೃಷಿಕಲಾ, ಸೋರೆ ಬುರುಡೆಯನ್ನು ಬಳಸಿ ತಯಾರಿಸಲಾಗುವ ಸೋರೆ ಕಲಾಕೃತಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಸೋರೆಯ ಹೂದಾನಿ, ನೀರಿನ ಬಾಟಲ್, ಟೇಬಲ್ ಲ್ಯಾಂಪ್, ತೋರಣ, ಮಕ್ಕಳ ಆಟಿಕೆಗಳು ಮತ್ತು ಬೀಜ ಆಭರಣದಂಥ ಪರಿಸರಸ್ನೇಹಿ ಉತ್ಪನ್ನಗಳನ್ನು ತಯಾರಿಸುತ್ತಿದೆ. ಸಾಮಾಜಿಕ ಉದ್ಯಮದ ಮೂಲಕ ವಿನೂತನ, ಸುಸ್ಥಿರ ಮತ್ತು ಹಳ್ಳಿಗರ ಆದಾಯ ವೃದ್ಧಿಸುವ ಮಾದರಿಯನ್ನು ಕೃಷಿಕಲಾ ಹುಟ್ಟಿ ಹಾಕಿರುವುದು ಪ್ರಶಂಸನೀಯವಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಸೀಮಾ ಪ್ರಸಾದ್: 99008–51163 ಸಂಪರ್ಕಿಸಬಹುದು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯ ಶ್ರೀ ವೇದಮಾತ ಗಾಯತ್ರಿ ಬ್ರಾಹ್ಮಣ ಸಂಘದ ನೂತನ ದಿನದರ್ಶಿಕೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಬಿಡುಗಡೆ ಮಾಡಿದರು. ವಿಪ್ರ ಯುವ ಮುಖಂಡ ಶ್ರೀನಿವಾಸಪ್ರಸಾದ್, ಸಂಘದ ಅಧ್ಯಕ್ಷ ಜೆ.ವಿ.ನರಸಿಂಹಪ್ರಸಾದ್, ಉಪಾಧ್ಯಕ್ಷ ಮಂಜುನಾಥಸ್ವಾಮಿ, ವೇಣುಗೋಪಾಲ್. ಪ್ರಧಾನ ಕಾರ್ಯದರ್ಶಿ ಎಂ.ಎಸ್. ನಾಗೇಂದ್ರ, ಸಹಕಾರ್ಯದರ್ಶಿ ನಟೇಶ್, ಖಜಾಂಚಿ ಸುನಿಲ್‌ಕುಮಾರ್, ಸಂಘಟನಾ ಕಾರ್ಯದರ್ಶಿ ವಿ.ರಾಘವೇಂದ್ರ, ನಿರ್ದೇಶಕರಾದ ವೆಂಕಟೇಶ್‌ಪ್ರಸಾದ್, ರಘುನಾಥ್, ಸೋಮಸುಂದರ್, ರವಿಕುಮಾರ್, ಸರಸ್ವತಿ, ವಿಪ್ರ ಬಂಧುಗಳು ಉಪಸ್ಥಿತರಿದ್ದರು.

ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಪ್ರಾಂತೀಯ ಸಮ್ಮೇಳನ

ಧ್ಯಾನದಿಂದ ಶಾಂತಿ, ಆರೋಗ್ಯ ಲಭಿಸುತ್ತದೆ: ಬಿ.ಕೆ.ಲಕ್ಷ್ಮೀಜಿ



ಮೈಸೂರಿನ ಹೂಟಗಳ್ಳಿಯ ಅನಂತೇಶ್ವರ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಪ್ರಾಂತೀಯ ಸಮ್ಮೇಳನವನ್ನು ಬಿ.ಕೆ. ಲಕ್ಷ್ಮೀಜಿ ಉದ್ಘಾಟಿಸಿದರು. ಚಿತ್ರದಲ್ಲಿ ಇಂದಿರಾ ವೆಂಕಟೇಶ್, ಎಸ್.ವೆಂಕಟೇಶ್, ನಾಗರಾಜ ವಿ. ಬೈರಿ, ಸಿರಿ ಬಾಲು ಇನ್ನಿತರರನ್ನು ಕಾಣಬಹುದು.

ಮೈಸೂರು, ಡಿ.29–ಧ್ಯಾನದಿಂದ ಶಾಂತಿ ಮತ್ತು ಆರೋಗ್ಯ ಲಭಿಸುತ್ತದೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ ಬಿ.ಕೆ. ಲಕ್ಷ್ಮೀಜಿ ಹೇಳಿದರು.

ಹೂಟಗಳ್ಳಿಯ ಅನಂತೇಶ್ವರ ಭವನದಲ್ಲಿ ಭಾನುವಾರ ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಪ್ರಾಂತೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಬೆಳಗ್ಗೆ ಹಾಗೂ ಸಂಜೆಯ ವೇಳೆ ಧ್ಯಾನಾಸಕ್ತರಾಗಬೇಕು ಎಂದು ಕರೆ ನೀಡಿದರು.

ಧ್ಯಾನ ಮಾಡುವುದರಿಂದ ಮನಸ್ಸು ಪರಿಶುದ್ಧವಾಗಿರುತ್ತದೆ. ಪ್ರಶಾಂತತೆ ಲಭಿಸುತ್ತದೆ. ಇದರಿಂದ ನೆಮ್ಮದಿಯೂ ಇರುತ್ತದೆ. ಕೋಪ ಮಾಡಿಕೊಳ್ಳದಿದ್ದಲ್ಲಿ ಆರೋಗ್ಯವೂ ಉತ್ತಮವಾಗಿರುತ್ತದೆ ಎಂದು ಅವರು ಹೇಳಿದರು.

ಮುಖ್ಯ ಭಾಷಣಕಾರರಾಗಿದ್ದ ದಕ್ಷಿಣ ವಲಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ವಿಜಯ ಕುಮಾರ್ ಬಲ್ಲೇನಹಳ್ಳಿ ಮಾತನಾಡಿ, ಮಕ್ಕಳ ಮನಸ್ಸು ಚಂಚಲವಾಗಿರುತ್ತದೆ. ಮಕ್ಕಳಲ್ಲಿ ಕಂಡು ಬರುವ ಖಿನ್ನತೆ ಹೋಗಲಾಡಿಸಲು ಕೌನ್ಸೆಲಿಂಗ್ ಮಾಡಲಾಗುತ್ತದೆ. ಆಗಲೂ ಕೂಡ ಧ್ಯಾನ ಮಾಡುವಂತೆ ಸೂಚಿಸಲಾಗುತ್ತದೆ. ಮನಸ್ಸಿಗೆ ಶಾಂತಿ, ನೆಮ್ಮದಿ ಇಲ್ಲದಿದ್ದಲ್ಲಿ ಆರೋಗ್ಯ ಹದಗೆಡುತ್ತದೆ ಎಂದರು.

ಕೆಲವರು ಧ್ಯಾನ ಮಾಡಿ ಎಂದರೆ ಪೂಜೆ ಮಾಡುವುದು, ನಾವೇಕೆ ಮಾಡಬೇಕು? ಎಂದುಕೊಳ್ಳುತ್ತಾರೆ. ಧ್ಯಾನ ಬೇರೆ, ಪೂಜೆ ಬೇರೆ. ಧ್ಯಾನ ಮನಸ್ಸನ್ನು ಧನಾತ್ಮಕವಾಗಿ ಪರಿವರ್ತಿಸುತ್ತದೆ ಎಂದರು.

ಮುಖ್ಯಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಆತ್ಮಹತ್ಯೆ ಹಾಗೂ ಅಪರಾಧ ಕೃತ್ಯ ಎಸಗುವವರು ಆ ಕ್ಷಣದಲ್ಲಿ ತಮ್ಮ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡಲ್ಲಿ ಅವಘಡಗಳಿಂದ ಪಾರಾಗಬಹುದು. ಒಂದು ಕ್ಷಣ ಆಲೋಚಿಸಿದಲ್ಲಿ ಮುಂದೆ ಪರಿತಪಿಸುವುದು ತಪ್ಪುತ್ತದೆ ಎಂದರು.

ಅಲೆಯನ್ಸ್ ರಾಜ್ಯಪಾಲ ಸಿರಿಬಾಲು ಮಾತನಾಡಿ, ತಮಗೆ ಒಂದು ವರ್ಷ ಅವಧಿಯಲ್ಲಿ ಮೂರು ತಿಂಗಳು ಮಾತ್ರ ಬಾಕಿ ಇದೆ. ಈ ಅವಧಿಯಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು, ಪ್ರತಿಯೊಬ್ಬರೂ ಸಹಕಾರ ನೀಡುವಂತೆ ಮನವಿ ಮಾಡಿದರು.

ಪ್ರಾಂತೀಯ ಅಧ್ಯಕ್ಷೆ ಇಂದಿರಾ ವೆಂಕಟೇಶ್ ಮಾತನಾಡಿದರು. ಅತಿಥೇಯ ಸಮಿತಿ ಅಧ್ಯಕ್ಷ ಒಂದನೇ ಉಪ ರಾಜ್ಯಪಾಲ ಎಸ್.ವೆಂಕಟೇಶ್ ಸ್ವಾಗತಿಸಿದರು. ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ.ಬೈರಿ ಪ್ರಾಸ್ತಾವಿಕ ಭಾಷಣ ಮಾಡಿದರು.

ಜಿಲ್ಲಾ ಖಜಾಂಚಿ ಕೃಷ್ಣೋಜಿರಾವ್ ವಂದಿಸಿದರು. ಸಿರಿಮಾ ಮನೋಜ್ ರಾಷ್ಟ್ರಧ್ವಜ, ಶ್ರೀಕಾಂತ್ ಅಲೆಯನ್ಸ್ ಧ್ವಜವನ್ನು ವೇದಿಕೆಗೆ ತಂದರು.

ಕ್ಲಬ್ಬಿನ ಮಾಜಿ ರಾಜ್ಯಪಾಲ ಜಿ.ಎಸ್. ನಂಜುಂಡಸ್ವಾಮಿ, ಮೂರನೇ ಉಪ ರಾಜ್ಯಪಾಲ ಎಂ.ಎಸ್. ಸಂತೋಷ್ ಕುಮಾರ್, ಜಿಲ್ಲಾ ಸಂಪುಟ ಕಾರ್ಯದರ್ಶಿ ನ.ಗಂಗಾಧರಪ್ಪ, ಪಿಆರ್‌ಒ ಎನ್. ಬೆಟ್ಟೇಗೌಡ, ಅತಿಥೇಯ ಸಮಿತಿ ಕಾರ್ಯದರ್ಶಿ ಎನ್.ಸುನಿಲ್ ಕುಮಾರ್, ಖಜಾಂಚಿ ಶ್ರೀಕಾಂತ್, ವಲಯ ಅಧ್ಯಕ್ಷೆ ಸಿರಿಮಾ ಬಿ.ರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಳಿಗಾಲದಲ್ಲಿ ವೃದ್ಧರ ಆರೋಗ್ಯ ಕಾಳಜಿ ಮುಖ್ಯ

ಆರೋಗ್ಯ ತಪಾಸಣಾ ಶಿಬಿರದಲ್ಲಿ ಹಾರ್ಟ್ ಸಂಸ್ಥೆ ಸದಸ್ಯ ಡಾ.ಮಹಾಬಲೇಶ್ವರ ಮಮದಾಪುರ



ರಾಮಕೃಷ್ಣ ವಿದ್ಯಾಸಂಸ್ಥೆ ಆವರಣದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಮೈಸೂರು,ಡಿ.29–ಇಳಿಯ ವಯಸ್ಸಿನಲ್ಲಿ ಮತ್ತು ಚಳಿಗಾಲದಲ್ಲಿ ವೃದ್ಧರ ಆರೋಗ್ಯ ಕಾಳಜಿ ವಹಿಸುವುದು ಬಹಳ ಮುಖ್ಯ ಎಂದು ಸಂಧಿವಾತ ಮತ್ತು ಕೀಲು ರೋಗತಜ್ಞ, ಹಾರ್ಟ್ ಸಂಸ್ಥೆಯ ಸದಸ್ಯರೂ ಆದ ಡಾ.ಮಹಬಲೇಶ್ವರ ಮಮದಾಪುರ ಸಲಹೆ ನೀಡಿದರು.

ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಸಂಸ್ಥೆ ಆವರಣದಲ್ಲಿ ಹಾರ್ಟ್ ಸಂಸ್ಥೆಯು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ನಾರಾಯಣ ಹೃದಯಾಲಯ ಹಾಗೂ ಡಾ.ಅಗರ್ವಾಲ್ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡಿತ್ತು.

ಹಾರ್ಟ್ ಸಂಸ್ಥೆ ಅಧ್ಯಕ್ಷ ಶಿವಕುಮಾರ ಮಾತನಾಡಿ, ನಮ್ಮ ಹಿರಿಯರು ನಮ್ಮ ಗೌರವ ಹಾಗೂ ಅವರ ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಹಾಗಾಗಿ ನಮ್ಮ ಸಂಸ್ಥೆ ಈ ಆರೋಗ್ಯ ಶಿಬಿರವನ್ನು ಆಯೋಜಿಸುತ್ತಾ ಬರುತ್ತಿದೆ. ಹಾಗಾಗಿ ಈ ಶಿಬಿರದ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಶಿಬಿರದಲ್ಲಿ 75 ಮಂದಿ ಹಿರಿಯರು ಕಣ್ಣಿನ ಪರೀಕ್ಷೆ, 68 ಮಂದಿ ರಕ್ತದೊತ್ತಡ ಮತ್ತು ಮಧುಮೇಹ ಪರೀಕ್ಷೆ, 30ನ ಇಸಿಜಿ ಹಾಗೂ 28 ಮಂದಿ ಸಂಧಿವಾತ ಮತ್ತು ಕೀಲುರೋಗ ತಪಾಸಣೆ ಪಡೆದುಕೊಂಡರು. ಶಿಬಿರದಲ್ಲಿ ಹಾರ್ಟ್ ಸಂಸ್ಥೆ ಕಾರ್ಯದರ್ಶಿ ರಮೇಶ್, ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಉಮಾಶಂಕರ್, ಉಪಾಧ್ಯಕ್ಷ ಪುಟ್ಟಪ್ಪ, ನಾರಾಯಣ ಹೃದಯಾಲಯದ ಡಾ.ಅಗರ್ವಾಲ್ ಕಣ್ಣಿನ ಆಸ್ಪತ್ರೆಯ ಸಿಬ್ಬಂದಿ ಹಾಜರಿದ್ದರು.

ಗಾಣಿಗರ ಸಂಘದ ಕ್ಯಾಲೆಂಡರ್ ಬಿಡುಗಡೆ



ಗಾಣಿಗರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಡಿ.29(ಜಿಎ)–ಕೃಷ್ಣರಾಜ ಕ್ಷೇತ್ರದ ಗಾಣಿಗರ ಸಂಘದ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಈ ವೇಳೆ ಮಾಜಿ ಮೇಯರ್ ಅನಂತು ಮಾತನಾಡಿ, ಗಾಣಿಗ ಸಮುದಾಯದವರ ಸಂಖ್ಯೆ ರಾಜ್ಯದಲ್ಲಿ ಸುಮಾರು 25 ಲಕ್ಷದಷ್ಟಿದೆ. ಹೀಗಿದ್ದರೂ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಇವರು ಹಿಂದುಳಿದಿದ್ದಾರೆ. ಈ ಕಾರಣದಿಂದಾಗಿ ಗಾಣಿಗರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂಬ ಬೇಡಿಕೆಗೆ ಸಿಎಂ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಂಘವು ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಹಿರಿಯರಿಗೆ ಸನ್ಮಾನ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ವಾಗತಾರ್ಹ ಎಂದರು.

ಜ.11ರಂದು ನೆಲಮಂಗಲ ಪೂರ್ವ ನಗರೂರಿನಲ್ಲಿ ವಿಶ್ವ ಗಾಣಿಗರ ಸಮ್ಮೇಳನ ಹಮ್ಮಿಕೊಂಡಿದ್ದು, ಜಿಲ್ಲೆಯಿಂದ ಸುಮಾರು 2 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು. ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ನಾರಾಯಣ್, ವಿಜಯಕುಮಾರ್, ಚನ್ನಕೇಶವ ಉಪಸ್ಥಿತರಿದ್ದರು.

ಮೈಸೂರಲ್ಲಿ ಕೆಎಎಸ್ ಪೂರ್ವಭಾವಿ ಮರು ಪರೀಕ್ಷೆ



ಮೈಸೂರು,ಡಿ.29(ಎಂಟಿವೈ)–ಮೈಸೂರಿನ 27 ಕೇಂದ್ರಗಳಲ್ಲಿ ಭಾನುವಾರ ನಡೆದ ಕೆಎಎಸ್ ಪೂರ್ವಭಾವಿ ಮರು ಪರೀಕ್ಷೆ ಸುಸೂತ್ರವಾಗಿ ಜರುಗಿದ್ದು, ಬೆಳಗ್ಗೆ ನಡೆದ ಮೊದಲ ಪತ್ರಿಕೆಯ ಪರೀಕ್ಷೆಯಲ್ಲಿ 6065 ಅಭ್ಯರ್ಥಿಗಳು ಹಾಜರಾಗಿದ್ದರೆ, 5416 ಅಭ್ಯರ್ಥಿ ಗಳು ಗೈರು ಹಾಜರಾದರು.

ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ)ವು 2023–24ನೇ ಸಾಲಿನ ಖಾಲಿಯಿರುವ ಗೆಜೆಟೆಡ್ ಪ್ರೊಬೇಷನರ್ 384 ಹುದ್ದೆಗಳ ನೇಮಕಾತಿಗಾಗಿ ಇಂದು ಬೆಳಗ್ಗೆ ಮೈಸೂರಿನ 27 ಕೇಂದ್ರಗಳಲ್ಲಿ ನಡೆಸಿದ ಪೂರ್ವಭಾವಿ ಮರು ಪರೀಕ್ಷೆ ಬರೆಯಲು ಜಿಲ್ಲೆಯಲ್ಲಿ 11,481 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು. ಪರೀಕ್ಷೆಯ ಮೊದಲ ಪತ್ರಿಕೆ ಪರೀಕ್ಷೆ ಬೆಳಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆವರೆಗೆ, ಎರಡನೇ ಪತ್ರಿಕೆಯ ಪರೀಕ್ಷೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 4 ಗಂಟೆವರೆಗೆ ನಡೆಯಿತು. ಬಿಗಿ ಭದ್ರತೆಯಲ್ಲಿ ನಡೆದ ಪರೀಕ್ಷೆಯಲ್ಲಿ ಯಾವುದೇ ಲೋಪ ಉಂಟಾಗದಂತೆ ಕಟ್ಟೆಚ್ಚರ ವಹಿಸಲಾಗಿತ್ತು.

ಇದರಿಂದ ಎರಡೂ ಪತ್ರಿಕೆಗಳ ಪರೀಕ್ಷೆ ಸುಸೂತ್ರವಾಗಿ ಜರುಗಿದವು. ಬೆಳಗ್ಗೆ ನಡೆದ ಮೊದಲ ಪತ್ರಿಕೆಯ ಪರೀಕ್ಷೆಯಲ್ಲಿ 11,481 ಅಭ್ಯರ್ಥಿಗಳಲ್ಲಿ 6065 ಅಭ್ಯರ್ಥಿಗಳು ಪರೀಕ್ಷೆ ಬರೆದರೆ, 5416 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಮಧ್ಯಾಹ್ನ 2 ಗಂಟೆಯಿಂದ ಸಂಜೆ 4 ಗಂಟೆವರೆಗೆ ನಡೆದ ಎರಡನೇ ಪತ್ರಿಕೆಯ ಪರೀಕ್ಷೆಯಲ್ಲಿ 5984 ಅಭ್ಯರ್ಥಿಗಳು ಹಾಜರಾಗಿದ್ದರೆ, 5497 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರ ನೇತೃತ್ವದಲ್ಲಿ ಪರೀಕ್ಷಾ ಅಕ್ರಮ ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿತ್ತು. ಎಡಿಸಿ ಶಿವರಾಜು ಅವರು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಮುಂಜಾಗ್ರತಾ ಕ್ರಮವಾಗಿ ಪರೀಕ್ಷಾ ಕೇಂದ್ರದ 200 ಮೀಟರ್ ಸುತ್ತ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಲಾಗಿತ್ತು. ಅಲ್ಲದೆ, ಪರೀಕ್ಷಾ ಕೇಂದ್ರದ ಬಳಿ ಅಪರಿಚಿತರು ಸುಳಿಯದಂತೆ ಕಟ್ಟೆಚ್ಚರ ವಹಿಸಲಾಗಿತ್ತು.

ಪರೀಕ್ಷೆ ಸುಸೂತ್ರವಾಗಿ ನಡೆಸಲು ನಿಗದಿತ ಸಮಯದಲ್ಲಿ ಖಜಾನೆಯಿಂದ ಬಿಗಿ ಭದ್ರತೆಯಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ಸಾಗಿಸಲು, ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಸೀಲ್ ಮಾಡಿ ಸುರಕ್ಷಿತವಾಗಿ ಸಾಗಿಸಲು ಪ್ರತ್ಯೇಕ ತಂಡ ರಚಿಸಲಾಗಿತ್ತು.

ಅರ್ಜಿ ಆಹ್ವಾನ

ಮೈಸೂರು: ಕೇಂದ್ರ ಪುರಸ್ಕೃತ ಅಮೃತ್ 2 ಅಭಿಯಾನದ ಅಮೃತ್ ಮಿತ್ರ ಕಾರ್ಯಕ್ರಮದಡಿ ಹಾಗೂ ತಾಂತ್ರಿಕೇತರ ಚಟುವಟಿಕೆಯಡಿ ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿನ ಉದ್ಯಾನವನದ ನಿರ್ವಹಣೆಗಾಗಿ ಆಸ್ತಿ ತೆರಿಗೆ ವಸೂಲಾತಿ ಹಾಗೂ ನೀರಿನ ತೆರಿಗೆ ವಸೂಲಾತಿ ಮಾಡಲು ಡೇ–ನಲ್ಮ್ ಯೋಜನೆಯಡಿ ಅರ್ಹ ಮಹಿಳಾ ಸ್ವ–ಸಹಾಯ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಮಹಿಳಾ ಸ್ವ–ಸಹಾಯ ಸಂಘಗಳು ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಂಡು ಡಿ.31ರೊಳಗೆ ಪ್ರಸ್ತಾವನೆ ಸಲ್ಲಿಸಬೇಕು. ಮಾಹಿತಿಗಾಗಿ ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು ಎಂದು ಹೂಟಗಳ್ಳಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುವೆಂಪು ಜನ್ಮದಿನ ಆಚರಣೆ: ನೆರಳು ಚಾರಿಟಬಲ್ ಟ್ರಸ್ಟ್ ಉದ್ಘಾಟನೆ



ಮೈಸೂರಿನ ಕೃಷ್ಣಮೂರ್ತಿಪುರಂನ ಹೋಟೆಲ್ ಮಾಲೀಕರ ಸಂಘದ ಕುತ್ತೆತ್ತೂರು ಸೀತಾರಾಮರಾವ್ ಭವನದಲ್ಲಿ ನೆರಳು ಚಾರಿಟಬಲ್ ಟ್ರಸ್ಟ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪಸನ್ನಕುಮಾರ್ ಉದ್ಘಾಟಿಸಿದರು.

ಮೈಸೂರು, ಡಿ.29(ಜಿಎ)–ಮೈಸೂರಿನ ಕೃಷ್ಣಮೂರ್ತಿಪುರಂನ ಹೋಟೆಲ್ ಮಾಲೀಕರ ಸಂಘದ ಕುತ್ತೆತ್ತೂರು ಸೀತಾರಾಮರಾವ್ ಭವನದಲ್ಲಿ ಭಾನುವಾರ ನೆರಳು ಚಾರಿಟಬಲ್ ಟ್ರಸ್ಟ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪಸನ್ನಕುಮಾರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಈ ಟ್ರಸ್ಟ್ ಹೆಸರಿಗೆ ಅನ್ವರ್ಥವಾಗಿ ಬಡವರಿಗೆ, ಗಿರಿಜನರಿಗೆ ಸೇವೆಯನ್ನು ಒದಗಿಸುವ ಮೂಲಕ ನೆರಳಾಗಲಿ ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳೇ ಕಳೆದಿದ್ದರೂ ಇನ್ನೂ ಕೂಡ ಎಲ್ಲರಿಗೂ ಮೂಲ ಸೌಕರ್ಯಗಳು ಸರಿಯಾಗಿ ತಲುಪಿಲ್ಲ. ಆದರಲ್ಲೂ ಕಾಡಂಚಿನಲ್ಲಿರುವ ಗಿರಿಜನರನ್ನು ಹತ್ತು ಹಲವು ಸಮಸ್ಯೆಗಳು ಕಾಡುತ್ತಿವೆ. ಅವುಗಳ ನಿವಾರಣೆಗೆ ಟ್ರಸ್ಟ್ ಮುಂದಾಗಲಿ ಎಂದು ಸಲಹೆ ನೀಡಿದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಮಾತನಾಡಿ, ಗ್ರಾಮಾಂತರ ಬಡಜನರು ಹಾಗೂ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಟ್ರಸ್ಟ್ ಆರಂಭಿಸಿರುವುದು ಸಂತಸದ ಸಂಗತಿ. ಹಳ್ಳಿಯಲ್ಲಿ ಸಾಕಷ್ಟು ಸಮಸ್ಯೆಗಳಿಗೆ ಅವುಗಳನ್ನು ನಿವಾರಿಸಲು ಟ್ರಸ್ಟ್ ಮುಂದಾಗಲಿ. ಸಂಘ ಸಂಸ್ಥೆಗಳನ್ನು ನೋಂದಣಿ ಮಾಡಿಸುವುದು ಸುಲಭ ಆದರೆ, ಭಾಗವಹಿಸುವಿಕೆ ಕಷ್ಟಕರ. ಹೆಚ್ಚು ಸಮಯ ಬೇಕು. ತೋರ್ಪಡಿಕೆಗೆ ಸಂಘ ನಿರ್ಮಾಣ ಮಾಡಬಾರದು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಗರಾಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ, ಕುವೆಂಪು ಅವರ ಜನ್ಮದಿನ, ಜಯಂತಿ ಮಾಡುವ ಜೊತೆ ಅವರ ಚಿಂತನೆಗಳನ್ನು ಅಳವಡಿಸಿಕೊಂಡರೆ ಅವರಿಗೆ ನೀಡುವ ನಿಜವಾದ ಸ್ಮರಣೆಯಾಗಿದೆ. ಎಲ್ಲಾ ಮಹನೀಯರ ಸ್ಮರಣೆ ದಿನ ಭಾಷಣ ಮಾಡಿ ಹೋಗುತ್ತೇವೆ. ಆದರೆ ಅವರ ಆಶಯಗಳನ್ನು ಅಳವಡಿಸಿಕೊಳ್ಳುವುದಿಲ್ಲ. ಅವರ ಆಶಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜಕ್ಕೆ ನಾವು ಸಮರ್ಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷರಾದ ಎನ್.ಗಂಗಾಧರಪ್ಪ, ಎನ್.ಮೋಹನ್, ಅಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್, ಉಪಾಧ್ಯಕ್ಷ ಮಹಿಮಾ ಶ್ರೀನಿವಾಸ್, ಕಾರ್ಯದರ್ಶಿ ಪುರುಷೋತ್ತಮ, ಖಜಾಂಚಿ ಪಿ.ಕುಮಾರ್, ಡಾ.ಪಳನಿಸ್ವಾಮಿ ಉಪಸ್ಥಿತರಿದ್ದರು.

ದೇಶ - ವಿದೇಶ

ತಾಲಿಬಾನ್ ಪ್ರತೀಕಾರಕ್ಕೆ 19 ಪಾಕ್ ಸೈನಿಕರ ಹತ್ಯೆ, 2 ಚೆಕ್‌ಪೋಸ್ಟ್ ವಶ



ಪಾಕಿಸ್ತಾನ: ಅಫ್ಘಾನಿಸ್ತಾನದಲ್ಲಿ ಪಾಕಿಸ್ತಾನಿ ವಾಯುಪಡೆ ನಡೆಸಿದ ವೈಮಾನಿಕ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲು ತಾಲಿಬಾನ್ ಯೋಧರು ಇಂದು ಮುಂಜಾನೆ 4 ಗಂಟೆ ಸುಮಾರಿಗೆ ಅಫ್ಘಾನಿಸ್ತಾನ–ಪಾಕ್ ಗಡಿಯಲ್ಲಿ ದಾಳಿ ನಡೆಸಿದರು. ತಾಲಿಬಾನಿಗಳ ಫಿರಂಗಿಗಳು ಮತ್ತು ಮೆಷಿನ್ ಗನ್‌ಗಳ ಮುಂದೆ ಪಾಕಿಸ್ತಾನಿ ಸೇನೆಯು ಅಸಹಾಯಕರಾಗಿ ಕಾಣಿಸಿಕೊಂಡಿತು. ಅಫ್ಘಾನಿಸ್ತಾನದ ತಾಲಿಬಾನ್ ಯೋಧರ ಈ ದಾಳಿಯಿಂದಾಗಿ, ಪಾಕಿಸ್ತಾನಿ ಸೇನೆಯು ತನ್ನ ಎರಡು ಗಡಿ ಪೋಸ್ಟ್‌ಗಳನ್ನು ತೊರೆದು ಹಿಮ್ಮೆಟ್ಟಬೇಕಾಯಿತು. ಅಷ್ಟೇ ಅಲ್ಲ, ಈ ದಾಳಿಯಲ್ಲಿ ಸುಮಾರು 19 ಪಾಕಿಸ್ತಾನಿ ಸೈನಿಕರು ಸಹ ಸಾವನ್ನಪ್ಪಿದ್ದಾರೆ ಎಂದು ತಾಲಿಬಾನ್ ಹೇಳಿಕೊಂಡಿದೆ. ಡ್ಯುರಾಂಡ್ ಲೈನ್ ಬಳಿಯ ಪಕ್ತಿಯಾ ಮತ್ತು ಖೋಸ್ಟ್ ಪ್ರದೇಶಗಳಲ್ಲಿ ಈ ಸಂಘರ್ಷ ನಡೆದಿದೆ. ಈ ಸಂಘರ್ಷದಲ್ಲಿ, ತಾಲಿಬಾನ್ ಹೋರಾಟಗಾರರು ಪಾಕಿಸ್ತಾನದ ಪೋಸ್ಟ್‌ಗಳ ಮೇಲೆ ದಾಳಿ ಮಾಡಿದ್ದು ಮಾತ್ರವಲ್ಲದೆ ಅವುಗಳನ್ನು ಸುಟ್ಟು ಬೂದಿ ಮಾಡಿದ್ದಾರೆ. ಈ ಪ್ರದೇಶಗಳಲ್ಲಿ ಹೋರಾಟಗಾರರು ಕನಿಷ್ಠ 19 ಪಾಕಿಸ್ತಾನಿ ಸೈನಿಕರನ್ನು ಕೊಂದಿದ್ದಾರೆ ಎಂದು ತಾಲಿಬಾನ್ ರಕ್ಷಣಾ ಸಚಿವಾಲಯ ತಿಳಿಸಿದೆ.

ಮೂರು ಬಾರಿಯೂ ಹೆಣ್ಣು ಮಗುವಿನ ಜನನ, ಹೆಂಡತಿಗೆ ಬೆಂಕಿ ಹಚ್ಚಿದ ಗಂಡ



ಮುಂಬೈ: ಮೂರನೇ ಬಾರಿಯೂ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ ಎಂಬ ಕಾರಣಕ್ಕೆ ಕಿರಾತಕನೊಬ್ಬ ತನ್ನ ಹೆಂಡತಿಗೆ ಬೆಂಕಿ ಹಚ್ಚಿ ರಾಕ್ಷಸೀ ಪ್ರವೃತ್ತಿ ತೋರಿದ ಅಮಾನವೀಯ ಘಟನೆ ಮುಂಬೈನಲ್ಲಿ ನಡೆದಿದೆ. ಮಹಾರಾಷ್ಟ್ರದ ಪರ್ಭಾನಿ ಜಿಲ್ಲೆಯ ಗಂಗಾಖೇಡ್ ನಾಕಾ ಎಂಬ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ವ್ಯಕ್ತಿಯೊಬ್ಬ ತನ್ನ ಪತ್ನಿಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿರುವ ಹೇಯ ಘಟನೆ ವರದಿಯಾಗಿದೆ. ಹತ್ಯೆಯಾದ ಮಹಿಳೆಯನ್ನು ಮೈನಾ ಎಂದು ಗುರುತಿಸಲಾಗಿದ್ದು, ಹತ್ಯೆಗೈದ ಆರೋಪಿಯನ್ನು ಕುಂಡ್ಲಿಕ್ ಉತ್ತಮ್ ಕಾಳೆ (32) ಎಂದು ಗುರುತಿಸಲಾಗಿದೆ.

ಆರೋಪಿಯಿಂದ ಕೊಲ್ಲಲ್ಪಟ್ಟ ಮಹಿಳೆ ಈ ಹಿಂದೆ ಎರಡು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ್ದು, 3ನೇ ಬಾರಿಯೂ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರಿಂದ ಪತ್ನಿಯನ್ನು ಪತಿ ಪದೇ ಪದೇ ನಿಂದಿಸುತ್ತಿದ್ದ. ಆಗಾಗ ಇಬ್ಬರ ನಡುವೆ ಜಗಳ ನಡೆಯುತ್ತಿತ್ತು ಎಂದು ಮೈನಾ ಅವರ ಸಹೋದರಿ ಆರೋಪಿಸಿದ್ದಾರೆ. ಮುಂಬೈನಿಂದ ಸುಮಾರು 520 ಕಿಲೋಮೀಟರ್ ದೂರದಲ್ಲಿರುವ ಗಂಗಾಖೇಡ್ ನಾಕಾದಲ್ಲಿ ಆರೋಪಿ ತನ್ನ ಪತ್ನಿ ಮೈನಾ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಪ್ಯಾರಸಿಟಮಾಲ್ ಓವರ್ ಡೋಸ್‌ನಿಂದ ಮಹಿಳೆ ಸಾವು



ಲಂಡನ್: ಮಹಿಳೆಯೊಬ್ಬಳು ಪ್ಯಾರಸಿಟಮಾಲ್ ಮಾತ್ರೆಯ ಮಿತಿಮೀರಿದ ಸೇವನೆಯಿಂದ ಸಾವನ್ನಪ್ಪಿರುವ ಘಟನೆ ಬ್ರಿಟನ್‌ನ ವಿಡ್ನೆಸ್ ಪಟ್ಟಣದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಮೃತ ಮಹಿಳೆಯನ್ನು ಲಾರಾ ಹಿಗ್ಗಿಸನ್ (30) ಎಂದು ಗುರುತಿಸಲಾಗಿದೆ. ನ್ಯುಮೋನಿಯಾದಿಂದ ಬಳಲುತ್ತಿದ್ದ ಮಹಿಳೆ ಹತ್ತಿರದ ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಯ ವೈದ್ಯರು ಇಂಟ್ರಾವೆನಸ್ ಟ್ಯೂಬ್ ಮೂಲಕ 3 ಬಾರಿ 1 ಗ್ರಾಂ ಪ್ರಮಾಣದಲ್ಲಿ ಪ್ಯಾರಾಸಿಟಮಲ್ ನೀಡಿದ್ದರು. ಕೇವಲ 40 ಕೆಜಿ ತೂಕವಿದ್ದ ಮಹಿಳೆಗೆ ಇಷ್ಟು ಪ್ರಮಾಣದಲ್ಲಿ ಪ್ಯಾರಾಸಿಟಿಮಲ್ ನೀಡಿರುವುದು ಆಕೆಯ ಸಾವಿಗೆ ಕಾರಣವಾಗಿದೆ.

ಲಾರಾ ಸಾವಿಗೆ ಕಾರಣವೆಂದರೆ ಸೆಪ್ಸಿಸ್, ಸಿರೋಸಿಸ್ ಮತ್ತು ಪ್ಯಾಂಕ್ರಿಯಾಟೈಟಿಸ್‌ನೊಂದಿಗೆ ಅಂಗಾಂಗ ವೈಫಲ್ಯ. ಚಿಕಿತ್ಸೆ ವೇಳೆ ಪ್ಯಾರಸಿಟಮಾಲ್ ಮಿತಿಮೀರಿದ ಸೇವನೆಯಿಂದಾಗಿ ಸಾವನ್ನಪ್ಪಿದ್ದಾರೆ ಎಂದು ಆಸ್ಪತ್ರೆಯ ಆಡಳಿತವು ಕಂಡುಹಿಡಿದಿದೆ. 19 ಏಪ್ರಿಲ್ 2017ರಂದು ನಡೆದ ಈ ಘಟನೆಯ ಇತ್ತೀಚೆಗೆ ಬೆಳಕಿಗೆ ಬಂದಿವೆ. ಸಾಮಾನ್ಯವಾಗಿ ತಲೆನೋವು, ಜ್ವರಕ್ಕೆ ವೈದ್ಯರು ಪ್ಯಾರೆಸಿಟಮಾಲ್ ಪೂರಕಗಳನ್ನು ಶಿಫಾರಸು ಮಾಡುತ್ತಾರೆ. ಮಿತ ಪ್ರಮಾಣದಲ್ಲಿ ತೆಗೆದುಕೊಂಡಾಗ ಇವುಗಳನ್ನು ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ.

ಹೋಟೆಲ್ ಕೋಣೆಯಲ್ಲಿ ಮಲಯಾಳಂ ನಟ ದಿಲೀಪ್ ಶಂಕರ್ ಶವ ಪತ್ತೆ



ತಿರುವನಂತಪುರ: ಚಲನಚಿತ್ರ ಮತ್ತು ಕಿರುತೆರೆ ನಟ ದಿಲೀಪ್ ಶಂಕರ್ ಭಾನುವಾರ ತಿರುವನಂತಪುರದ ವ್ಯಾನ್ ರಾಸ್ ಜಂಕ್ಷನ್ ಬಳಿಯ ಹೋಟೆಲ್ ಕೋಣೆಯೊಂದರಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಘಟನೆ ನಂತರ ಕಂಟೋನ್ಮೆಂಟ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದಿಲೀಪ್ ನಾಲ್ಕು ದಿನಗಳ ಹಿಂದೆ ಹೋಟೆಲ್‌ಗೆ ಚೆಕ್ ಇನ್ ಆಗಿದ್ದರು. ಹೋಟೆಲ್ ಸಿಬ್ಬಂದಿ ಪ್ರಕಾರ, ಕಳೆದ ಎರಡು ದಿನಗಳಿಂದ ಅವರು ತಮ್ಮ ಕೊಠಡಿಯಿಂದ ಹೊರಗೆ ಕಾಲಿಟ್ಟಿರಲಿಲ್ಲ. ಭಾನುವಾರ ಅವರ ಕೊಠಡಿಯಿಂದ ದುರ್ವಾಸನೆ ಹೊರಹೊಮ್ಮುವುದನ್ನು ಗಮನಿಸಿದ ನಂತರ ಬಾಗಿಲು ತೆರೆದು ನೋಡಿದಾಗ ನಟ ಸತ್ತಿರುವುದು ಪತ್ತೆಯಾಗಿದೆ.

ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಆಗಮಿಸಿದ್ದಾರೆ. ಕೊಠಡಿಯನ್ನು ಪರೀಕ್ಷಿಸಲು ವಿಧಿವಿಜ್ಞಾನ ತಂಡವನ್ನು ನಿಯೋಜಿಸಲಾಗಿದೆ ಎಂದು ಕಂಟೋನ್ಮೆಂಟ್ ಎಸಿಪಿ ತಿಳಿಸಿದ್ದಾರೆ. ಸದ್ಯಕ್ಕೆ ಯಾವುದೇ ರೀತಿಯ ಅನುಮಾನಗಳು ಇಲ್ಲ. ಮರಣೋತ್ತರ ಪರೀಕ್ಷೆ ನಂತರವೇ ಸಾವಿಗೆ ನಿಖರವಾದ ಕಾರಣ ಪತ್ತೆಯಾಗಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗುಜರಾತ್‌ನ ರಾಸಾಯನಿಕ ಘಟಕದಲ್ಲಿ ವಿಷಕಾರಿ ಅನಿಲ ಸೋರಿಕೆ, ನಾಲ್ವರು ಸಾವು

ಭರೂಚ್: ಗುಜರಾತಿನ ಭರೂಚ್ ಜಿಲ್ಲೆಯ ದಹೇಜ್‌ನಲ್ಲಿರುವ ರಾಸಾಯನಿಕ ಘಟಕವೊಂದರಲ್ಲಿ ಸೋರಿಕೆಯಾದ ವಿಷಕಾರಿ ಅನಿಲವನ್ನು ಸೇವಿಸಿ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶನಿವಾರ ರಾತ್ರಿ 10 ಗಂಟೆ ಸುಮಾರಿಗೆ ಗುಜರಾತ್ ಫ್ಲೋರೊ ಕೆಮಿಕಲ್ಸ್ ಲಿಮಿಟೆಡ್ (ಜಿಎಫ್‌ಎಲ್) ಉತ್ಪಾದನಾ ಘಟಕದಲ್ಲಿ ಪೈಪ್‌ನಿಂದ ಸೋರಿಕೆಯಾದ ವಿಷಕಾರಿ ಅನಿಲವನ್ನು ಉಸಿರಾಡಿದ ನಂತರ ಸಂತ್ರಸ್ತರು ಪ್ರಜ್ಞೆ ಕಳೆದುಕೊಂಡಿದ್ದಾರೆ ಎಂದು ದಹೇಜ್ ಠಾಣೆ ಇನ್ಸ್‌ಪೆಕ್ಟರ್ ಪಾಟಿದಾರ್ ತಿಳಿಸಿದ್ದಾರೆ.

ಅವರನ್ನು ಕೂಡಲೇ ಭರೂಚ್‌ನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅವರಲ್ಲಿ ಮೂವರು ಭಾನುವಾರ ಮುಂಜಾನೆ 3 ಗಂಟೆಗೆ ಮೃತಪಟ್ಟರೆ, ಇನ್ನೊಬ್ಬರು ಬೆಳಿಗ್ಗೆ 6 ಗಂಟೆಗೆ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ರಾತ್ರಿ 10 ಗಂಟೆ ಸುಮಾರಿಗೆ ಕಂಪನಿಯ ಸಿಎಂಎಸ್ ಸ್ಥಾವರದ ನೆಲ ಅಂತಸ್ತಿನ ಮೂಲಕ ಹಾದುಹೋಗಿರುವ ಪೈಪ್‌ನಿಂದ ಅನಿಲ ಸೋರಿಕೆಯಾಗಿದೆ. ಈ ವೇಳೆ ನಾಲ್ವರು ಕಾರ್ಮಿಕರು ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದಾರೆ. ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಈ ವೇಳೆ ಚಿಕಿತ್ಸೆಗೆ ಸ್ಪಂದಿಸದೆ ನಾಲ್ವರು ಮೃತಪಟ್ಟಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಘಟನೆಯ ಕುರಿತು ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.



ಪ್ರಮುಖ ಘಟನಾವಳಿಗಳು





ಜನವರಿ

ಜ. 1 ಅಯೋಧ್ಯೆ ರಾಮಮಂದಿರದ ಗರ್ಭಗುಡಿಯಲ್ಲಿ ಮೈಸೂರು ಶಿಲ್ಪಿ ಅರುಣ್ ಯೋಗಿರಾಜರಿಂದ ರಾಮಲಲ್ಲಾ ಪ್ರತಿಷ್ಠಾಪನೆ ಬಹುತೇಕ ಖಚಿತ
ಜ. 1 ಡಿಸಿಎಂ ಡಿಕೆಶಿಗೆ ಮತ್ತೊಮ್ಮೆ ಸಂಕಷ್ಟ
ಜ. 1 ಹೊಸ ವರ್ಷದ ಮೊದಲ ದಿನ ಮೈಸೂರಿನ ದೇವಾಲಯಗಳಲ್ಲಿ ಭಕ್ತ ಸಾಗರ
ಜ. 1 ಹೊಸ ವರ್ಷದಂದೇ ಇತಿಹಾಸ ಬರೆದ ಇಸ್ರೋ ಎಕ್ಸ್‌ಪೋಸ್ಯಾಟ್ ಉಡಾವಣೆ ಯಶಸ್ವಿ
ಜ. 1 ಮೇಲುಕೋಟೆಯಲ್ಲೂ ಶ್ರೀರಾಮ-ಸೀತಾಮಾತೆ ಹೆಜ್ಜೆ ಗುರುತು
ಜ. 2 ಹುಣಸೂರಲ್ಲಿ ಭೀಕರ ಅಪಘಾತ: ನಾಲ್ವರು ಕೂಲಿ ಕಾರ್ಮಿಕರ ದುರ್ಮರಣ
ಜ. 3 ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಹಾತಂತ್ರ
ಜ. 4 ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ ನಿಧನ
ಜ. 4 ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ್ ಮ್ಯಾನ್ಷನ್ 30 ಕೋಟಿ ರೂ. ವೆಚ್ಚದಲ್ಲಿ ನವೀಕರಣ
ಜ. 5 ಸಿದ್ದರಾಮಯ್ಯ ನಂತರ ಪರಮೇಶ್ವರ್‌ಗೆ ಮುಖ್ಯಮಂತ್ರಿ ಗದ್ದುಗೆ
ಜ. 5 ಬರ ಪರಿಹಾರಕ್ಕೆ ರಾಜ್ಯ ವಿಪತ್ತು ನಿಧಿಯಿಂದ 105 ಕೋಟಿ ರೂ. ಬಿಡುಗಡೆ
ಜ. 5 ಭಾರತದ ಅತ್ಯಂತ ಹಿರಿಯ ಗಂಡು ಕರಡಿ ಬಬ್ಲೂ ಇನ್ನಿಲ್ಲ
ಜ. 6 ಅತಿಥಿ ಉಪನ್ಯಾಸಕರ ಸೇವಾವಧಿ ಅನ್ವಯ ಗೌರವಧನ ಹೆಚ್ಚಳ
ಜ. 6 ಅಯೋಧ್ಯೆ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಗೆ ಕಾವೇರಿ ತೀರ್ಥ
ಜ. 6 ಹಾಸನದಲ್ಲಿ ಶ್ರೀಲಂಕಾ ಮಾದರಿ ಆನೆ ಧಾಮ
ಜ. 7 ರಾಜ್ಯದ ರೈತರ ಬೆಳೆ ಕೊಯ್ಲು, ಒಕ್ಕಣೆಗೆ ಅನುಕೂಲವಾಗುವಂತೆ ಹಾರ್ವೆಸ್ಟರ್ ಹಬ್ ಸ್ಥಾಪನೆ, ಮೈಸೂರು ಜಿಲ್ಲೆಗೆ ಎರಡು ಹಾರ್ವೆಸ್ಟರ್ ಯಂತ್ರ
ಜ. 7 ಕೊಡಗಿನ ಕುಂದಬೆಟ್ಟದ ತಪ್ಪಲಿನಲ್ಲಿ ಪಾಂಡವರ ಕಾಲದ ಶಿವಲಿಂಗ ಪತ್ತೆ
ಜ. 7 ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ 439 ಕೋಟಿ ವಂಚನೆ ಆರೋಪ ಪ್ರಕರಣ: ಶಾಸಕ ರಮೇಶ್ ಜಾರಕಿಹೊಳಿ ಸೇರಿ ಮೂವರ ವಿರುದ್ಧ ಎಫ್‌ಐಆರ್
ಜ. 7 ಕಾರು-ಸ್ಕೂಟರ್ ಡಿಕ್ಕಿ: ಇಬ್ಬರು ಶಿಕ್ಷಕಿಯರ ಸಾವು
ಜ. 8 ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ


ಜ. 8 ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಿಷಿದ್ಧ


ಜ. 8 ಎಕ್ಸೆಲ್‌ಸಾಫ್ಟ್ ಮುಖ್ಯಸ್ಥ ಪ್ರೊ.ಎಂ.ಹೆಚ್. ಧನಂಜಯ ನಿಧನ

ಜ. 8 ನಟ ಯಶ್ ಕಟೌಟ್ ನಿಲ್ಲಿಸುವಾಗ ಮೂವರು ಅಭಿಮಾನಿಗಳು ವಿದ್ಯುತ್ ಸ್ಪರ್ಶದಿಂದ ಸಾವು
ಜ. 9 ಮಗನನ್ನು ಕೊಂದು ಬ್ಯಾಗಿನಲ್ಲಿ ಹೆಣ ಸಾಗಿಸುತ್ತಿದ್ದ ಮಹಾತಾಯಿ
ಜ. 11 ಗುಜರಾತ್‌ನ ಗಾಂಧಿನಗರದ ಫೋರೆನ್ಸಿಕ್ ಲ್ಯಾಬ್‌ನಲ್ಲಿ ಮೈಸೂರಿನ ಮನೋರಂಜನ್, ಸಾಗರ್ ಶರ್ಮಾಗೆ ಬ್ರೈನ್ ಮ್ಯಾಪಿಂಗ್, ನಾರ್ಕೋ ಅನಾಲಿಸಿಸ್
ಜ. 12 ವಿ.ಕೃ. ಗೋಕಾಕ್ ಪ್ರಶಸ್ತಿ ಪ್ರದಾನ
ಜ. 12 ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಭೇಟಿ ಮಾಡಿದ ಡಾ.ಎಸ್.ಎಲ್.ಭೈರಪ್ಪ
ಜ. 12 ಗ್ಯಾರಂಟಿ ಯುವನಿಧಿ ಯೋಜನೆಗೆ ಚಾಲನೆ
ಜ. 13 ಅಯೋಧ್ಯೆ ರಾಮಮಂದಿರಕ್ಕೆ ಡಾ.ಎಸ್.ಎಲ್.ಭೈರಪ್ಪ ಭೇಟಿ
ಜ. 13 ಹೈದರಾಬಾದ್‌ನಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪು ಮಾರಾಟ; ಇಬ್ಬರ ಬಂಧನ
ಜ. 14 ಭಾರತ್ ಜೋಡೋ ನ್ಯಾಯ್ ಯಾತ್ರೆಗೆ ಚಾಲನೆ
ಜ. 14 ಮಾಸಾಶನಕ್ಕಾಗಿ 5 ಕಿ.ಮೀ. ದೂರ ತೆವಳಿಕೊಂಡು ಬಂದ ಅಜ್ಜಿ
ಜ. 14 ಮೈಸೂರು ಬಿಷಪ್ ಕೆ.ಎ.ವಿಲಿಯಂ ರಾಜೀನಾಮೆ
ಜ. 16 ಅಯೋಧ್ಯೆ ರಾಮಮಂದಿರದಲ್ಲಿ ಮೈಸೂರಿನ ಅರುಣ್ ಯೋಗಿಯ ಕೈಯ್ಯಲ್ಲಿ ಮೂಡಿದ ಬಾಲರಾಮನ ಪ್ರತಿಷ್ಠಾಪನೆ
ಜ. 17 ಜೀಪ್, ಓಮ್ನಿ ಮುಖಾಮುಖಿ ಡಿಕ್ಕಿ: ತಂದೆ, ಮಗಳು ಸಾವು
ಜ. 19 ನಂ.ಗೂಡು ಕಪಿಲಾ ನದಿಯಲ್ಲಿ ಮುಳುಗಿ ಮೂವರು ಅಯ್ಯಪ್ಪಸ್ವಾಮಿ ಭಕ್ತರು ಸಾವು


ಜ. 20 ತಮಿಳುನಾಡಿನ ಅಗ್ನಿತೀರ್ಥ ಕಡಲತೀರದಲ್ಲಿ ಪ್ರಧಾನಿ ಮೋದಿ ಪವಿತ್ರ ಸ್ನಾನ, ವಿಶೇಷ ಪ್ರಾರ್ಥನೆ

ಜ. 21 ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ
ಜ. 22 ಅಯೋಧ್ಯೆಯಲ್ಲಿ ಬಾಲರಾಮ ವಿರಾಜಮಾನ
ಜ. 23 ಬಿಹಾರದ ಮಾಜಿ ಸಿಎಂ ದಿವಂಗತ ಕರ್ಪೂರಿ ಠಾಕೂರ್‌ಗೆ ಭಾರತ ರತ್ನ
ಜ. 23 ದೆಹಲಿ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಮಿಗ್-29 ಯುದ್ಧ ವಿಮಾನ ಹಾರಾಟ ಸಾಹಸಕ್ಕೆ ಸಜ್ಜಾಗಿರುವ ಮೈಸೂರಿನ ಪುಣ್ಯಾ ನಂಜಪ್ಪ
ಜ. 24 ರಾಜ್ಯದಲ್ಲಿರುವ ಎಲ್ಲಾ ರಾಮಮಂದಿರಗಳ ಪುನರುಜ್ಜೀವನ
ಜ. 24 ತಾಯಿ, ತಂಗಿಯ ಕೆರೆಗೆ ತಳ್ಳಿ ಕೊಂದ ಸುಪುತ್ರ
ಜ. 28 ನಿತೀಶ್‌ಕುಮಾರ್ 9ನೇ ಬಾರಿ ಬಿಹಾರ್ ಸಿಎಂ ಆಗಿ ಪ್ರಮಾಣವಚನ
ಜ. 28 ಹನುಮ ಜಯಂತಿ ವಿವಾದ: ಮಂಡ್ಯದ ಕೆರಗೋಡು ಉದ್ವಿಗ್ನ
ಜ. 29 ಇಬ್ಬರ ಬಲಿ ಪಡೆದ ರೋಡ್ ಹಂಪ್ಸ್
ಜ. 29 ಹನುಮ ಜಯಂತಿ ವಿವಾದ: ಕಲ್ಲು ತೂರಾಟ, ಲಾಠಿ ಪ್ರಹಾರ
ಜ. 29 ಮೈಸೂರು ಹೊರವಲಯದ ನಂಜನಗೂಡು ರಸ್ತೆಯಲ್ಲಿ ಕಾರು ಡಿಕ್ಕಿ ಹೊಡೆದು ಹುಲಿ ಸಾವು
ಜ. 29 ಫ್ರಾನ್ಸ್ ಮೂಲದ ಮೈಸೂರಿನ ಸಂಸ್ಕೃತ ವಿದ್ವಾಂಸನಿಗೆ ಪದ್ಮಶ್ರೀ ಪ್ರಶಸ್ತಿ ಗರಿ
ಜ. 30 ಮೈಸೂರು ನಗರಪಾಲಿಕೆ ಅಧಿಕಾರಿಗಳ ಅವೈಜ್ಞಾನಿಕ ಹಂಪ್‌ಗೆ ಯುವಕ ಬಲಿ
ಜ. 31 ಇಡಿಯಿಂದ ಜಾರ್ಖಂಡ್ ಸಿಎಂ ಹೇಮಂತ್ ಸೂರೇನ್ ಬಂಧನ

ಫೆಬ್ರವರಿ

ಫೆ. 1 ಪ್ರಧಾನಿ ಮೋದಿ ಎರಡನೇ ಅವಧಿಯ ಕೊನೆಯ ಬಜೆಟ್: ಬಡವರು, ಮಹಿಳೆಯರು, ಯುವಕರು, ಅನ್ನದಾತರಿಗೆ ಆದ್ಯತೆ
ಫೆ. 1 ಆಶಾ, ಅಂಗನವಾಡಿ ಕಾರ್ಯಕರ್ತರಿಗೂ ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ
ಫೆ. 1 ಅಂಗನವಾಡಿ ಕಾರ್ಯಕರ್ತರಿಗೆ ತಲಾ ಎರಡು ಸೀರೆ ವಿತರಣೆ, ಸಂಪುಟ ಸಭೆ ನಿರ್ಧಾರ
ಫೆ. 2 ಫೆ.7ರಂದು ನವದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಧರಣಿ


ಫೆ. 3 ಎಲ್.ಕೆ.ಅಡ್ವಾಣಿಗೆ ಭಾರತರತ್ನ

ಫೆ. 4 ಏಕರೂಪ ನಾಗರಿಕ ಸಂಹಿತೆ ಕರಡಿಗೆ ಉತ್ತರಾಖಂಡ ಸಂಪುಟ ಒಪ್ಪಿಗೆ
ಫೆ. 4 ಹಳ್ಳಕ್ಕೆ ಕಾರು ಉರುಳಿ ಮೂವರು ಯುವಕರ ಸಾವು
ಫೆ. 4 ಮೈಸೂರಲ್ಲಿ ಬಂಡೀಪುರ ಉಳಿಸಿ ಅಭಿಯಾನ
ಫೆ. 5 ಮೈಸೂರಲ್ಲಿದೆ ಬೃಹತ್ ತಲೆ ಆಕೃತಿ...!?
ಫೆ. 6 ಕೇಂದ್ರ-ರಾಜ್ಯದ ನಡುವೆ ತೆರಿಗೆ ತಿಕ್ಕಾಟ: ದೆಹಲಿಯಲ್ಲಿ ಕರ್ನಾಟಕ ಸರ್ಕಾರ ಧರಣಿ, ನಮ್ಮ ಪಾಲು ನಮಗೆ ಕೊಡಿ...
ಫೆ. 7 ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ 118 ಜೋಡಿಗಳು
ಫೆ. 8 ಮರದ ಒಣ ರೆಂಬೆ ಬಿದ್ದು ಅಮಾಯಕ ಬಲಿ


ಫೆ. 9 ಮಾಜಿ ಪ್ರಧಾನಿಗಳಾದ ಪಿ.ವಿ.ನರಸಿಂಹರಾವ್, ಚರಣ್‌ಸಿಂಗ್, ಹಸಿರು ಕ್ರಾಂತಿ ಹರಿಕಾರ ಡಾ.ಎಂ.ಎಸ್.ಸ್ವಾಮಿನಾಥನ್‌ಗೆ ಭಾರತರತ್ನ

ಫೆ. 9 ಕಾಫಿ ಕಳವು ಪ್ರಕರಣ: ನಾಲ್ವರ ಬಂಧನ
ಫೆ. 10 ರಾಜ್ಯದಲ್ಲಿ 6 ವರ್ಷ ಮೇಲ್ಪಟ್ಟ ಮಕ್ಕಳಿಗೂ ಹೆಲ್ಮೆಟ್ ಕಡ್ಡಾಯ
ಫೆ. 11 ಪಾಲಹಳ್ಳಿಯಲ್ಲಿ ಹಾಡಹಗಲೇ ರೌಡಿಶೀಟರ್ ಹತ್ಯೆ
ಫೆ. 11 ಮುಖ್ಯಮಂತ್ರಿ ಸಿದ್ದರಾಮಯ್ಯ ತವರಿನಲ್ಲಿ ಅಮಿತ್ ಶಾ ಚುನಾವಣಾ ರಣತಂತ್ರ
ಫೆ. 12 ಗ್ಯಾರಂಟಿಯಿಂದ 1.2 ಕೋಟಿಗೂ ಅಧಿಕ ಬಡವರು ಮಧ್ಯಮ ವರ್ಗಕ್ಕೇರಿರುವುದು ಗ್ಯಾರಂಟಿ
ಫೆ. 12 ಚಿಕ್ಕಕಾನ್ಯದಲ್ಲಿ ಮತ್ತೆ ಹುಲಿ ಪ್ರತ್ಯಕ್ಷ
ಫೆ. 14 ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ ಅಳವಡಿಕೆಗೆ ಇನ್ನೂ ಮೂರು ತಿಂಗಳು ಕಾಲಾವಕಾಶ
ಫೆ. 14 ಅಬುದಾಬಿಯಲ್ಲಿ ಹಿಂದೂ ದೇವಾಲಯ ಉದ್ಘಾಟಿಸಿದ ಪ್ರಧಾನಿ ಮೋದಿ
ಫೆ. 15 ಏ.1ರಿಂದ ಎಪಿಎಲ್, ಬಿಪಿಎಲ್ ಕಾರ್ಡ್‌ಗೆ ಹೊಸ ಅರ್ಜಿ ಸ್ವೀಕಾರ
ಫೆ. 15 ಪತ್ನಿಯ ಕರಿಮಣಿ ಮಾಲೀಕ ನೀನಲ್ಲ ಮೋಜಿಗೆ ಪತಿ ಬಲಿ
ಫೆ. 15 ಚಿಕ್ಕನಹಳ್ಳಿ ಬಳಿ ಬೋನಿಗೆ ಬಿದ್ದ ಗಂಡು ಹುಲಿ
ಫೆ. 16 ಸಿದ್ದರಾಮಯ್ಯ ಬಜೆಟ್ ಆದ್ಯತೆ ಗ್ಯಾರಂಟಿ, ಅಭಿವೃದ್ಧಿ
ಫೆ. 17 ಪಾಲಿಕೆಯ 6.88 ಕೋಟಿ ಉಳಿತಾಯ ಬಜೆಟ್
ಫೆ. 17 ಸಂಸ್ಕೃತ ವಿದ್ವಾಂಸ ರಾಮಭದ್ರಾಚಾರ್ಯ, ಉರ್ದು ಕವಿ ಗುಲ್ಜಾರ್‌ಗೆ ಜ್ಞಾನಪೀಠ ಪ್ರಶಸ್ತಿ
ಫೆ. 17 ಮಾ.6ರಿಂದ11ರವರೆಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ
ಫೆ. 18 ಮದುವೆ ದಿಬ್ಬಣದ ಟಿಟಿ ವಾಹನ ಲಾರಿಗೆ ಡಿಕ್ಕಿ: ಮೈಸೂರಿನ ಇಬ್ಬರು ಸೇರಿ ಮೂವರ ದುರ್ಮರಣ
ಫೆ. 18 ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಸಮಾವೇಶ: ಬಿಜೆಪಿ 370, ಎನ್‌ಡಿಎ 400 ಸ್ಥಾನ ಮೋದಿ ಟಾರ್ಗೆಟ್


ಫೆ. 19 ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನೆಗೆ ಭೂಮಿಪೂಜೆ


ಫೆ. 20 ರಾಜಸ್ಥಾನದಿಂದ ರಾಜ್ಯಸಭೆಗೆ ಸೋನಿಯಾ ಗಾಂಧಿ ಅವಿರೋಧ ಆಯ್ಕೆ


ಫೆ. 21 ನ್ಯಾಯಶಾಸ್ತ್ರಜ್ಞ ಫಾಲಿ ಎಸ್.ನಾರಿಮನ್ ನಿಧನ

ಫೆ. 23 ಬಿಜೆಪಿ ಮುಖಂಡ ರಘು ಕೌಟಿಲ್ಯ ಪುತ್ರಿ ವರ್ಣಿಕಾ ಸಿವಿಲ್ ನ್ಯಾಯಾಧೀಶಕರಾಗಿ ನೇಮಕ
ಫೆ. 25 ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನ
ಫೆ. 28 ಪಾಕ್ ಪರ ಘೋಷಣೆ ಆರೋಪದ ಪ್ರತಿಧ್ವನಿ; ವಿಧಾನಮಂಡಲದಲ್ಲಿ ಭಾರಿ ಕೋಲಾಹಲ
ಫೆ. 28 ಮುಡಾ ಅಧ್ಯಕ್ಷರಾಗಿ ಕೆ.ಮರೀಗೌಡ ನೇಮಕ
ಫೆ. 29 ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾವ್ ನಿಧನ
ಫೆ. 29 ಜಾತಿಗಣತಿ ವರದಿ ಸಲ್ಲಿಕೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವೀಕಾರ
ಫೆ. 29 ಮೈಸೂರಿನಿಂದ ಬೆಂಗಳೂರಿಗೆ ಚಲಿಸುತ್ತಿದ್ದ ರೈಲಿನಲ್ಲಿ ಕಾನ್‌ಸ್ಟೇಬಲ್‌ಗೆ ಇರಿತ, ಆರು ಮಂದಿ ದುಷ್ಕರ್ಮಿಗಳ ಸೆರೆ

ಮಾರ್ಚ್



ಮಾ. 1 ಬೆಂಗಳೂರು ವೈಟ್ ಫೀಲ್ಡ್‌ನ ಪ್ರತಿಷ್ಠಿತ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ

ಮಾ. 2 ವಾರಣಾಸಿಯಿಂದ ಮೋದಿ ಸ್ಪರ್ಧೆ
ಮಾ. 3 ಮೈಸೂರು ವಿವಿ 104ನೇ ಘಟಿಕೋತ್ಸವ, ಎಸ್.ಎಂ. ಕೃಷ್ಣ, ಜಾವಗಲ್ ಶ್ರೀನಾಥ್, ಪ್ರೊ. ಭಾಷ್ಯಂ ಸ್ವಾಮೀಜಿ, ಎಂ.ಆರ್. ಸೀತಾರಾಮ್‌ಗೆ ಗೌರವ ಡಾಕ್ಟರೇಟ್
ಮಾ. 3 ಇಬ್ಬರು ಮಕ್ಕಳನ್ನು ಕೊಂದು ತಾನೂ ಆತ್ಮಹತ್ಯೆಗೆ ಶರಣಾದ ತಾಯಿ
ಮಾ. 4 ಸಂಸದ ಪ್ರತಾಪ್ ಸಿಂಹರಿಂದ ಉನ್ನತೀಕರಣಗೊಂಡ ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣ ಲೋಕಾರ್ಪಣೆ
ಮಾ. 5 ಚಿತ್ರ ನಿರ್ದೇಶಕ ಎಂ.ಎಸ್.ಸತ್ಯುಗೆ ಜೀವಮಾನ ಸಾಧನೆ ಪ್ರಶಸ್ತಿ
ಮಾ. 7 ಮೂವರು ಯುವಕರು ಕಾವೇರಿ ನೀರು ಪಾಲು
ಮಾ. 7 ಮುಡಾಗೆ 6.3 ಕೋಟಿ ಉಳಿತಾಯ ಬಜೆಟ್


ಮಾ. 9 ಮಾಜಿ ಶಾಸಕ ವಾಸು ಇನ್ನಿಲ್ಲ


ಮಾ. 17 ಸಂಸದ ವಿ.ಶ್ರೀನಿವಾಸ ಪ್ರಸಾದ್ ಅಧಿಕೃತವಾಗಿ ರಾಜಕೀಯ ನಿವೃತ್ತಿ ಘೋಷಣೆ

ಮಾ. 10 4 ಸಾವಿರ ಕೋಟಿ ವೆಚ್ಚದ 22 ಹೆದ್ದಾರಿ ಕಾಮಗಾರಿಗಳಿಗೆ ಮೈಸೂರಲ್ಲಿ ಶಂಕುಸ್ಥಾಪನೆ; ಅಮೆರಿಕಾಗೆ ಸಮನಾಗಿ ರಾಜ್ಯದ ರಸ್ತೆಗಳ ಅಭಿವೃದ್ಧಿ: ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ
ಮಾ. 11 ಕಲರ್ ಕ್ಯಾಂಡಿ ನಿಷೇಧ: ಗೋಬಿ ಮಂಚೂರಿಗೆ ಕೃತಕ ಬಣ್ಣ ಬಳಸುವವರಿಗೆ 10 ಲಕ್ಷ ರೂ. ದಂಡ, 7 ವರ್ಷ ಶಿಕ್ಷೆ!
ಮಾ. 11 ಸಿಎಎ ಜಾರಿ
ಮಾ. 11 ಕಡಕೊಳ ಬಳಿ 100 ಕೋಟಿ ವೆಚ್ಚದ ಮಲ್ಟಿ ಲಾಜಿಸ್ಟಿಕ್ ಪಾರ್ಕ್
ಮಾ. 12 ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪಗೆ ರಾಜ್ಯದಲ್ಲಿ ಲೋಕಸಭಾ ಚುನಾವಣಾ ಜವಾಬ್ದಾರಿ
ಮಾ. 12 ಮೈಸೂರಲ್ಲಿ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಲೋಕಾರ್ಪಣೆ
ಮಾ. 13 ರಾಮೇಶ್ವರಂ ಬಾಂಬ್ ಬ್ಲಾಸ್ಟ್ ಪ್ರಕರಣ: ಬಳ್ಳಾರಿಯಲ್ಲಿ ಶಂಕಿತನನ್ನು ವಶಕ್ಕೆ ಪಡೆದ ಎನ್‌ಐಎ
ಮಾ. 14 ರಾಜ್ಯಸಭಾ ಸದಸ್ಯೆಯಾಗಿ ಸುಧಾಮೂರ್ತಿ ಪ್ರಮಾಣವಚನ
ಮಾ. 16 ಲೋಕ ಸಮರಕ್ಕೆ ಮುಹೂರ್ತ, ಏಳು ಹಂತದಲ್ಲಿ ಚುನಾವಣೆ, ಜೂ. 4 ಫಲಿತಾಂಶ, ಕರ್ನಾಟಕದಲ್ಲಿ ಎರಡು ಹಂತದಲ್ಲಿ ಚುನಾವಣೆ, ಏ. 26, ಮೇ 7ರಂದು ತಲಾ 14 ಕ್ಷೇತ್ರದಲ್ಲಿ ಮತದಾನ
ಮಾ. 17 ಮಹಿಳಾ ಐಪಿಎಲ್: ಆರ್‌ಸಿಬಿ ಚೊಚ್ಚಲ ಚಾಂಪಿಯನ್
ಮಾ. 19 ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 87 ಅಡಿಗೆ ಕುಸಿತ
ಮಾ. 19 ತೆಲಂಗಾಣದಲ್ಲಿ ಭೀಕರ ರಸ್ತೆ ಅಪಘಾತ :ಕಾಶಿಗೆ ತೆರಳುತ್ತಿದ್ದ ಮೈಸೂರಿನ ಇಬ್ಬರು ದುರ್ಮರಣ


ಮಾ. 21 ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬಂಧನ

ಮಾ. 26 ಮಂಡ್ಯದಲ್ಲಿ ಎನ್‌ಡಿಎ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ
ಮಾ. 26 ರೋಡ್ ಡಿವೈಡರ್‌ಗೆ ಬೈಕ್ ಡಿಕ್ಕಿ: ಇಬ್ಬರು ವಿದ್ಯಾರ್ಥಿಗಳ ದುರ್ಮರಣ
ಮಾ. 29 ವಿಜಯಪುರದಲ್ಲಿ ಮೈಸೂರಿನ ತಾಯಿ-ಮಗನ ಘೋರ ಹತ್ಯೆ
ಮಾ. 30 ಮೈಸೂರಿಗೆ ಶೃಂಗೇರಿ ಶ್ರೀ ಶಾರದಾಪೀಠದ ಶ್ರೀ ವಿಧುಶೇಖರ ಭಾರತೀ ಶ್ರೀಗಳ ಆಗಮನ
ಮಾ. 31 ಎಲ್.ಕೆ.ಅಡ್ವಾಣಿ ಅವರಿಗೆ ಭಾರತರತ್ನ ಪ್ರದಾನ


ಫೆ. 21ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ ವಿಧಾನಸಭೆಯಲ್ಲಿ ಅಂಗೀಕಾರ

ಮೈಸೂರು ಮಿತ್ರ




ಪ್ರಮುಖ ಘಟನಾವಳಿಗಳು

ಏಪ್ರಿಲ್

- ಏ. 3 ಮೈಸೂರಲ್ಲಿ ಬಿಜೆಪಿಯ ಯದುವೀರ್, ಕಾಂಗ್ರೆಸ್‌ನ ಲಕ್ಷ್ಮಣ; ಚಾ.ನಗರದಲ್ಲಿ ಕಾಂಗ್ರೆಸ್‌ನ ಸುನೀಲ್ ಬೋಸ್, ಬಿಜೆಪಿಯ ಬಾಲರಾಜ್ ನಾಮಪತ್ರ ಸಲ್ಲಿಕೆ
- ಏ. 4 ಮಂಡ್ಯದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ
- ಏ. 5 ಸಂಸದೆ ಸುಮಲತಾ ಬಿಜೆಪಿ ಸೇರ್ಪಡೆ
- ಏ. 10 ದ್ವಿತೀಯ ಪಿಯು ಫಲಿತಾಂಶ: ಬಾಲಕೀಯರೇ ಮೇಲುಗೈ; ಶೇ. 81.15 ತೇರ್ಗಡೆ
- ಏ. 10 ಎಂಆರ್‌ಸಿ ಸ್ಟೀವರ್ಡ್ ಕೆ.ಜಿ. ಅನಂತರಾಜ್ ಅರಸ್ ನಿಧನ
- ಏ. 12 ಕೊಲ್ಕತ್ತಾದಲ್ಲಿ ಬೆಂಗಳೂರು ರಾಮೇಶ್ವರಂ ಕೆಫೆ ಸ್ಫೋಟದ ಆರೋಪಿಗಳ ಬಂಧನ
- ಏ. 14 ನಾನಿರುವವರೆಗೂ ಭಾರತವನ್ನು ಒಡೆಯುವ, ಹಿಂದೂ ಧರ್ಮ ನಾಶಪಡಿಸುವ ಕಾಂಗ್ರೆಸ್ ಉದ್ದೇಶ ಸಫಲವಾಗದು... ಮೈಸೂರಿನಲ್ಲಿ ಪ್ರಧಾನಿ ಮೋದಿ ಗುಡುಗು
- ಏ. 14 ನಿರ್ಮಾಪಕ ಸೌಂದರ್ಯ ಜಗದೀಶ್ ಆತ್ಮಹತ್ಯೆ
- ಏ. 15 ವ್ಯಾಪಾರಕ್ಕಾಗಿ ಸೂಡಾನ್‌ಗೆ ತೆರಳಿದ್ದ ಮಹಿಳೆ ಸಾವು



ಏ. 16 ಹಿರಿಯ ನಟ, ನಿರ್ಮಾಪಕ, ನಿರ್ದೇಶಕ ದ್ವಾರಕೀಶ್ ಇನ್ನಿಲ




ಏ. 29 ಸಂಸದ ವಿ.ಶ್ರೀನಿವಾಸ ಪ್ರಸಾದ್ ಇನ್ನಿಲ್ಲ

- ಏ. 22 ಬಿಜೆಪಿಯಿಂದ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಉಚ್ಚಾಟನೆ
- ಏ. 26 ರಾಜ್ಯದ 14 ಕ್ಷೇತ್ರಗಳಲ್ಲಿ ಶೇ. 69.23 ಮತದಾನ ಮೈಸೂರು–ಕೊಡಗಿನಲ್ಲಿ ಶೇ.70.33, ಮಂಡ್ಯದಲ್ಲಿ ಶೇ.81.48, ಚಾ.ನಗರದಲ್ಲಿ ಶೇ.76.59, ಹಾಸನದಲ್ಲಿ ಶೇ.77.51ರಷ್ಟು ಶಾಂತಿಯುತ ಮತದಾನ
- ಏ. 28 ಬರ ಪರಿಹಾರದಲ್ಲಿ ಅನ್ಯಾಯ, ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ
- ಏ. 30 ಸಕಲ ಸರ್ಕಾರಿ ಗೌರವಗಳೊಂದಿಗೆ ಸಂಸದ ಶ್ರೀನಿವಾಸ ಪ್ರಸಾದ್ ಅಂತ್ಯಕ್ರಿಯೆ

ಮೇ

- ಮೇ 2 ಪ್ರಜ್ವಲ್ ವಿರುದ್ಧ ಲುಕ್‌ಔಟ್ ನೋಟೀಸ್
- ಮೇ 3 ಬಿರುಗಾಳಿ ಮಳೆಗೆ ಮೈಸೂರು ತತ್ತರ
- ಮೇ 4 ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಪ್ರಕರಣ: ಶಾಸಕ ರೇವಣ್ಣ ಬಂಧನ



ಮೇ 5 ಶಾಸಕ ಹೆಚ್.ಡಿ.ರೇವಣ್ಣ ಎಸ್‌ಐಟಿ ವಶಕ್ಕೆ



ಮೇ 30 ಜರ್ಮನಿಯಿಂದ ಬೆಂಗಳೂರಿಗೆ ಬಂದ ಪ್ರಜ್ವಲ್ ಎಸ್‌ಐಟಿ ವಶಕ್ಕೆ



ಮೇ 23 ಡಾ.ಉಷಾಹೆಗ್ಡೆ: ಮೌಂಟ್ ಎವರೆಸ್ಟ್ ಏರಿದ ಮೊದಲ ಮೈಸೂರಿಗರು

- ಮೇ 6 ಹಾಸನ ಪೆನ್‌ಡ್ರೈವ್ ಪ್ರಕರಣ: ಡಿ.ಕೆ.ಶಿವಕುಮಾರ್ ಕಥಾನಾಯಕ
- ಮೇ 7 5ನೇ ಬಾರಿಗೆ ರಷ್ಯಾ ಅಧ್ಯಕ್ಷರಾಗಿ ವ್ಲಾಡಿಮಿರ್ ಪುಟಿನ್ ಅಧಿಕಾರ ಸ್ವೀಕಾರ
- ಮೇ 8 ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಪ್ರಕರಣ: ಶಾಸಕ ರೇವಣ್ಣ ಜೈಲು ಪಾಲು
- ಮೇ 9 SSLC ಫಲಿತಾಂಶದಲ್ಲಿ ಭಾರಿ ಕುಸಿತ: ಶೇ. 73.40 ತೇರ್ಗಡೆ
- ಮೇ 10 ಎಸ್‌ಎಸ್‌ಎಲ್‌ಸಿ ಪಾಸಾದ ಸಂಭ್ರಮದಲ್ಲೇ ನಿಶ್ಚಿತಾರ್ಥ; ಬಳಿಕ ಬಾಲಕಿಯ ಬರ್ಬರ ಹತ್ಯೆ
- ಮೇ 10 ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ: ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ಪೊಲೀಸ್ ವಶಕ್ಕೆ
- ಮೇ 11 ನಿಶ್ಚಿತಾರ್ಥವಾಗಿದ್ದ ಬಾಲಕಿ ರುಂಡದೊಂದಿಗೆ ಪರಾರಿಯಾಗಿದ್ದ ಹಂತಕನ ಬಂಧನ
- ಮೇ 13 ಪ್ರಜ್ವಲ್ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ರೇವಣ್ಣಗೆ ಜಾಮೀನು
- ಮೇ 15 ರೇವಣ್ಣ ಬಿಡುಗಡೆ
- ಮೇ 17 ಪೆನ್‌ಡ್ರೈವ್ ಕೇಸಲ್ಲಿ ಹೆಚ್‌ಡಿಕೆ ಹೆಸರು ಹೇಳಲು ಡಿಕೆಶಿಗೆ 100 ಕೋಟಿ ರೂ. ಆಫರ್
- ಮೇ 20 ಬಂಡೀಪುರ ಅರಣ್ಯದಲ್ಲಿ ಹೆಣ್ಣಾನೆ ಸಾವು
- ಮೇ 22 ಮನೆಯಲ್ಲಿ ಮಲಗಿದ್ದಲ್ಲೇ ಒಂದೇ ಕುಟುಂಬದ ನಾಲ್ವರು ಸಾವು
- ಮೇ 26 ಕೆಕೆಆರ್ ಐಪಿಎಲ್ ಚಾಂಪಿಯನ್
- ಮೇ 26 ದೆಹಲಿ ಆಸ್ಪತ್ರೆಯಲ್ಲಿ ಅಗ್ನಿ ಅವಘಡ: 7 ಶಿಶುಗಳ ದುರ್ಮರಣ
- ಮೇ 26 ಹೆಚ್.ಡಿ.ಕೋಟೆ: ಹುಲಿ ದಾಳಿ ಮಹಿಳೆ ಬಲಿ

ಜೂನ್

- ಜೂ. 4 ಎನ್‌ಡಿಎಗೆ 292, ಇಂಡಿಯಾಗೆ 233
- ಜೂ. 5 ಮೂರನೇ ಅವಧಿಗೆ ಪ್ರಧಾನಿಯಾಗಿ ಜೂ.9ಕ್ಕೆ ನರೇಂದ್ರ ಮೋದಿ ಪ್ರಮಾಣವಚನ



ಜೂ. 9 ಮೂರನೇ ಬಾರಿ ಪ್ರಧಾನಮಂತ್ರಿಯಾಗಿ ಮೋದಿ ಪಟ್ಟಾಭಿಷೇಕ

- ಜೂ. 5 ಕಾಪು ಸಿದ್ದಲಿಂಗಸ್ವಾಮಿ ನಿಧನ
- ಜೂ. 6 ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣ: ಸಚಿವ ನಾಗೇಂದ್ರ ರಾಜೀನಾಮೆ
- ಜೂ. 11 ಅಭಿಮಾನಿ ಅಪಹರಣ, ಹತ್ಯೆ ಆರೋಪ... ದರ್ಶನ್ ಬಂಧನ
- ಜೂ. 11 ದಸರಾ ಆನೆ ಅಶ್ವತ್ಥಾಮ ನಿಗೂಢ ಸಾವು





ಜೂ. 15 ನಟ ದರ್ಶನ್, ಪವಿತ್ರಾಗೌಡ ಸೇರಿ 13 ಮಂದಿ ಪೊಲೀಸ್ ಕಸ್ಟಡಿಗೆ



ಜೂ. 11 ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಇನ್ನಿಲ್ಲ

- ಜೂ. 18 ಚಾಮರಾಜನಗರ ಬಳಿ ಶ್ರೀಲಂಕಾ ಕ್ರಿಕೆಟರ್ ಮುತ್ತಯ್ಯ ಬೃಹತ್ ಉದ್ಯಮ ಸ್ಥಾಪನೆ
- ಜೂ. 19 ಹಿರಿಯ ರಂಗಕರ್ಮಿ ಡಾ.ನ.ರತ್ನ ಇನ್ನಿಲ್ಲ
- ಜೂ. 21 ಪೆಲಿಕಾನ್ ಪಬ್‌ನ ಪೊನ್ನು ಮುತ್ತಣ್ಣ ನಿಧನ
- ಜೂ. 23 ಹೆಚ್.ಡಿ.ರೇವಣ್ಣ ಪುತ್ರ, ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ಜೈಲಿಗೆ
- ಜೂ. 25 ಹಾಲಿನ ದರ ಪ್ರತಿ ಲೀಟರ್‌ಗೆ 2 ರೂ. ಹೆಚ್ಚಳ
- ಜೂ. 28 ಹಾವೇರಿ ಬಳಿ ನಿಂತಿದ್ದ ಲಾರಿಗೆ ಟಿಟಿ ಡಿಕ್ಕಿ: 13 ಮಂದಿ ಸಾವು
- ಜೂ. 29 ಭಾರತ ಮತ್ತೊಮ್ಮೆ ಟಿ20 ವಿಶ್ವ ಚಾಂಪಿಯನ್

ಜುಲೈ

- ಜು. 1 ಮುಡಾ ನಿವೇಶನ ಹಂಚಿಕೆ ಹಗರಣ :ಮುಡಾ ಆಯುಕ್ತ ಸೇರಿದಂತೆ ಪ್ರಮುಖ ಅಧಿಕಾರಿಗಳ ವರ್ಗಾವಣೆ
- ಜು. 1 **ಹಾಸನ:** ಎಸ್ಪಿಗೆ ತನ್ನ ವಿರುದ್ಧ ದೂರು ನೀಡಲು ಬಂದ ಪತ್ನಿಯನ್ನು ಇರಿದು ಕೊಂದ ಕಾನ್‌ಸ್ಟೇಬಲ್



ಜು. 3 ಮೈಸೂರು ನಗರ ಮೊದಲ ಮಹಿಳಾ ಪೊಲೀಸ್ ಆಯುಕ್ತರಾಗಿ ಸೀಮಾ ಲಾಟ್ಕರ್



ಜು. 5 ಮೈಸೂರು ನೂತನ ಡಿಸಿ ಜಿ. ಲಕ್ಷ್ಮೀಕಾಂತರೆಡ್ಡಿ



ಜು. 28 ಮೇಘಾಲಯ ನೂತನ ರಾಜ್ಯಪಾಲರಾಗಿ ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್ ನೇಮಕ

- ಜು. 4 ಮುಂಬೈನಲ್ಲಿ ಅಭಿಮಾನಿ ಸಾಗರದಲ್ಲಿ ಮಿಂದೆದ್ದ ಟೀಂ ಇಂಡಿಯಾ
- ಜು. 8 ಕನ್ನಡ ಚಳವಳಿಗಾರ ತಾಯೂರು ವಿಠಲಮೂರ್ತಿ ನಿಧನ
- ಜು. 12 ವಾಲ್ಮೀಕಿ ನಿಗಮದ ಹಣ ವರ್ಗಾವಣೆ ಪ್ರಕರಣ: ಇಡಿ ಹಿಡಿತಕ್ಕೆ ಶಾಸಕ ನಾಗೇಂದ್ರ
- ಜು. 29 ಕೆಆರ್‌ಎಸ್, ಕಬಿನಿ ಜಲಾಶಯಗಳಿಗೆ, ಸಿಎಂ, ಡಿಸಿಎಂ ಬಾಗಿನ



ಜು. 20 ಮುಡಾ ಹಗರಣ: ಸಿದ್ದರಾಮಯ್ಯ ದಂಪತಿ ಸೇರಿ 6 ಮಂದಿ ವಿರುದ್ಧ ಲೋಕಾಯುಕ್ತಕ್ಕೆ ದೂರು

ಜು. 30 ಕೇರಳದ ವಯನಾಡಲ್ಲಿ ಸರಣಿ ಭೂಕುಸಿತ: 125ಕ್ಕೂ ಅಧಿಕ ಮಂದಿ ಸಾವು



- ಜು. 31 ವಯನಾಡಲ್ಲಿ ಮಳೆ ರುದ್ರನರ್ತನ: ಉಕ್ಕಿ ಹರಿಯುತ್ತಿರುವ ಕಪಿಲೆ; ನಂಜುಂಡೇಶ್ವರನಿಗೆ ಜಲ ದಿಗ್ಬಂಧನ

ಆಗಸ್ಟ್

- ಆ. 2 ವಾಲ್ಮೀಕಿ ಹಗರಣ, ಮುಡಾ ಹಗರಣ: ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ಮೈಸೂರು ಚಲೋ ಪಾದಯಾತ್ರೆ
- ಆ. 3 ಮುಡಾ, ವಾಲ್ಮೀಕಿ ಹಗರಣ ಖಂಡಿಸಿ: ಬಿಜೆಪಿ–ಜೆಡಿಎಸ್ ಬೆಂಗಳೂರಿನಿಂದ ಮೈಸೂರು ಚಲೋ ಆರಂಭ
- ಆ. 7 ಆಲನಹಳ್ಳಿ ಶ್ರೀಗಳು ಲಿಂಗೈಕ್ಯ
- ಆ. 9 ನೀವೇನೇ ಮಾಡಿ ಬಗ್ಗೋನು ಅಲ್ಲ... ಜಗ್ಗೋನು ಅಲ್ಲ... : ಮುಖ್ಯಮಂತ್ರಿ ಸಿದ್ದರಾಮಯ್ಯ
- ಆ. 10 ಸಿಎಂ ಸಿದ್ದರಾಮಯ್ಯನವರು ರಾಜೀನಾಮೆ ಕೊಡುವವರೆಗೂ ದಿಟ್ಟ ಹೋರಾಟ; ಬಿಜೆಪಿ, ಜೆಡಿಎಸ್ ನಾಯಕರ ಶಪಥ
- ಆ. 11 ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ; ಸರ್ಕಾರದ ನಡೆಗೆ ಹೈಕೋರ್ಟ್ ತಾತ್ಕಾಲಿಕ ಬ್ರೇಕ್
- ಆ. 12 ಮೈಸೂರು ರಂಗಾಯಣ ನಿರ್ದೇಶಕರಾಗಿ ಸತೀಶ್ ತಿಪಟೂರು ನೇಮಕ
- ಆ. 16 70ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಪ್ರಕಟ : 'ಕಾಂತಾರ' ರಿಷಬ್ ಶೆಟ್ಟಿಗೆ ಅತ್ಯುತ್ತಮ ನಟ; ಯಶ್ 'ಕೆಜಿಎಫ್–2' ಅತ್ಯುತ್ತಮ ಚಿತ್ರ, ಸ್ಯಾಂಡಲ್‌ವುಡ್‌ಗೆ ಏಳು ಪ್ರಶಸ್ತಿ
- ಆ. 17 ಮುಖ್ಯಮಂತ್ರಿ ಸಿದ್ದರಾಮಯ್ಯ ತನಿಖೆಗೆ ರಾಜ್ಯಪಾಲರ ಅನುಮತಿ
- ಆ. 18 ಬೆಂಗಳೂರಿನಲ್ಲಿ ಪದವಿ ವಿದ್ಯಾರ್ಥಿನಿ ಸಾಮೂಹಿಕ ಅತ್ಯಾಚಾರ



ಆ. 21 ದಸರಾ ಆನೆಗಳಿಗೆ ಕಾಡಿನಿಂದ ನಾಡಿಗೆ ಸಾಂಪ್ರದಾಯಿಕ ಬೀಳ್ಕೊಡುಗೆ

- ಆ. 26 ಪರಪ್ಪನ ಅಗ್ರಹಾರ ಜೈಲಲ್ಲಿ ನಟ ದರ್ಶನ್‌ಗೆ ಐಷಾರಾಮಿ ಸೌಕರ್ಯ ಫೋಟೋ ವೈರಲ್: ಒಂಬತ್ತು ಮಂದಿ ಜೈಲು ಅಧಿಕಾರಿಗಳು ಅಮಾನತು
- ಆ. 27 ಬಳ್ಳಾರಿ ಜೈಲಿಗೆ ನಟ ದರ್ಶನ್ ಸ್ಥಳಾಂತರ

ಸೆಪ್ಟೆಂಬರ್

- ಸೆ. 1 ಕೆಎಸ್‌ಸಿಎ ಮಹಾರಾಜ ಟ್ರೋಫಿ–2024 ಮೈಸೂರು ವಾರಿಯರ್ಸ್ ಚಾಂಪಿಯನ್ಸ್
- ಸೆ. 2 ಮುಡಾ ನಿವೇಶನ ಹಗರಣ: ಮಾಜಿ ಆಯುಕ್ತ ದಿನೇಶ್‌ಕುಮಾರ್ ಅಮಾನತು
- ಸೆ. 3 ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆ, ಚಾಮುಂಡಿಬೆಟ್ಟ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್
- ಸೆ. 6 ಮಾಜಿ ಆಯುಕ್ತ ದಿನೇಶ್ ಕುಮಾರ್ ಪವಾಡ; ದಿಕ್ಕು ದೆಸೆ ಇಲ್ಲದ ಅರ್ಜಿಗೆ 7 ದಿನದಲ್ಲಿ 23,881 ಚದರಡಿ ಮುಡಾ ನಿವೇಶನ ಮಂಜೂರು
- ಸೆ. 10 ಮೈಸೂರು ಆಕಾಶವಾಣಿಗೆ 90ರ ಸಂಭ್ರಮ
- ಸೆ. 11 ಗಣೇಶನ ವಿಸರ್ಜನೆ ವೇಳೆ ಕಲ್ಲು, ಬಾಟಲು, ಚಪ್ಪಲಿ, ಪೆಟ್ರೋಲ್ ಬಾಂಬ್ ತೂರಾಟ; ನಾಗಮಂಗಲ ಉದ್ವಿಗ್ನ
- ಸೆ. 12 ಸಿಪಿಐ(ಎಂ) ನಾಯಕ ಸೀತಾರಾಮ್ ಯೆಚೂರಿ ನಿಧನ
- ಸೆ. 13 ಸಿಎಂ ಪತ್ನಿ ಪಾರ್ವತಿ ಕೋರಿದ್ದು 13 ನಿವೇಶನ, ಮುಡಾ ನೀಡಿದ್ದು 14 ನಿವೇಶನ



ಸೆ. 14 ಕೊಲೆ ಬೆದರಿಕೆ, ಜಾತಿ ನಿಂದನೆ ಪ್ರಕರಣದಲ್ಲಿ ಬಿಜೆಪಿ ಶಾಸಕ ಮುನಿರತ್ನ ಬಂಧನ



ಸೆ. 2 ಮುಡಾ ನಿವೇಶನ ಹಗರಣ: ಮಾಜಿ ಆಯುಕ್ತ ದಿನೇಶ್‌ಕುಮಾರ್ ಅಮಾನತು

- ಸೆ. 15 ವಿಶ್ವದಾಖಲೆ ಬರೆದ ಪ್ರಜಾಪ್ರಭುತ್ವ ದಿನಾಚರಣೆ
- ಸೆ. 16 ಮೈಸೂರು ಟಾಯ್ಸ್ ಖ್ಯಾತಿಯ ಪ್ರಫುಲ್ಲ ಚಂದ್ರ ಇನ್ನಿಲ್ಲ
- ಸೆ. 18 ಒಂದು ದೇಶ, ಒಂದು ಚುನಾವಣೆ, ಪ್ರಧಾನಿ ಮೋದಿ ಸಂಪುಟ ಅನುಮೋದನೆ
- ಸೆ. 21 ಬೆಂಗಳೂರಲ್ಲಿ ಭೀಕರವಾಗಿ ನೇಪಾಳದ ಯುವತಿ ಮರ್ಡರ್, 30 ತುಂಡು ಮಾಡಿ ಫ್ರಿಡ್ಜ್‌ಗೆ ತುಂಬಿದ ಕ್ರೂರಿ
- ಸೆ. 22 ತಿರುಪತಿ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆ ಪ್ರತಿಧ್ವನಿ: ಸರ್ಕಾರದ ಸ್ವಾಧೀನದಿಂದ ದೇಗುಲ ಮುಕ್ತಗೊಳಿಸಲು ಮಠಮಾನ್ಯಗಳ ಆಗ್ರಹ
- ಸೆ. 25 ಮುಡಾ ನಿವೇಶನ ಹಂಚಿಕೆ ಅಕ್ರಮ ಆರೋಪ; ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶ
- ಸೆ. 27 ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತದಲ್ಲಿ ಎಫ್‌ಐಆರ್
- ಸೆ. 28 ಚುನಾವಣಾ ಬಾಂಡ್‌ಗಳ ಮೂಲಕ ಸಾವಿರಾರು ಕೋಟಿ ಲೂಟಿ ಆರೋಪ: ನಿರ್ಮಲಾ ಸೀತಾರಾಮನ್, ನಡ್ಡಾ, ಬಿ.ವೈ ವಿಜಯೇಂದ್ರ ವಿರುದ್ಧ ಎಫ್‌ಐಆರ್
- ಸೆ. 29 ಜಾತಿ ಗಣತಿ ವರದಿ ಶಿಫಾರಸು ಜಾರಿ
- ಸೆ. 29 ಮೈಸೂರು ಹೊರವಲಯದಲ್ಲಿ ರೇವ್ ಪಾರ್ಟಿ
- ಸೆ. 30 ಮುಡಾ ಆಯುಕ್ತರಿಗೆ ಸಿಎಂ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಪತ್ರ: 14 ನಿವೇಶನ ಹಿಂದಿರುಗಿಸಲು ನಿರ್ಧಾರ

ಅಕ್ಟೋಬರ್

- ಅ. 2 ಕೊಡಗಲ್ಲಿ ಅಂತರರಾಷ್ಟ್ರೀಯ ಡ್ರಗ್ಸ್ ಮಾರಾಟ ಜಾಲ ಪತ್ತೆ
- ಅ. 3 ಮೈಸೂರು ದಸರಾ ಪ್ರಾರಂಭ, ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿ ಡಾ.ಹಂಪ ನಾಗರಾಜಯ್ಯ ನಾಡಹಬ್ಬ ಉದ್ಘಾಟನೆ
- ಅ. 3 ಎಫ್‌ಐಆರ್ ಆಗಿದ್ದಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅಗತ್ಯವಿಲ್ಲ: ಶಾಸಕ ಜಿ.ಟಿ. ದೇವೇಗೌಡ
- ಅ. 4 ಏಕಾಏಕಿ ದಿಕ್ಕಾಪಾಲಾಗಿ ಓಡಿದ ಆನೆ ಲಕ್ಷ್ಮಿ
- ಅ. 6 ಯುವ ದಸರಾ ಸಂಗೀತ, ನೃತ್ಯ ರಸದೌತಣಕ್ಕೆ ಚಾಲನೆ
- ಅ. 9 ರತನ್ ಟಾಟಾ ಇನ್ನಿಲ್ಲ
- ಅ. 9 ಮೈಸೂರಲ್ಲಿ ಎ.ಆರ್.ರೆಹಮಾನ್ ಗಾನ ಮೋಡಿ
- ಅ. 10 ಶುದ್ಧ ಸಂಗೀತದ ಎಲ್ಲಾ ಪ್ರಾಕಾರಗಳ ಮೂಲಕ ನೆರೆದ ಜನರ ರಂಜಿಸಿದ ಡಾ.ಇಳಯರಾಜ ಗಾನ ತಂಡ



ಅ. 12 ಅದ್ದೂರಿ ಜಂಬೂಸವಾರಿ, ವೈಭವೋಪೇತ ಮೆರವಣಿಗೆ ಕಣ್ತುಂಬಿಕೊಂಡ ಲಕ್ಷಾಂತರ ಜನ

- ಅ. 13 ದಸರಾ: ಮೈಸೂರಲ್ಲಿ ಜನಸಾಗರ
- ಅ. 13 ಪಾಂಡವಪುರ: ಪತ್ನಿ ಜೊತೆ ಸಂಬಂಧ ಹೊಂದಿದ್ದ ಯುವಕನ ಗುಂಡಿಕ್ಕಿ ಹತ್ಯೆ ಯತ್ನ
- ಅ. 13 ರಾಜವಂಶಸ್ಥ ಯದುವೀರ್ ಪತ್ನಿ ತ್ರಿಷಿಕಾ ಕುಮಾರಿ ಗಂಡು ಮಗುವಿಗೆ ಜನನ
- ಅ. 14 ಹಿರಿಯ ಚಿತ್ರ ನಿರ್ದೇಶಕ ಚಿ.ದತ್ತರಾಜ್ ನಿಧನ
- ಅ. 16 ಚಾಮುಂಡಿಬೆಟ್ಟದಲ್ಲಿ ವಿಜೃಂಭಣೆಯ ನಾಡದೇವಿ ರಥೋತ್ಸವ
- ಅ. 16 ಮುಡಾ ಅಧ್ಯಕ್ಷ ಕೆ. ಮರೀಗೌಡ ರಾಜೀನಾಮೆ
- ಅ. 16 ಜಗ್ ಥೆರಪಿ ಸಂಸ್ಥಾಪಕ ಡಾ. ಕೆಆರ್‌ಐ ಜಗದೀಶ್ ಇನ್ನಿಲ್ಲ
- ಅ. 17 ಪುಣ್ಯಕ್ಷೇತ್ರ ತಲಕಾವೇರಿಯಲ್ಲಿ ತೀರ್ಥಸ್ವರೂಪಿಣಿ ಕಾವೇರಿ ದರ್ಶನ
- ಅ. 18 ಇಡಿ ಹಿಡಿತದಲ್ಲಿ ಮುಡಾ
- ಅ. 18 ಭಕ್ತಿ–ಭಾವದ ನಡುವೆ ವಿಜೃಂಭಣೆಯಿಂದ ನೆರವೇರಿದ ಚಾಮುಂಡೇಶ್ವರಿ ತೆಪ್ಪೋತ್ಸವ
- ಅ. 19 ಗಂಜೀಫಾ ರಘುಪತಿ ಭಟ್ಟರಿಗೆ ಕಾಳಿದಾಸ್ ಸಮ್ಮಾನ್ ಪ್ರಶಸ್ತಿ
- ಅ. 21 ಮೈಸೂರಲ್ಲಿ ಮಳೆ ಅಬ್ಬರ; ಹೊಳೆ–ಹೊಂಡಗಳಾದ ರಸ್ತೆಗಳು, ಜನ–ವಾಹನ ಸಂಚಾರ ಅಸ್ತವ್ಯಸ್ತ
- ಅ. 21 ವಿಧಾನಪರಿಷತ್ ಸದಸ್ಯತ್ವಕ್ಕೆ ಸಿ.ಪಿ. ಯೋಗೇಶ್ವರ್ ರಾಜೀನಾಮೆ
- ಅ. 24 ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಅಭ್ಯರ್ಥಿ, ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ನಾಮಪತ್ರ ಸಲ್ಲಿಕೆ
- ಅ. 25 ಮೈಸೂರು ಲೋಕಾಯುಕ್ತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ವಿಚಾರಣೆ
- ಅ. 26 ಬೇಲೆಕೇರಿ ಅದಿರು ನಾಪತ್ತೆ ಪ್ರಕರಣ: ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ 7 ವರ್ಷ ಕಠಿಣ ಜೈಲು ಶಿಕ್ಷೆ
- ಅ. 29 ಮುಡಾದ ಬ್ರಹ್ಮಾಂಡ ಭ್ರಷ್ಟಾಚಾರ: ಮೈಸೂರಿನ ಎಂಎಂಜಿ ಕನ್‌ಸ್ಟ್ರಕ್ಷನ್ ಮೇಲೆ ದಾಳಿ
- ಅ. 29 ಮುಡಾ ನಿವೇಶನ ಹಂಚಿಕೆ ಶೋಧನೆ: ಮಾಜಿ ಮುಡಾ ಆಯುಕ್ತ ಡಾ.ನಟೇಶ್ ಇಡಿ ವಶಕ್ಕೆ
- ಅ. 30 ಅಯೋಧ್ಯೆ ಬಾಲರಾಮನ ಶಿಲ್ಪಿ ಅರುಣ್ ಯೋಗಿರಾಜ್, ಮಾಜಿ ಸಿಎಂ ವೀರಪ್ಪ ಮೊಯಿಲಿ, ಬಿ.ಟಿ.ಲಲಿತಾನಾಯಕ್, ಡಾ. ಮೈಸೂರು ಸತ್ಯನಾರಾಯಣ, ಜನ್ನಿ, ಡಿ.ರಾಮು, ಪದ್ಮಾಶೇಖರ್, ಪಿ. ರಾಜಗೋಪಾಲ, ಶ್ರೀಮತಿ ಪುಟ್ಟೀರಮ್ಮ ಸೇರಿದಂತೆ 69 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ
- ಅ. 30 ಚಿತ್ರದುರ್ಗ ರೇಣುಕಾಸ್ವಾಮಿ ಹತ್ಯೆ ಪ್ರಕರಣ: ನಟ ದರ್ಶನ್‌ಗೆ ಮಧ್ಯಂತರ ಜಾಮೀನು, ಜೈಲಿಂದ ಬಿಡುಗಡೆ

ನವೆಂಬರ್


- ನ. 4 ವಕ್ಫ್ ನೋಟೀಸ್ ಕಿಡಿ: ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ
- ನ. 4 ಮೈಸೂರಿನ ಹೋಟೆಲ್‌ನಲ್ಲಿ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ
- ನ. 5 ಮುಡಾ ಪ್ರಕರಣ ಸಿಬಿಐಗೆ ವಹಿಸಲು ಕೋರಿದ ಅರ್ಜಿ ವಿಚಾರಣೆ: ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ, ಇತರರಿಗೆ ಹೈಕೋರ್ಟ್ ನೋಟಿಸ್ ಜಾರಿ
- ನ. 6 ಲೋಕಾಯುಕ್ತ ವಿಚಾರಣೆಗೆ ಸಿದ್ದರಾಮಯ್ಯ ಹಾಜರು: ತನಿಖಾಧಿಕಾರಿಗಳಿಂದ 2 ಗಂಟೆಗಳ ಕಾಲ ಸುದೀರ್ಘ ಪ್ರಶ್ನೆಗಳ ಸುರಿಮಳೆ
- ನ. 7 ನ್ಯಾ. ಪಿ.ಎನ್.ದೇಸಾಯಿ ವರದಿ ಬಂದ ನಂತರ 50:50 ಅನುಪಾತದ ನಿವೇಶನ ರದ್ದು, ಮುಡಾ ಸಾಮಾನ್ಯ ಸಭೆ ಒಕ್ಕೊರಲ ನಿರ್ಣಯ
- ನ. 9 ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಮನೆ ಮಾರಾಟಕ್ಕಿದೆ!
- ನ. 12 ಏಕಕಾಲದಲ್ಲಿ ಪಾಲಿಕೆ, ಮುಡಾದಲ್ಲಿ ನೌಕರಿ; ಎರಡೂ ಕಡೆ ವೇತನ ಪಡೆಯುತ್ತಿದ್ದ ಮುಡಾ ನಿವೇಶನದ ಕಿಂಗ್‌ಪಿನ್ ಬಿ.ಕೆ.ಕುಮಾರ್ ಸೇವೆಯಿಂದ ವಜಾ
- ನ. 12 ಮುಡಾದಲ್ಲಿ 50:50ರ ನಿವೇಶನ ಹಂಚಿಕೆ ಹಗರಣ: ನ್ಯಾ.ದೇಸಾಯಿ ಆಯೋಗ ಮುಡಾ ಭೇಟಿ



ನ. 6 ಅಮೆರಿಕ ಅಧ್ಯಕ್ಷೀಯ ಚುನಾವಣೆ: ಟ್ರಂಪ್‌ಗೆ ಐತಿಹಾಸಿಕ ಗೆಲುವು



ನ. 12 ಅಮೇರಿಕದಲ್ಲಿ ಮೈಸೂರಿನ ಯೋಗಗುರು ಶರತ್ ಜೋಯಿಸ್ ನಿಧನ



ನ. 19 ಉಡುಪಿ: ಎನ್‌ಕೌಂಟರ್‌ನಲ್ಲಿ ನಕ್ಸಲ್ ನಾಯಕ ವಿಕ್ರಂಗೌಡ ಬಲಿ

- ನ. 13 ನನ್ನನ್ನ ಮುಟ್ಟಿದರೆ ಕರ್ನಾಟಕದ ಜನ ಸುಮ್ಮನೆ ಬಿಡಲ್ಲ... ಕೇಂದ್ರ ಸರ್ಕಾರಕ್ಕೆ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ ಸಂದೇಶ
- ನ. 15 ಮುಡಾದಿಂದ 14 ನಿವೇಶನ ಹಂಚಿಕೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಸ್ತಕ್ಷೇಪದ ಪುರಾವೆ ಇಲ್ಲ; ಆದರೆ ಅಧಿಕಾರಿಗಳದ್ದೇ ಮಹಾಲೋಪ
- ನ. 16 ಮುಡಾ ನಿವೇಶನ ಹಂಚಿಕೆ ಹಗರಣ: ಮಾಜಿ ಆಯುಕ್ತ ಡಾ. ನಟೇಶ್ ತನಿಖೆಗೆ ಸರ್ಕಾರ ಅನುಮತಿ
- ನ. 17 ಮೈಸೂರಿನ ಮೂವರು ವಿದ್ಯಾರ್ಥಿನಿಯರು ಮಂಗಳೂರು ರೆಸಾರ್ಟ್ ಸ್ವಿಮ್ಮಿಂಗ್ ಪೂಲ್‌ನಲ್ಲಿ ಜಲಸಮಾಧಿ
- ನ. 18 ವಿಪಕ್ಷಗಳಿಗೆ ಕೋವಿಡ್ ಅಕ್ರಮ ಪ್ರತ್ಯಾಸ್ತ್ರ!
- ನ. 19 ಲೋಕಾಯುಕ್ತ ಮೈಸೂರು ಎಸ್‌ಪಿ ಕಚೇರಿಯಲ್ಲಿ ಮುಡಾ ಮಾಜಿ ಆಯುಕ್ತ ಡಾ. ಡಿ.ಬಿ. ನಟೇಶ್ ವಿಚಾರಣೆ
- ನ. 20 ಮಂಡ್ಯದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಗೊ.ರು. ಚನ್ನಬಸಪ್ಪ ಅವಿರೋಧ ಆಯ್ಕೆ
- ನ. 23 ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ಕೈ ವಶ, ಸಿ.ಪಿ. ಯೋಗೇಶ್ವರ್, ಯಾಸಿರ್ ಖಾನ್ ಪಠಾಣ್, ಇ. ಅನ್ನಪೂರ್ಣ ಜಯಭೇರಿ, ರಾಹುಲ್ ದಾಖಲೆ ಬ್ರೇಕ್ : ವಯನಾಡ್‌ನಲ್ಲಿ ಪ್ರಿಯಾಂಕಾ ಗಾಂಧಿಗೆ 4.10 ಲಕ್ಷ ಭಾರಿ ಮತಗಳ ಅಂತರದ ಗೆಲುವು
- ನ. 25 ಐಪಿಎಲ್ ಪ್ರವೇಶಿಸಿದ ಮೈಸೂರಿನ ಕ್ರಿಕೆಟಿಗ ಮನ್ವಂತ್‌ಕುಮಾರ್
- ನ. 25 ಕಂಸಾಳೆ ಕುಮಾರಸ್ವಾಮಿ ನಿಧನ
- ನ. 27 ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ದರ ಶೇ. 10.75 ರಷ್ಟು ಹೆಚ್ಚಳ
- ನ. 28 ಪ್ರಿಯಾಂಕಾ ಗಾಂಧಿ ಪ್ರಮಾಣ ವಚನ

ಡಿಸೆಂಬರ್

- ಡಿ. 1 ಕನ್ನಡದ ಕಿರುತೆರೆ ನಟಿ ಶೋಭಿತಾ ಶಿವಣ್ಣ ಆತ್ಮಹತ್ಯೆ



ಡಿ. 10 ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಇನ್ನಿಲ್ಲ



ಡಿ. 10 ಕೊಳ್ಳೇಗಾಲದ ಮಾಜಿ ಶಾಸಕ ಎಸ್.ಜಯಣ್ಣ ನಿಧನ

- ಡಿ. 11 ಎಸ್.ಎಂ.ಕೃಷ್ಣ ಪಂಚಭೂತಗಳಲ್ಲಿ ಲೀನ; ಸಕಲ ಸರ್ಕಾರಿ ಗೌರವಗಳೊಂದಿಗೆ ಸೋಮನಹಳ್ಳಿಯಲ್ಲಿ ಅಂತ್ಯಕ್ರಿಯೆ
- ಡಿ. 12 ಭಾರತದ ಗುಕೇಶ್ ವಿಶ್ವ ಚೆಸ್ ಸಾಮ್ರಾಟ
- ಡಿ. 13 ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣ: ದರ್ಶನ್ ಗ್ಯಾಂಗ್‌ಗೆ ಜಾಮೀನು
- ಡಿ. 14 ವಕ್ಫ್ ಆಸ್ತಿ ವಿಚಾರದಲ್ಲಿ ಸುಮ್ಮನಿರಲು ಅನ್ವರ್ ಮಾಣಿಪ್ಪಾಡಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ 150 ಕೋಟಿ ರೂ. ಆಮಿಷ; ಸಿದ್ದರಾಮಯ್ಯ ಹೊಸ ಬಾಂಬ್
- ಡಿ. 17 ಒಂದು ರಾಷ್ಟ್ರ ಒಂದು ಚುನಾವಣೆ ಲೋಕಸಭೆಯಲ್ಲಿ ವಿಧೇಯಕ ಮಂಡನೆ
- ಡಿ. 17 ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣ: ಜೈಲಿನಿಂದ ಪವಿತ್ರಾಗೌಡ ಬಿಡುಗಡೆ
- ಡಿ. 19 ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಆರೋಪ, ಸುವರ್ಣ ಸೌಧದಲ್ಲಿ ರಂಪಾಟ, ಆರ್ಭಟ: ಎಂಎಲ್‌ಸಿ ಸಿ.ಟಿ.ರವಿ ಬಂಧನ
- ಡಿ. 20 ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ
- ಡಿ. 21 ಮಂಡ್ಯ ಜಿಲ್ಲೆಯಲ್ಲಿ ಎರಡು ಪ್ರತ್ಯೇಕ ಪ್ರಕರಣ: ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿ ಐವರ ದುರ್ಮರಣ
- ಡಿ. 21 ನೆಲಮಂಗಲ ಬಳಿ ಘೋರ ರಸ್ತೆ ದುರಂತ: ಕಾರಿನ ಮೇಲೆ ಕಂಟೇನರ್ ಉರುಳಿ ಒಂದೇ ಕುಟುಂಬದ 6 ಮಂದಿ ಸಾವು
- ಡಿ. 23 ಮೈಸೂರು ಪಾಲಿಕೆಯಿಂದ ಇ–ಖಾತಾ ಅಭಿಯಾನ
- ಡಿ. 24 ವಿಧಾನಪರಿಷತ್‌ನಲ್ಲಿ ಅಶ್ಲೀಲ ಪದ ಬಳಕೆ: ಸಿಐಡಿ ತನಿಖೆ
- ಡಿ. 24 ಮೈಸೂರಲ್ಲಿ ಸಡಗರ, ಭಕ್ತಿಭಾವದ ಕ್ರಿಸ್‌ಮಸ್ ಆಚರಣೆ
- ಡಿ. 25 ಆರ್‌ಆರ್ ನಗರದ ಶಾಸಕ ಮುನಿರತ್ನ ಮೇಲೆ ಮೊಟ್ಟೆ ದಾಳಿ



ಡಿ. 27 ಭಾರತದ ಆರ್ಥಿಕ ಸುಧಾರಣೆಯ ಹರಿಕಾರ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಇನ್ನಿಲ್ಲ

ಗಾಳಿಬೀಡುವಿನಲ್ಲಿ ಕಾಳಿಂಗ ಸರ್ಪ ಸೆರೆ



ಗಾಳಿಬೀಡು ಗ್ರಾಮದಲ್ಲಿ ಸೆರೆ ಹಿಡಿದ ಕಾಳಿಂಗ ಸರ್ಪ.

ಮಡಿಕೇರಿ: ಗಾಳಿಬೀಡು ಗ್ರಾಮದ ಮನೆಯೊಂದರಲ್ಲಿ ಬೃಹತ್ ಗಾತ್ರದ ಕಾಳಿಂಗ ಸರ್ಪವನ್ನು ಸೆರೆ ಹಿಡಿದು ರಕ್ಷಿಸಲಾಗಿದೆ. ಗ್ರಾಮದ ಕೋಚನ ಬೇಬಿ ಚೊಂದಮ್ಮ ಅವರ ಮನೆಯಲ್ಲಿ 12 ಅಡಿ ಉದ್ದದ ಕಾಳಿಂಗ ಸರ್ಪ ನುಸುಳಿತ್ತು. ಮನೆಯವರು ಉರಗ ರಕ್ಷಕರಾದ ಪಿಯೂಶ್ ಪೆರೆರಾಗೆ ಮಾಹಿತಿ ನೀಡಿದರು. ಸ್ಥಳಕ್ಕಾಗಮಿಸಿದ ಪಿಯೂಸ್ ಪಿರೆರಾ ಬೃಹತ್ ಗಾತ್ರದ ಕಾಳಿಂಗ ಸರ್ಪವನ್ನು ಸೆರೆ ಹಿಡಿದು, ಸಮೀಪದ ಅರಣ್ಯಕ್ಕೆ ಬಿಟ್ಟಿದ್ದಾರೆ.

ಕಟ್ಟೆಮಾಡು ಗ್ರಾಮದ ಮಹಾಮೃತ್ಯುಂಜಯ ದೇವಾಲಯ ಪ್ರವೇಶಕ್ಕೆ ಅಡ್ಡಿ

ಕೊಡವ ಸಮಾಜದಿಂದ ಖಂಡನೆ

ಮಡಿಕೇರಿ, ಡಿ.29–ಕಟ್ಟೆಮಾಡು ಗ್ರಾಮದ ಶ್ರೀ ಮಹಾಮೃತ್ಯುಂಜಯ ದೇವಾಲಯದಲ್ಲಿ ಪ್ರಥಮ ವಾರ್ಷಿಕ ಉತ್ಸವ ಸಂದರ್ಭದಲ್ಲಿ ಕೊಡವ ಜನಾಂಗದವರು ತಮ್ಮ ಸಾಂಪ್ರದಾಯಿಕ ಉಡುಗೆಯೊಂದಿಗೆ ತೆರಳಿದ್ದರು. ಈ ವೇಳೆ ದೇವಾಲಯ ಪ್ರವೇಶಿಸದಂತೆ ಅಡ್ಡಿಪಡಿಸಲಾಗಿದೆ ಎಂದು ಮಡಿಕೇರಿ ಕೊಡವ ಸಮಾಜದಿಂದ ನಡೆದ ಪುತ್ತರಿ ಊರೊರ್ಮೆ ಹಾಗೂ ನಗರದ ಮಂದ್‌ನಲ್ಲಿ ಕೋಲಾಟ್ ಕಾರ್ಯಕ್ರಮದಲ್ಲಿ ತೀವ್ರವಾಗಿ ಖಂಡಿಸಲಾಯಿತು.



ಮಡಿಕೇರಿ ಮಂದ್‌ನಲ್ಲಿ ನಡೆದ ಪುತ್ತರಿ ಊರೊರ್ಮೆ ಹಾಗೂ ಕೋಲಾಟ್ ಕಾರ್ಯಕ್ರಮದಲ್ಲಿ ಕೊಡವ ಸಮಾಜದವರು ಭಾಗವಹಿಸಿದ್ದರು.

ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಮುತ್ತಪ್ಪ, ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಕನ್ನಂಡ ಕವಿತಾ ಬೊಳ್ಳಪ್ಪ, ಮಾಜಿ ಜಂಟಿ ಕಾರ್ಯದರ್ಶಿ ಶಾಂತಿಯಂಡ ಸನ್ನಿ ಪೂವಯ್ಯ, ಬೊಪ್ಪಂಡ ಶ್ಯಾಂ ಪೂರ್ಣಚ್ಚ ಕಲಿಯಮಂಡ ಸರಸ್ವತಿ ಮಾತನಾಡಿ, ಕೊಡವ ಜನಾಂಗದವರು ಜಿಲ್ಲಾದ್ಯಂತ ಪ್ರಾಚೀನ ಕಾಲದಿಂದಲೂ ಕೊಡವ ಸಾಂಪ್ರದಾಯಿಕ ಉಡುಗೆಯೊಂದಿಗೆ ಭಕ್ತಿ ಪೂರ್ವಕವಾಗಿ ತೆರಳುವುದು ಧಾರ್ಮಿಕ ಆಚರಣೆಯ ನಂಬಿಕೆಯೊಂದಿಗೆ ಸಾಂಸ್ಕೃತಿಕ ಪ್ರದರ್ಶನ ನೀಡುತ್ತಿರುವುದು ಇಡೀ ಜಿಲ್ಲೆಗೆ ತಿಳಿದಿರುವ ವಿಷಯ. ಆದರೆ, ಕಟ್ಟೆಮಾಡು ಗ್ರಾಮದಲ್ಲಿ ಇದಕ್ಕೆ ವಿರೋಧ' ವ್ಯಕ್ತಪಡಿಸಿರುವುದು ಖಂಡನೀಯ. ಇದನ್ನು ವಿರೋಧಿಸಿ ಮುಂದಿನ ದಿನಗಳಲ್ಲಿ ನಡೆಯುವ ಎಲ್ಲಾ ಪ್ರತಿಭಟನೆಗಳಿಗೆ ಬೆಂಬಲ ನೀಡಲು ಇದೇ ಸಂದರ್ಭ ತೀರ್ಮಾನಿಸಲಾಯಿತು.

ಮೃತ್ಯುಂಜಯ ದೇವಾಲಯ ವ್ಯಾಪ್ತಿ ನಿಷೇಧಾಜ್ಞೆ

ಮಡಿಕೇರಿ: ಮರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಸ್.ಕಟ್ಟೆಮಾಡು ಗ್ರಾಮದ ಶ್ರೀ ಮಹಾಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ವೇಳೆ ಎರಡು ಸಮುದಾಯಗಳ ನಡುವೆ ವಸ್ತ್ರಸಂಹಿತೆ ಸಂಬಂಧ ನಡೆದ ಅಹಿತಕರ ಘಟನೆಯಿಂದ ಗ್ರಾಮದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಈ ಕುರಿತು ಉಪವಿಭಾಗಾಧಿಕಾರಿ ನರ್ವಾಡೆ ವಿನಾಯಕ ಆದೇಶ ಹೊರಡಿಸಿದ್ದು, ಡಿ.30ರ ಬೆಳಗ್ಗೆ 6 ಗಂಟೆಯಿಂದ ಜ.2ರ ಬೆಳಗ್ಗೆ 6 ಗಂಟೆವರೆಗೆ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಮಹಾಮೃತ್ಯುಂಜಯ ದೇವಾಲಯದ 5 ಕಿ.ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. 5 ಜನರಿಗಿಂತ ಹೆಚ್ಚು ಜನರು ಗುಂಪು ಸೇರುವುದು, ಪ್ರತಿಭಟನೆ, ರ್‍ಯಾಲಿ, ಜಾಥಾ, ಪ್ರಚೋದನಾತ್ಮಕ ಘೋಷಣೆ ಕೂಗದಂತೆ ನಿರ್ಬಂಧಿಸಿ ಉಪವಿಭಾಗಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಪೊಲೀಸ್ ಭದ್ರತೆ: ಘಟನಾ ಸ್ಥಳದಲ್ಲಿ ಬಿಗುವಿನ ವಾತಾವರಣ ಹಿನ್ನೆಲೆಯಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ದೇವಾಲಯ ಆವರಣದಲ್ಲಿ ಕೆಎಸ್‌ಆರ್‌ಪಿ, ಜಿಲ್ಲಾ ಸಶಸ್ತ್ರ ದಳ ಸಹಿತ ಒಟ್ಟು 80 ಸಿಬ್ಬಂದಿ ನಿಯೋಜಿಸಲಾಗಿದೆ ಪೊಲೀಸ್ ಗಸ್ತು ಕೂಡ ಹಾಕಲಾಗಿದೆ.

ವಾರ್ಷಿಕೋತ್ಸವದಲ್ಲಿ ಬೈಲಾ ನಿಯಮ ಉಲ್ಲಂಘನೆ ಆರೋಪ

ಮಡಿಕೇರಿ, ಡಿ.29–ಕಟ್ಟೆಮಾಡು ಗ್ರಾಮದ ಮಹಾಮೃತ್ಯುಂಜಯ ಮಹದೇಶ್ವರ ಕ್ಷೇತ್ರದ ಪ್ರಥಮ ವಾರ್ಷಿಕೋತ್ಸವದಲ್ಲಿ ಬೈಲಾ ನಿಯಮ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ಗೌಡ ಸಮಾಜ ಒಕ್ಕೂಟ ಮತ್ತು ವಿವಿಧ ಗೌಡ ಸಂಘಟನೆಗಳು ಸಭೆ ನಡೆಸಿದವು.

ನಗರದ ಗೌಡ ಸಮಾಜದಲ್ಲಿ ಸಭೆ ನಡೆಸಿದ ವಿವಿಧ ಗೌಡ ಸಮಾಜದ ಅಧ್ಯಕ್ಷರು ಮತ್ತು ಗೌಡ ಸಮುದಾಯ ಸಂಘಟನೆಗಳು ದೇವಸ್ಥಾನ ಪ್ರವೇಶಿಸಿ ಸುಮಾರು 4 ಗಂಟೆಗಳ ಕಾಲ ದೇವರ ಮೂರ್ತಿಯನ್ನು ಜಳಕಕ್ಕೆ ಕೊಂಡೊಯ್ಯುವುದಕ್ಕೆ ಅಡ್ಡಿಪಡಿಸಿ ದೇವಸ್ಥಾನದ ಒಳಗೆ ಜಾತಿ ವೈಷಮ್ಯ ಹುಟ್ಟು ಹಾಕಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಹಾಮೃತ್ಯುಂಜಯ ಕ್ಷೇತ್ರದಲ್ಲಿ ಪ್ರತಿ ಸೋಮವಾರ ಕ್ಷೇತ್ರದ ವತಿಯಿಂದ ಜರುಗುವ ಮೃತ್ಯುಂಜಯ ಹೋಮ ಹಾಗೂ ಪೂಜಾ ಕಾರ್ಯಕ್ಕೆ ಸಾವಿರಕ್ಕೂ ಅಧಿಕ ಭಕ್ತರು ಭಾಗವಹಿಸುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಕೆಲ ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಗೌಡ ಜನಾಂಗವನ್ನು ಅವಹೇಳನ ಮಾಡಿರುವುದು, ದೇವಸ್ಥಾನ ಆವರಣದಲ್ಲಿ ವ್ಯಕ್ತಿಯೊಬ್ಬ ಮಾರಕಾಸ್ತ್ರವನ್ನು ತೋರಿಸಿ ಶ್ರೀಕ್ಷೇತ್ರಕ್ಕೆ ಅವಮಾನ ಮಾಡಿರುವುದನ್ನು ಸಭೆಯಲ್ಲಿ ಖಂಡಿಸಲಾಯಿತು.

ಈ ಬಗ್ಗೆ ಜಿಲ್ಲಾಡಳಿತ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು. ಸಂಘಟನೆವೊಂದರ ವ್ಯಕ್ತಿ ಗೌಡ ಜನಾಂಗವನ್ನು ಜಾತಿ ನಿಂದನೆ ಮಾಡಿರುವುದು ಖಂಡನೀಯ. ಈ ಬಗ್ಗೆ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು. ಸಾಮಾಜಿಕ ಜಾಲತಾಣಗಳಲ್ಲಿ ಗೌಡ ಜನಾಂಗವನ್ನು ಅಶ್ಲೀಲ ಪದಗಳಿಂದ ನಿಂದಿಸುವ ವ್ಯಕ್ತಿಗಳ ವಿರುದ್ಧ ಪೊಲೀಸ್ ಇಲಾಖೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.



ಮಡಿಕೇರಿ ಗೌಡ ಸಮಾಜದಲ್ಲಿ ಗೌಡ ಸಮಾಜ ಒಕ್ಕೂಟ ಮತ್ತು ವಿವಿಧ ಗೌಡ ಸಂಘಟನೆಗಳ ಸಭೆ ನಡೆಯಿತು.

ಹೊತ್ತಿ ಉರಿದ ಕಂಟೈನರ್; ಚಾಲಕ, ಕ್ಲೀನರ್ ಪಾರು



ಜೋಡುಪಾಲ ಬಳಿ ಭತ್ತದ ಮೂಟೆ ಸಾಗಿಸುತ್ತಿದ್ದ ಕಂಟೈನರ್ ಹೊತ್ತಿ ಉರಿದಿರುವುದು.

ಮಡಿಕೇರಿ: ಭತ್ತದ ಮೂಟೆಗಳನ್ನು ಸಾಗಿಸುತ್ತಿದ್ದ ಕಂಟೈನರ್ ಹೊತ್ತಿ ಉರಿದ ಘಟನೆ ಜೋಡುಪಾಲ ಬಳಿ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

ಚಾಲಕ ಮತ್ತು ಕ್ಲೀನರ್ ಕಂಟೈನರ್‌ನಿಂದ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೆಚ್.ಡಿ.ಕೋಟೆಯಿಂದ ಭತ್ತದ ಮೂಟೆಗಳನ್ನು ತುಂಬಿಕೊಂಡು ಜೋಡುಪಾಲ ಮಾರ್ಗವಾಗಿ ಉಡುಪಿ ಕಡೆಗೆ ಶನಿವಾರ ತಡರಾತ್ರಿ ಕಂಟೈನರ್ ಹೋಗುತ್ತಿತ್ತು. ಜೋಡುಪಾಲ ಬಳಿ ಇಂಜಿನ್ ಭಾಗದಲ್ಲಿ ಹೊಗೆ ಸಹಿತ ಬೆಂಕಿ ಕಂಡು ಬಂದಿದೆ. ಇದರಿಂದ ತಕ್ಷಣ ಚಾಲಕ ಮತ್ತು ಕ್ಲೀನರ್ ಕಂಟೈನರ್‌ನಿಂದ ಜಿಗಿದಿದ್ದಾರೆ.

ಬೆಂಕಿಯ ಕೆನ್ನಾಲಿಗೆ ಸಂಪೂರ್ಣ ಕಂಟೈನರ್‌ಗೆ ಆವರಿಸಿ ಹೊತ್ತಿ ಉರಿದಿದೆ. ಬೆಂಕಿ ಅವಘಡದಿಂದ ಹೆದ್ದಾರಿಯಲ್ಲಿ ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಘಟನೆಯಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದ್ದು, ಈ ಸಂಬಂಧ ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೀವ ನದಿ ಕಾವೇರಿ ಸ್ವಚ್ಛತೆಗೆ ಸರ್ಕಾರ ವಿಫಲ



ಯುವ ಬ್ರಿಗೇಡ್ ವತಿಯಿಂದ ಕುಶಾಲನಗರ ಕಾವೇರಿ ಸೇತುವೆ ಕೆಳ ಭಾಗದ ನದಿ ಸ್ವಚ್ಛತೆ ನಡೆಸಲಾಯಿತು.

ಮಡಿಕೇರಿ, ಡಿ.29–ಕಾವೇರಿ ತವರಿನಿಂದ ಜೀವ ನದಿಯನ್ನು ಸ್ವಚ್ಛ ಹಾಗೂ ಶುದ್ಧ ಮಾಡುವ ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ಸರ್ಕಾರಗಳು ವಿಫಲವಾಗಿವೆ ಎಂದು ಯುವ ಬ್ರಿಗೇಡ್ ಮಾರ್ಗದರ್ಶಕ ಚಕ್ರವರ್ತಿ ಸೂಲಿಬೆಲೆ ಬೇಸರ ವ್ಯಕ್ತಪಡಿಸಿದರು.

ಯುವ ಬ್ರಿಗೇಡ್ ವತಿಯಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ಕಾವೇರಿ ನಮನ ಕಾರ್ಯಕ್ರಮ ಅಂಗವಾಗಿ ಭಾನುವಾರ ಕುಶಾಲನಗರ ಕಾವೇರಿ ಸೇತುವೆ ಬಳಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಿರಂತರ ಜಾಗೃತಿಯಿಂದ ಕಾವೇರಿ ನದಿ ಸಂರಕ್ಷಣೆ ಸಾಧ್ಯ. ನದಿಗಳ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಕಾವೇರಿಯನ್ನು ಕಲುಷಿತಗೊಳಿಸುವುದು ಒಳ್ಳೆಯ ಬೆಳವಣಿಗೆ ಅಲ್ಲ. ಇದರ ಪ್ರತಿಫಲವನ್ನು ಮುಂದಿನ ದಿನಗಳಲ್ಲಿ ನಾವುಗಳೇ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾವೇರಿ ನೀರನ್ನು ರಾಜಧಾನಿ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಮೂಲವಾಗಿ ಬಳಸಲಾಗುತ್ತಿದೆ. ಇದಕ್ಕಾಗಿಯೇ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಆದರೆ, ಮೂಲ ಕಾವೇರಿಯಿಂದ ಜೀವ ನದಿಯನ್ನು ಸ್ವಚ್ಛ ಹಾಗೂ ಶುದ್ಧ ಮಾಡುವ ಯಾವುದೇ ಯೋಜನೆಗಳನ್ನು ಸರ್ಕಾರಗಳು ಕೈಗೆತ್ತಿಕೊಂಡಿಲ್ಲ ಎಂದರು.

ಇದೇ ವೇಳೆ ಕುಶಾಲನಗರ ಕಾವೇರಿ ಸೇತುವೆ ಕೆಳ ಭಾಗದಲ್ಲಿ ಸಾಂಕೇತಿಕವಾಗಿ ನದಿ ಸ್ವಚ್ಛತಾ ಕಾರ್ಯಕ್ರಮ ನಡೆಸಲಾಯಿತು. ಪ್ಲಾಸ್ಟಿಕ್ ಚೀಲಗಳು, ಬಟ್ಟೆ ಬಾಟಲಿಗಳ ಸಹಿತ ಕಾವೇರಿ ಒಡಲು ಸೇರಿದ್ದ ತ್ಯಾಜ್ಯಗಳನ್ನು ನದಿಯಿಂದ ಹೊರ ತೆಗೆಯಲಾಯಿತು. ನದಿಯಿಂದ ತೆರವುಗೊಳಿಸಿದ ತ್ಯಾಜ್ಯಗಳನ್ನು ಕುಶಾಲನಗರ ಪುರಸಭೆ ಸ್ವಚ್ಛತಾ ವಾಹನಗಳಿಗೆ ತುಂಬಿ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಾಗಿಸಲಾಯಿತು. ಸ್ವಚ್ಛತಾ ಕಾರ್ಯಕ್ರಮಕ್ಕೂ ಮುನ್ನ ನದಿ ತಟದಲ್ಲಿ ಗಿಡಗಳನ್ನು ನೆಡಲಾಯಿತು.

ಸ್ವಚ್ಛತಾ ಅಭಿಯಾನದಲ್ಲಿ ಯುವ ಬ್ರಿಗೇಡ್‌ನ ಪ್ರಮುಖರಾದ ನಂಜನಗೂಡು ಚಂದ್ರಶೇಖರ್, ಧಾರ್ಮಿಕ ವಿಭಾಗದ ಚಂದ್ರಶೇಖರ್, ಬ್ರಿಗೇಡ್‌ನ 75ಕ್ಕೂ ಅಧಿಕ ಸ್ವಯಂ ಸೇವಕರು, ಸ್ಥಳೀಯ ವಾಸವಿ ಯುವಕ ಸಂಘದ ಪ್ರಮುಖರಾದ ವೈಶಾಖ್, ಪ್ರವೀಣ್, ರಾಕೇಶ್, ರವಿಪ್ರಕಾಶ್, ಆದರ್ಶ್, ಹಿಂದೂಪರ ಸಂಘಟನೆ ಪ್ರಮುಖ ನವನೀತ್, ಪವನ್ ಬಿದ್ದಪ್ಪ, ಕಾವೇರಿ ನದಿ ಸ್ವಚ್ಛತಾ ಅಭಿಯಾನದ ಎಂ.ಎನ್.ಚಂದ್ರ ಮೋಹನ್, ಕಾವೇರಿ ಮಹಾ ಆರತಿ ಬಳಗದ ಸಂಚಾಲಕಿ ವನಿತಾ ಚಂದ್ರಮೋಹನ್, ಧರಣಿ ಸೋಮಯ್ಯ, ಚೈತನ್ಯ, ಸುಮನ ಮಳಲಗದ್ದೆ, ವಜ್ರಕಾಯ ತಂಡದ ಸದಸ್ಯರು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರಿದ್ದರು.

ಮಾನಸಿಕ ಬೆಳವಣಿಗೆಗೆ ಕ್ರೀಡೆ ಸಹಕಾರಿ

ಯಳಂದೂರು: ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕ್ರೀಡೆ ಹೆಚ್ಚು ಸಹಕಾರಿಯಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿ ಓದುವ ದಿನಗಳಲ್ಲೇ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ದೈಹಿಕ ಶಿಕ್ಷಣ ಪರಿವೀಕ್ಷಕ ಶಾಂತರಾಜು ಸಲಹೆ ನೀಡಿದರು.

ಪಟ್ಟಣದ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ಕ್ರೀಡೋತ್ಸವ ಉದ್ಘಾಟಿಸಿ ಮಾತನಾಡಿ, ಪ್ರತಿಯೊಂದು ಮಗುವಿನಲ್ಲಿ ಸುಪ್ತವಾದ ಪ್ರತಿಭೆಯಿದೆ. ಅದನ್ನು ಹೊರ ಜಗತ್ತಿಗೆ ಪ್ರಜ್ವಲಿಸಲು ಶಿಕ್ಷಕರು ಹಾಗೂ ಪೋಷಕರ ಸಹಕಾರ ಅಗತ್ಯ ಎಂದು ತಿಳಿಸಿದರು.

ವಿದ್ಯಾಸಂಸ್ಥೆ ಸಂಸ್ಥಾಪಕ ವೀರಭದ್ರಪ್ಪ, ಗೌರವ ವಂದನೆ ಸ್ವೀಕರಿಸಿದರು. ಮುಖ್ಯ ಶಿಕ್ಷಕ ವೀರಭದ್ರಸ್ವಾಮಿ ಬಹುಮಾನ ವಿತರಿಸಿದರು. ಸಂಸ್ಥೆ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಸದಸ್ಯೆ ಗೌರಮ್ಮ ಮಹದೇವಸ್ವಾಮಿ, ಐಟಿಐ ಪ್ರಾಂಶುಪಾಲ ವಿಖ್ಯಾತ್, ಮುಖ್ಯ ಶಿಕ್ಷಕ ಗುಂಬಳ್ಳಿ ಬಸವರಾಜು, ಶಿವಮೂರ್ತಿ, ಬಂಗಾರು, ಮಮತಾ, ಪುನೀತ್, ಮಂಜುನಾಥ್, ನಿಲಂಬರಿ, ಶೀಲಾ, ಸಿಂಧು, ರೂಪಾ, ಅಮೃತ ಇನ್ನಿತರರಿದ್ದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ 100 ಮೀ, 200 ಮೀ. ಹಾಗೂ 600 ಮೀ. ಓಟ, ರಿಲೇ, ಉದ್ದ ಜಿಗಿತ, ಎತ್ತರ ಜಿಗಿತ, ಭರ್ಜಿ ಎಸೆತ, ಗುಂಡು ಎಸೆತ, ಕಬಡ್ಡಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಮಹದೇಶ್ವರಬೆಟ್ಟದಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ಹಿನ್ನೆಲೆ

15 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ

ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಡಿ.29–ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಹನೂರು ತಾಲೂಕಿನ ಮಲೆ ಮಹದೇಶ್ವರಬೆಟ್ಟದಲ್ಲಿ ಜ.9 ಅಥವಾ 16ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯುವ ಸಚಿವ ಸಂಪುಟ ಸಭೆಗೆ ಸಿದ್ಧತೆ ನಡೆಸಲಾಗುತ್ತಿದೆ.

ನೂತನ ವರ್ಷಾರಂಭದಲ್ಲಿ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಲು ಸರ್ಕಾರ ಚಿಂತನೆ ನಡೆಸಿತ್ತು. ಆದರೆ, ದಿನಾಂಕ ನಿಗದಿಯಾಗಿರಲಿಲ್ಲ. ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಜ.9 ಅಥವಾ 16ರಂದು ಸಭೆ ನಡೆಸಲು ತಯಾರಿ ನಡೆಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಸಚಿವ ಸಂಪುಟ ಸಭೆಯನ್ನು ಅಚ್ಚುಕಟ್ಟಾಗಿ ನಡೆಸಲು ಜಿಲ್ಲಾಡಳಿತ ಹಾಗೂ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದಿಂದ ಅಗತ್ಯ ಸಿದ್ಧತೆ ನಡೆಸಲಾಗುತ್ತಿದ್ದು, ಈಗಾಗಲೇ 15 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದೆ. ಅಲ್ಲದೆ, ಬೆಟ್ಟದಲ್ಲಿ ಜಿಲ್ಲಾಧಿಕಾರಿ, ಶಾಸಕರು ಸಭೆ ನಡೆಸಿ ಸಿದ್ಧತೆ ಪರಿಶೀಲಿಸಿ, ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದ್ದಾರೆ.



ಮಹದೇಶ್ವರಬೆಟ್ಟದಲ್ಲಿ ದೇವಸ್ಥಾನ ಮುಂಭಾಗ ಡಾಂಬರೀಕರಣ ಮಾಡಿರುವುದು.



ಹನೂರಿನಿಂದ ತಾಳಬೆಟ್ಟದವರೆಗೆ ರಸ್ತೆ ಡಾಂಬರೀಕರಣ ಮಾಡುತ್ತಿರುವುದು.

ದೀಪದಗಿರಿ ಒಡ್ಡುವಿನಲ್ಲಿ ಸಭೆ: ದೀಪದಗಿರಿ ಒಡ್ಡುವಿನ ಮಹದೇಶ್ವರ ಪ್ರತಿಮೆ ಆವರಣದಲ್ಲಿ ಸಚಿವ ಸಂಪುಟ ಸಭೆ ನಡೆಸಲು ನಿರ್ಧರಿಸಲಾಗಿದೆ. ಆದ್ದರಿಂದ ಸಭಾಂಗಣ, ಆಸನ ವ್ಯವಸ್ಥೆ, ಊಟ ಹಾಗೂ ಇನ್ನಿತರ ಅಗತ್ಯ ಸೌಕರ್ಯ ಒದಗಿಸಲು ಸಿದ್ಧತೆ ನಡೆಸುವ ಮೂಲಕ ಯಾವುದೇ ಲೋಪವಾಗದಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಶಾಸಕ ಮಂಜುನಾಥ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಚಿವರು, ಶಾಸಕರು, ಅಧಿಕಾರಿಗಳು ಭಾಗಿ: ಸರ್ಕಾರದ ಎಲ್ಲಾ ಸಚಿವರು, ರಾಜ್ಯದ ವಿವಿಧ ಕ್ಷೇತ್ರಗಳ ಶಾಸಕರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಹೀಗಾಗಿ, ಯಾವುದೇ ಲೋಪದೋಷವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಶಿಲ್ಪನಾಗ್ ವಿವಿಧ ಸಮಿತಿಯ ಅಧಿಕಾರಿಗಳ ತಂಡವನ್ನು ರಚಿಸಿ, ನಿರ್ದೇಶಿಸಿದ್ದಾರೆ.

ಜಿಲ್ಲೆಯ ಅಭಿವೃದ್ಧಿಗೆ ಪೂರಕ: ಚಾಮರಾಜನಗರ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು ನೂತನ ಜಿಲ್ಲೆಯಾಗಿ ಸುಮಾರು 27ವರ್ಷ ಕಳೆದರೂ ಇನ್ನೂ ಪೂರ್ಣ ಪ್ರಮಾಣದ ಮೂಲಸೌಲಭ್ಯ ದೊರಕಿಲ್ಲ. ನಂಜುಂಡಪ್ಪ ವರದಿ ಪ್ರಕಾರ ಚಾಮರಾಜನಗರ ಹಿಂದುಳಿದ ಜಿಲ್ಲೆಯಾಗಿದೆ.

ಜಿಲ್ಲೆಯ ಅಭಿವೃದ್ಧಿಗೆ ಈವರೆಗೂ ಸರ್ಕಾರದಿಂದ ವಿಶೇಷ ಅನುದಾನ ದೊರೆತಿಲ್ಲ. ಹಾಗಾಗಿ ಬೆಟ್ಟದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಯ ಸ್ಥಳೀಯ ಸಮಸ್ಯೆಗಳಿಗೆ ಹೆಚ್ಚಿನ ಒತ್ತು ನೀಡಲು ಸಾಧ್ಯವಾಗಲಿದ್ದು, ಇದರಿಂದ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಜಿಲ್ಲೆಯ ಜನರು ನಿರೀಕ್ಷಿಸಿದ್ದಾರೆ.

ಮುಖ್ಯಮಂತ್ರಿ ವಿಶೇಷ ಕಾಳಜಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಮೇಲೆ ವಿಶೇಷ ಆಸಕ್ತಿ ಇದ್ದು, ಈ ಭಾಗದಲ್ಲಿ ಅವರ ಹೆಸರು ಶಾಶ್ವತವಾಗಿ ಉಳಿಯಬೇಕೆನ್ನುವ ಉದ್ದೇಶದಿಂದ ಸಚಿವ ಸಂಪುಟ ಸಭೆ ನಡೆಸಲು ಮುಂದಾಗಿದ್ದಾರೆ ಎನ್ನಲಾಗಿದೆ.

> ಇದೇ ಮೊದಲ ಬಾರಿಗೆ ಮಹದೇಶ್ವರಬೆಟ್ಟದಲ್ಲಿ ಕ್ಯಾಬಿನೆಟ್ ಸಭೆ ನಡೆಯುತ್ತಿರುವುದರಿಂದ ಹನೂರು ಸೇರಿದಂತೆ ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಆದ್ದರಿಂದ ಸಭೆ ಯಶಸ್ಸಿಗೆ ಪ್ರತಿಯೊಬ್ಬರೂ ಹೆಚ್ಚಿನ ಮುತುವರ್ಜಿ ವಹಿಸಬೇಕು.
>
> –ಮಂಜುನಾಥ್, ಶಾಸಕ

> ಮ.ಬೆಟ್ಟದಲ್ಲಿ ಮೊದಲ ಕ್ಯಾಬಿನೆಟ್ ಸಭೆ ನಡೆಯಲಿರುವುದರಿಂದ ಜಿಲ್ಲೆಯ ಅಭಿವೃದ್ಧಿ ಸಂಬಂಧ ಪ್ರಮುಖ ಯೋಜನೆಗಳ ಪ್ರಸ್ತಾವನೆ ಸಲ್ಲಿಸಲಾಗುವುದು. ಈ ನಿಟ್ಟಿನಲ್ಲಿ ಸಮಿತಿ ರಚಿಸಿ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗುವುದು.
>
> –ಶಿಲ್ಪನಾಗ್, ಜಿಲ್ಲಾಧಿಕಾರಿ

ಒಕ್ಕಲಿಗರ ಸಂಘದ ಕಟ್ಟಡಕ್ಕೆ 25 ಲಕ್ಷ ಅನುದಾನ



ಚಾ.ನಗರದ ಕೊಳದ ಬೀದಿಯ ಒಕ್ಕಲಿಗರ ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಭಾವಚಿತ್ರಕ್ಕೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುಷ್ಪ ನಮನ ಸಲ್ಲಿಸಿದರು.

ಚಾಮರಾಜನಗರ, ಡಿ.29–ತಾಲೂಕು ಒಕ್ಕಲಿಗರ ಸಂಘಕ್ಕೆ ನಗರದ ಹೊರ ವಲಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವೈಯಕ್ತಿಕವಾಗಿ ನಿವೇಶನ ಖರೀದಿಸಿ ನೀಡಿದ್ದು, ಕಟ್ಟಡ ನಿರ್ಮಾಣಕ್ಕೆ ತಮ್ಮ ಅನುದಾನದಲ್ಲಿ 25 ಲಕ್ಷ ರೂ. ನೀಡುವುದಾಗಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಭರವಸೆ ನೀಡಿದರು.

ನಗರದ ಕೊಳದ ಬೀದಿಯ ಒಕ್ಕಲಿಗರ ಸಮುದಾಯ ಭವನದಲ್ಲಿ ತಾಲೂಕು ಒಕ್ಕಲಿಗರ ಸಂಘದ ವತಿಯಿಂದ ನಡೆದ ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ ಹಾಗೂ ಸಂಘದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಅವರು ಕನ್ನಡದ ಅಗ್ರಮಾನ್ಯ ಸಾಹಿತಿಯಾಗಿದ್ದರು. ಕನ್ನಡ ನಾಡಿಗೆ ನೀಡಿದ ಅವರ ಕೊಡುಗೆ ಅನನ್ಯ. ಅವರನ್ನು ಕವಿಯಾಗಿ, ಋಷಿಯಾಗಿ ನಾಟಕಗಳ ಮೂಲಕ ನೋಡುವಾಗ ಅವರ ಆಲೋಚನಾ ಕ್ರಮಕ್ಕೆ ಇರುವ ವೈಚಾರಿಕ ನಿಲುವು ತಿಳಿಯುತ್ತದೆ ಎಂದರು.

ಒಕ್ಕಲಿಗ ಸಮುದಾಯ ಕೊಡುಗೈ ಸಮಾಜವಾಗಿದೆ. ಬೆಂಗಳೂರು ನಿರ್ಮಾತೃ ಕೆಂಪೇಗೌಡರು, ರಾಷ್ಟ್ರಕವಿ ಕುವೆಂಪು ಅವರು ಸಮುದಾಯದ ಮಹಾನ್ ಚೇತನರಾಗಿದ್ದು, ನಾಡಿಗೆ ಉತ್ತಮ ಸೇವೆ ನೀಡಿದ್ದಾರೆ. ಇಂದಿನ ಪೀಳಿಗೆಗಳಿಗೆ ಕುವೆಂಪು ಮಾತು, ಸಂದೇಶಗಳು ಹೆಚ್ಚು ಪರಿಣಾಮ ಬೀರುತ್ತಿವೆ. ಇಂದಿನ ಯುವ ಜನಾಂಗಕ್ಕೆ ಇವರ ಕನ್ನಡದ ಅದ್ಭುತ ಕೊಡುಗೆ ಸ್ಫೂರ್ತಿದಾಯಕ ಎಂದು ತಿಳಿಸಿದರು.

ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ, ಸುದರ್ಶನ್ ಗೌಡ ಮಾತನಾಡಿದರು. ಇದೇ ವೇಳೆ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರನ್ನು ಸನ್ಮಾನಿಸಲಾಯಿತು. ಸಂಘದ ಕೋಶಾಧ್ಯಕ್ಷ ಜಿ.ನಾರಾಯಣಪ್ರಸಾದ್, ಉಪಾಧ್ಯಕ್ಷರಾದ ಚಿನ್ನುಮುತ್ತು, ಪಿ.ಕೆ.ರಾಜು, ಕೆ.ಎಂ.ಮಂಜು, ಪ್ರಧಾನ ಕಾರ್ಯದರ್ಶಿ ಆರ್.ಸೋಮಶೇಖರ್, ಸಹಕಾರ್ಯದರ್ಶಿ ನಾಗೇಂದ್ರ ಗೌಡ, ನಿರ್ದೇಶಕರಾದ ಮರಿಸ್ವಾಮಿಗೌಡ, ಮಹೇಶ್‌ಗೌಡ, ಚಿಕ್ಕತಾಯಮ್ಮ, ಮಣಿ ಮಾಸ್ಟರ್, ಶೇಖರ್ ಹೊಮ್ಮ, ಪುರುಷೋತ್ತಮ್, ಸಿ.ಸಿ.ರಮೇಶ್, ಅರುಣ್ ಕುಮಾರ್ ಹಾಜರಿದ್ದರು.

ರಾಜ್ಯ ಮಟ್ಟದ ನೆಟ್‌ಬಾಲ್ ಪಂದ್ಯಾವಳಿ

ಬಾಲಕರಲ್ಲಿ ಹಾಸನ, ಬಾಲಕಿಯರಲ್ಲಿ ಚಾ.ನಗರ ಚಾಂಪಿಯನ್

ಚಾಮರಾಜನಗರ: ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ ಆಫ್ ಕರ್ನಾಟಕ, ಚಾಮರಾಜನಗರ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ವತಿಯಿಂದ ನಡೆದ 19 ವರ್ಷದೊಳಗಿನ 6ನೇ ರಾಜ್ಯ ಮಟ್ಟದ ನೆಟ್‌ಬಾಲ್ ಪಂದ್ಯಾವಳಿಯಲ್ಲಿ ಹಾಸನ ಜಿಲ್ಲಾ ಬಾಲಕರ ತಂಡ ಹಾಗೂ ಆತಿಥೇಯ ಚಾಮರಾಜನಗರ ಬಾಲಕಿಯರ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿವೆ.



ಚಾಂಪಿಯನ್ ಪಟ್ಟ ಅಲಂಕರಿಸಿದ ಆತಿಥೇಯ ಚಾಮರಾಜನಗರ ಬಾಲಕಿಯರ ತಂಡಕ್ಕೆ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಬಹುಮಾನ ವಿತರಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯಾವಳಿಯಲ್ಲಿ ಬಾಲಕರ ವಿಭಾಗದಲ್ಲಿ ಹಾಸನ ತಂಡ ಪ್ರಥಮ, ಚಾ.ನಗರ ತಂಡ ದ್ವಿತೀಯ, ಬೆಂಗಳೂರು ನಗರ, ದಕ್ಷಿಣ ಕನ್ನಡ ಜಂಟಿ ತೃತೀಯ ಸ್ಥಾನ. ಬಾಲಕಿಯರ ವಿಭಾಗದಲ್ಲಿ ಚಾ.ನಗರ ತಂಡ ಪ್ರಥಮ, ಹಾಸನ ತಂಡ ದ್ವಿತೀಯ, ಬೆಂಗಳೂರು ನಗರ, ದಾವಣಗೆರೆ ಜಂಟಿ ತೃತೀಯ ಸ್ಥಾನ ಪಡೆದಿವೆ.

ಸಮಾರೋಪದಲ್ಲಿ ವಿಜೇತ ತಂಡಗಳಿಗೆ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಕಪ್ ವಿತರಿಸಿ ಮಾತನಾಡಿ, ಜಿಲ್ಲೆಯ ಕೆಲವು ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಕೊರತೆಯಾಗಿದೆ. ಇದರಿಂದ ಜಿಲ್ಲೆ ಕ್ರೀಡಾ ಸಾಧನೆಗೆ ಹಿನ್ನಡೆಯಾಗಲು ಕಾರಣವಾಗಿದೆ. ಹೀಗಾಗಿ ಸರ್ಕಾರ ಎಲ್ಲಾ ಶಾಲೆಗಳಿಗೂ ದೈಹಿಕ ಶಿಕ್ಷಕರನ್ನು ನೇಮಿಸುವ ಮೂಲಕ ಕ್ರೀಡೆಗೆ ಉತ್ತೇಜನ ನೀಡಬೇಕು ಎಂದು ಒತ್ತಾಯಿಸಿದರು.

ಕ್ರೀಡೆಯಲ್ಲಿ ಸೋಲು, ಗೆಲುವು ಮುಖ್ಯವಲ್ಲ ಭಾಗವಹಿಸುವಿಕೆ ಮುಖ್ಯವಾಗಿದೆ. ಕ್ರೀಡೆ ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿದೆ. ಸೋತವರು ಧೃತಿಗೆಡದೆ, ಗೆದ್ದವರು ಕೂಡ ಮುಂದೆ ಹೆಚ್ಚಿನ ಅಭ್ಯಾಸ ಪಡೆದು ಮುಂದಿನ ದಿನಗಳಲ್ಲಿ ಪಂದ್ಯಾವಳಿಗಳಲ್ಲಿ ಗೆಲುವು ಸಾಧಿಸಲು ಸಜ್ಜಾಗಬೇಕು ಎಂದರು.

ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಜಿಲ್ಲೆಯಲ್ಲಿ ಎಲ್ಲ ಕ್ರೀಡೆಗಳ ಅತ್ಯುತ್ತಮ ಆಟಗಾರರಿದ್ದಾರೆ. ಹಿಂದೆ ಚಾಮರಾಜನಗರ ಕ್ರೀಡೆಗಳ ತವರೂರಾಗಿತ್ತು ಅದನ್ನು ಪುನರ್ ನಿರ್ಮಿಸಬೇಕಿದೆ ಎಂದರು. ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಗೌರವ ಅಧ್ಯಕ್ಷೆ ನರ್ಗೀಸ್‌ಬಾನು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಅಮೆಚೂರ್ ನೆಟ್‌ಬಾಲ್ ಕಾರ್ಯದರ್ಶಿ ಸಿ.ಗಿರೀಶ್, ರಾಜ್ಯ ಉಪಾಧ್ಯಕ್ಷ ಅನಿಲ್, ಭಾರತೀಯ ತಂಡ ಆಟಗಾರ್ತಿ ಸುರಬಿ, ಮೈಸೂರು ಜಿಲ್ಲಾ ಕಾರ್ಯದರ್ಶಿ ಲೋಕೇಶ್, ಚಾ.ರಂ. ಶ್ರೀನಿವಾಸಗೌಡ, ಜಿಲ್ಲಾ ಖೋ ಖೋ ಅಸೋಸಿಯೇಷನ್ ಅಧ್ಯಕ್ಷ ಶಮಿತ್ ಕುಮಾರ್, ಚಾಮುಲ್ ಅಲಿಖಾನ್, ಉಪಾಧ್ಯಕ್ಷ ಎ.ಸಿ.ವಿಶ್ವನಾಥ್, ಸಿ.ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಬಿ.ಮಹದೇವ ಪ್ರಸಾದ್, ಸಹ ಕಾರ್ಯದರ್ಶಿ ಜಿ.ಸುರೇಶ್‌ಕುಮಾರ್, ಸಂಘಟನಾ ಕಾರ್ಯದರ್ಶಿ ಸಿ.ಎಂ.ಮಧುಕುಮಾರ್, ಸದಸ್ಯರಾದ ಎಂ.ದುಂಡಯ್ಯ, ಎಂ.ಮಂಜುನಾಥ್, ವೈ.ಎನ್.ಲೋಕೇಶ್, ಸಿ.ಎನ್.ಅಕ್ಷಯ್, ಸಿ.ನಾಗೇಂದ್ರ, ಎಲ್.ಶಾಂತಕುಮಾರ್, ಎಸ್.ಶ್ರೀಕಂಠಸ್ವಾಮಿ, ಶ್ರೀಧರ್, ಗಂಗಪ್ಪ, ಎಸ್.ರೂಪ ಹಾಗೂ ಕ್ರೀಡಾಪಟುಗಳು ಭಾಗವಹಿಸಿದ್ದರು.

ಬೈಕ್‌ನಿಂದ ಬಿದ್ದು ವ್ಯಕ್ತಿ ಸಾವು

ಭಾರತೀನಗರ, ಡಿ.29– ವ್ಯಕ್ತಿಯೊಬ್ಬ ಬೈಕ್‌ನಿಂದ ಬಿದ್ದು ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಗೇಟ್‌ಬಳಿ ಸಂಭವಿಸಿದೆ.

ಟಿ.ನರಸಿಪುರ ತಾಲೂಕಿನ ಅಕ್ಕೂರುದೊಡ್ಡಿ ಗ್ರಾಮದ ನಂಜನಾಯಕ್ ಅವರ ಪುತ್ರ ರಾಚನಾಯಕ್(30) ಮೃತಪಟ್ಟ ದುರ್ದೈವಿ.

ಈತ ತಮ್ಮ ಗ್ರಾಮದಿಂದ ಮದ್ದೂರು–ಮಳವಳ್ಳಿ ಹೆದ್ದಾರಿಯ ಮೂಲಕ ಭಾನುವಾರ ಮುಂಜಾನೆ ಬೆಂಗಳೂರಿಗೆ ತೆರಳುವಾಗ ಚಿಕ್ಕರಸಿನಕೆರೆ ಗೇಟ್‌ಬಳಿ ಸೇತುವೆಗೆ ಡಿಕ್ಕಿ ಹೊಡೆದಿದ್ದು ಇದರ ಪರಿಣಾಮವಾಗಿ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸಮುದಾಯ ಆರೋಗ್ಯ ಕೇಂದ್ರದ ಮುಂಭಾಗ ಕುಟುಂಬದವರ ಗೋಳು ಹೇಳತೀರದ್ದಾಗಿತ್ತು. ಕೆ.ಎಂ.ದೊಡ್ಡಿಯ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರದಲ್ಲಿ ಪಂಚನಾಮೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಕೆ.ಎಂ.ದೊಡ್ಡಿ ಪೊಲೀಸರು ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೃಷಿ ಕೂಲಿ ಕಾರ್ಮಿಕನ ಪುತ್ರ ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆ

ಕಿರಿಯ ವಯಸ್ಸಿನಲ್ಲಿಯೇ ನ್ಯಾ.ಜಿ.ಸುರೇಂದ್ರ ಅದ್ಭುತ ಸಾಧನೆ

ಕೆ.ಆರ್.ಪೇಟೆ,ಡಿ.29– ಪಟ್ಟಣದ ಜೆಎಂಎಫ್‌ಸಿ ಅಪರ ಸಿವಿಲ್ ನ್ಯಾಯಾಲಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಜಿ. ಸುರೇಂದ್ರ ಅವರು ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆಯಾಗುವ ಮೂಲಕ ಕಿರಿಯ ವಯಸ್ಸಿನಲ್ಲಿಯೇ ಅದ್ಭುತ ಸಾಧನೆ ಮಾಡಿದ್ದಾರೆ.

ಮೂಲತಃ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲೂಕಿನ ಚೇಳೂರು ಹೋಬಳಿಯ ಊದವಾರಿಪಲ್ಲಿ ಗ್ರಾಮದ ಕೃಷಿ ಕೂಲಿ ಕಾರ್ಮಿಕ ಗಂಗುಲಯ್ಯ ಹಾಗೂ ಕಮಲಮ್ಮ ದಂಪತಿಗಳ ಪುತ್ರರಾದ ಜಿ. ಸುರೇಂದ್ರ ಅವರು ಒಂದರಿಂದ 7ನೇ ತರಗತಿ ಯವರೆಗೆ ಹೇರೋಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿಯೇ ವ್ಯಾಸಂಗ ಮಾಡಿದ್ದಾರೆ.

ನಂತರ ಪೋಷಕರ ಸಹಕಾರದಿಂದ ಬೆಂಗಳೂರಿನ ವಿಜಯನಗರದ ಉದಯ ವಿದ್ಯಾಸಂಸ್ಥೆಯಲ್ಲಿ 8ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ವ್ಯಾಸಂಗ ಮಾಡಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಿಎ ಪದವಿ ಪಡೆದು ಅಲ್ಲಿಯೇ ಇರುವ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ವಿದ್ಯಾಭ್ಯಾಸ ಮಾಡಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ 2014ರಂದು ವಕೀಲ ವೃತ್ತಿಗೆ ಪಾದಾರ್ಪಣೆ ಮಾಡಿ ಬೆಂಗಳೂರಿನ ಖ್ಯಾತ ವಕೀಲರಾದ ಹೆಚ್.ಎಸ್. ರಾಘವೇಂದ್ರ ಅವರ ಬಳಿ ಕಿರಿಯ ವಕೀಲರಾಗಿ ಕರ್ತವ್ಯ ನಿರ್ವಹಣೆ ಮಾಡಿದ್ದಾರೆ.

2022ರಲ್ಲಿ ಸರ್ಕಾರಿ ಅಭಿಯೋಜಕರ ಹುದ್ದೆಗೆ ಕರೆದಿದ್ದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 2023ರಲ್ಲಿ ಕೆ.ಆರ್.ಪೇಟೆಯ ಪಟ್ಟಣದ ಅಪರ ಸಿವಿಲ್ ನ್ಯಾಯಾಲಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕಳೆದ ಒಂದು ವರ್ಷದಿಂದ ಕೆ.ಆರ್.ಪೇಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಸಂದರ್ಭದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಸಿವಿಲ್ ಜಡ್ಜ್ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿ ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆಯಾಗುವ ಮೂಲಕ ತಮ್ಮ ಬಡ ತಂದೆ–ತಾಯಿಗಳಿಗೆ ಕೀರ್ತಿ ತಂದಿದ್ದಾರೆ.



ಕೆ.ಆರ್.ಪೇಟೆಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ವಕೀಲರ ಸಂಘದ ಮಾಜಿ ಅಧ್ಯಕ್ಷ ಹಾಗೂ ನೋಟರಿಗಳಾದ ಎನ್.ಆರ್.ರವಿಶಂಕರ್ ಹಾಗೂ ವಕೀಲ ನಯಾಜ್‌ಪಾಷಾ ಅವರು ನೂತನ ಜಡ್ಜ್ ಜಿ.ಸುರೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಿದರು.

ಪಟ್ಟಣದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕಳೆದ ಒಂದು ವರ್ಷದಿಂದ ಕೆಲಸ ಮಾಡಿರುವ ಸುರೇಂದ್ರ ಅವರು ನ್ಯಾಯಾಲಯಕ್ಕೆ ನ್ಯಾಯವನ್ನು ಅರಸಿ ಬರುವ ನೊಂದ ಜನರ ಧ್ವನಿಯಾಗಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಬದ್ಧತೆಯಿಂದ ಕೆಲಸ ಮಾಡುವ ಮೂಲಕ ಕಾನೂನು ಅರಿವು–ನೆರವು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಗ್ರಾಮೀಣ ಪ್ರದೇಶದ ಬಡಜನರು ಹಾಗೂ ನೊಂದವರು ಉಚಿತವಾಗಿ ಕಾನೂನು ನೆರವನ್ನು ಪಡೆದುಕೊಂಡು ನೆಮ್ಮದಿಯ ಜೀವನ ನಡೆಸಲು ಕಾರಣರಾಗಿದ್ದಾರೆ. ಕೆ.ಆರ್.ಪೇಟೆಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ವಕೀಲರ ಸಂಘದ ಮಾಜಿ ಅಧ್ಯಕ್ಷ ಹಾಗೂ ನೋಟರಿಗಳಾದ ಎನ್. ಆರ್.ರವಿಶಂಕರ್ ಹಾಗೂ ವಕೀಲ ನಯಾಜ್ ಪಾಷಾ ಅವರು ನೂತನ ಜಡ್ಜ್ ಜಿ.ಸುರೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಿದ್ದಾರೆ.

ಮನ್ಮುಲ್ ಚುನಾವಣೆ: ಮದ್ದೂರಿನಿಂದ ಮಹೇಶ್ ಜೆಡಿಎಸ್ ಅಭ್ಯರ್ಥಿ



ಸುರೇಶ್‌ಗೌಡ ಪತ್ರಿಕಾಗೋಷ್ಠಿ

ಮದ್ದೂರು: ಫೆಬ್ರವರಿ 2ರಂದು ನಡೆಯುವ ಜಿಲ್ಲಾ ಹಾಲು ಒಕ್ಕೂಟದ (ಮನ್ ಮುಲ್) ನಿರ್ದೇಶಕರ ಸ್ಥಾನದ ಚುನಾವಣೆಗೆ ಜೆಡಿಎಸ್ (ಎನ್‌ಡಿಎ) ಮೈತ್ರಿ ಕೂಟದ ಒಮ್ಮತದ ಅಭ್ಯರ್ಥಿಯಾಗಿ ಎಸ್.ಮಹೇಶ್ ಅವರನ್ನು ಆಯ್ಕೆ ಮಾಡಿದ್ದು, ಇದರಲ್ಲಿ ಯಾವುದೇ ರೀತಿಯ ಗೊಂದಲವಿಲ್ಲವೆಂದು ಮಾಜಿ ಶಾಸಕ ಸುರೇಶ್‌ಗೌಡ ಸ್ಪಷ್ಟಪಡಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಈ ಸಂಬಂಧ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್‌ನಿಂದ ಕೋಣಸಾಲೆ ಮಧು ಅವರು ನಿರ್ದೇಶಕ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದರು, ಅವರಿಗೆ ಮುಂದೆ ಪಕ್ಷದಿಂದ ಉನ್ನತ ಸ್ಥಾನಮಾನಗಳನ್ನು ನೀಡುವ ಭರವಸೆ ನೀಡಿರುವ ಹಿನ್ನೆಲೆಯಲ್ಲಿ ಅವರು ಚುನಾವಣೆಯಲ್ಲಿ ಎಸ್.ಮಹೇಶ್ ಅವರಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಿದ್ದಾರೆಂದರು.

ಚುನಾವಣೆಯಲ್ಲಿ ಸ್ಪರ್ಧಿಸಲು ಕೋಣಸಾಲೆ ಮಧು ಸೇರಿದಂತೆ ಹಲವಾರು ಮಂದಿ ಆಕಾಂಕ್ಷಿತರಿದ್ದರು, ಅವರುಗಳನ್ನು ಸಹಾ ವಿಶ್ವಾಸಕ್ಕೆ ತೆಗೆದುಕೊಂಡು ಎಸ್. ಮಹೇಶ್ ಅವರನ್ನು ಚುನಾವಣೆಯಲ್ಲಿ ಅಧಿಕೃತ ಅಭ್ಯರ್ಥಿಯಾಗಿ ಘೋಷಣೆ ಮಾಡಿದ್ದು, ಎಸ್.ಮಹೇಶ್ ಅವರು ಚುನಾವಣೆಯಲ್ಲಿ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲು ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಜನಪ್ರತಿನಿಧಿಗಳು ಪ್ರಾಮಾಣಿಕವಾಗಿ ಶ್ರಮಿಸಬೇಕೆಂದು ಮನವಿ ಮಾಡಿದರು.

ಜೆಡಿಎಸ್ ಅಭ್ಯರ್ಥಿಯಾಗಿ ಎಸ್.ಮಹೇಶ್ ಅವರನ್ನು ವರಿಷ್ಠರು ಆಯ್ಕೆ ಮಾಡಲಾಗಿದ್ದಾರೆ. ಎನ್‌ಡಿಎ ಮಿತ್ರಪಕ್ಷಕ್ಕೆ ಒಂದು ನಿರ್ದೇಶಕ ಸ್ಥಾನವನ್ನು ನೀಡಲಾಗಿದೆ ಎಂದರು.

ಈ ವೇಳೆ ಮಾಜಿ ಸಚಿವ ಡಿ.ಸಿ. ತಮ್ಮಣ್ಣ, ಅಭ್ಯರ್ಥಿ ಎಸ್.ಮಹೇಶ್, ಮುಖಂಡರಾದ ಕೋಣಸಾಲೆ ಮಧು ಮತ್ತು ಅಂಕನಾಥಪುರ ಬಿಳಿಯಪ್ಪ ಇತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಸ್ಫೋಟಿಸಿಕೊಂಡು ಪ್ರಿಯಕರ ಆತ್ಮಹತ್ಯೆ

ಬಳಸುವ ಜಿಲೆಟಿನ್ ಸ್ಫೋಟಿಸಿಕೊಂಡು ಸೂಸೈಡ್ ಮಾಡಿಕೊಂಡಿದ್ದು, ಸ್ಫೋಟಕದ ಬಗ್ಗೆ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಸ್ಥಳಕ್ಕೆ ಬಾಂಬ್ ಪತ್ತೆ ಹಾಗೂ ನಿಷ್ಕ್ರಿಯ ದಳ ದೌಡಾಯಿಸಿ ಸ್ಫೋಟಕ್ಕೆ ಬಳಸಿರುವ ವಸ್ತು ಹಾಗೂ ತೀವ್ರತೆ ಬಗ್ಗೆಯೂ ಪರಿಶೀಲನೆ ನಡೆಸುತ್ತಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗ್ರಾಮದ ಸುತ್ತ–ಮುತ್ತ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದು, ಬಂಡೆ ಸ್ಫೋಟಕ್ಕೆ ಜಿಲೆಟಿನ್ ಕಡ್ಡಿಗಳನ್ನು ಬಳಸಲಾಗುತಿತ್ತು ಎನ್ನಲಾಗಿದೆ. ಈತನ ತಂದೆ ತಾಯಿ ಕೂಡ ಕಲ್ಲು ಗಣಿಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದರು. ಈತ ಕೂಡ ಗಣಿಗಾರಿಕೆ ನಡೆಸುತ್ತಿದ್ದವರಿಂದ ಜಿಲೆಟಿನ್ ಕಡ್ಡಿಯನ್ನು ಸಂಗ್ರಹಿಸಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಮಂಡ್ಯ ಎಸ್‌ಪಿ ಪ್ರತಿಕ್ರಿಯೆ: ಇನ್ನು ಈ ಪ್ರಕರಣದ ಬಗ್ಗೆ ಮಂಡ್ಯ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು, ಯುವಕ ಜಿಲೆಟಿನ್ ಸ್ಫೋಟಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರು. ಈ ಹಿಂದೆ ಯುವಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿತ್ತು. ಅಪ್ರಾಪ್ತೆಯನ್ನ ಮನೆಯಿಂದ ಕರೆದುಕೊಂಡು ಹೋಗಿದ್ದ. ಈ ಸಂಬಂಧ ನಾಗಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೂರು ತಿಂಗಳು ಜೈಲಿನಲ್ಲಿ ಇದ್ದು ಬಂದಿದ್ದಾನೆ. ಆನಂತರ ಕುಟುಂಬಸ್ಥರು ರಾಜೀ ಮಾಡಿಕೊಂಡಿಕೊಂಡಿದ್ದರು ಎಂದು ಪ್ರಕರಣ ವಿವರಿಸಿದರು. ಮೃತ ಯುವಕ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ನಿನ್ನೆ ರಾತ್ರಿ ಸಹ ಸ್ನೇಹಿತರ ಜೊತೆ ಮದ್ಯ ಸೇವನೆ ಕೂಡ ಮಾಡಿದ್ದ. ಸ್ಫೋಟಕ ಎಲ್ಲಿ ಸಿಕ್ಕಿದೆ ಎಂಬ ಬಗ್ಗೆ ತನಿಖೆ ಮಾಡಲಾಗುತ್ತಿದೆ ಸ್ಫೋಟಕ ನೀಡಿದವರ ವಿರುದ್ಧ ಕೂಡ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದರು.

ಕೊಡಗಿನ ಯೋಧ ಸಾವು

ದಿವಿನ್ ಶ್ವಾಸಕೋಶಕ್ಕೆ ತೀವ್ರ ಪೆಟ್ಟಾಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ರಾತ್ರಿ ಮೃತಪಟ್ಟಿದಾರೆ. ಮಗ ಐಸಿಯು ಘಟಕಕ್ಕೆ ದಾಖಲಾಗಿರುವ ವಿಚಾರ ತಿಳಿದು ದಿವಿನ್ ತಾಯಿ ಜಯಾ ಶುಕ್ರವಾರ ಶ್ರೀನಗರಕ್ಕೆ ತೆರಳಿದ್ದರು. ಸೋಮವಾರ ಬೆಳಗ್ಗೆ ಯೋಧ ದಿವಿನ್ ಅವರ ಪಾರ್ಥಿವ ಶರೀರ ಶ್ರೀನಗರದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತಲುಪಲಿದ್ದು, ನಂತರ ರಸ್ತೆ ಮಾರ್ಗವಾಗಿ ಸಂಜೆ ವೇಳೆಗೆ ಸ್ವಗ್ರಾಮ ಪಳಂಗೋಟುಗೆ ಬರಲಿದೆ. ಬಳಿಕ ಸರ್ಕಾರಿ ಸಲಕ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಲಿದೆ. ಜಯಾ ಅವರಿಗೆ ಯೋಧ ದಿವಿನ್ ಏಕೈಕ ಪುತ್ರನಾಗಿದ್ದು, 10 ವರ್ಷದ ಹಿಂದೆ ಸೇನೆಗೆ ಸೇರಿದ್ದರು. ಇತ್ತೀಚೆಗೆ ನಿಶ್ಚಿತಾರ್ಥ ಕೂಡ ನೆರವೇರಿದ್ದು, ಮುಂದಿನ ಫೆಬ್ರವರಿಯಲ್ಲಿ ವಿವಾಹ ನಿಶ್ಚಯವಾಗಿತ್ತು.

ಫಿಲಿಯೋಜಾ ಪ್ಯಾರೀಸ್‌ನಲ್ಲಿ ನಿಧನ

ಭಾಷೆಗೆ ಅನುವಾದಿಸಿದ್ದಾರೆ. ನವದೆಹಲಿಯಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಪರೇಡ್‌ಗೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂದರ್ಭದಲ್ಲಿ ಡಾ. ಪಿಯರಿ ಸಿಲ್ವೇನ್ ಫಿಲಿಯೋಜಾ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗಿದ್ದು ವಿಶೇಷ. ವಿದ್ಯಾನಾಥನೆಂಬ ಅಲಂಕಾರಿಕನು ರಚಿಸಿದ್ದ 'ಪ್ರತಾಪ್ ರುದ್ರ ಯಶೋ ಭೂಷಣ' ಶಾಸ್ತ್ರ ಗ್ರಂಥ ವಿವೇಚಿಸಿ ಡಾ. ಪಿಯರಿ ಸಿಲ್ವೇನ್ ಫಿಲಿಯೋಜಾ ಬರೆದಿರುವ ಮಹಾ ಪ್ರಬಂಧಕ್ಕೆ ಪ್ಯಾರೀಸ್ ವಿಶ್ವವಿದ್ಯಾನಿಲಯ 1962ರಲ್ಲಿ ಡಾಕ್ಟರೇಟ್ ನೀಡಿ ಗೌರವಿಸಿದೆ. ಇವರು ಸಂಸ್ಕೃತ ವ್ಯಾಕರಣ, ಕಾವ್ಯ, ಕಾವ್ಯಶಾಸ್ತ್ರ, ಶೈವ ಸಿದ್ಧಾಂತ, ಭಾರತೀಯ ವಾಸ್ತುಶಿಲ್ಪ ಮತ್ತು ದೇವಾಲಯಗಳ ಇತಿಹಾಸದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಸುಮಾರು 20 ಪುಸ್ತಕಗಳನ್ನು ಬರೆದಿರುವ ಇವರ ಪುಸ್ತಕದಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯ ಹಾಗೂ ಸುತ್ತಮುತ್ತಲಿನ ಪ್ರಕಾರಗಳ ಮೇಲೆ ಸಮಗ್ರ ಮಾಹಿತಿ ದೊರೆಯಲಿದೆ.

ಸಂವಿಧಾನ ಅನ್ವಯ ಆಗುವುದಿಲ್ಲವೇ?

ಕುಟುಂಬಸ್ಥರು ಆತಂಕಗೊಂಡು, ಕೂಡಲೇ ಹುಡುಕಿ ಕೊಡುವಂತೆ ಬೀದರ್‌ನ ಗಾಂಧಿಗಂಜ್ ಪೊಲೀಸ್ ಠಾಣೆಗೆ ಮನವಿ ಮಾಡಿದ್ದರು. ಆದರೆ ದೂರು ದಾಖಲಿಸುವಲ್ಲಿ ಪೊಲೀಸರು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಅವರು ದೂರಿದ್ದಾರೆ.

ಗೂಂಡಾಗಿರಿ: ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರು 15 ಲಕ್ಷಕ್ಕೂ ಅಧಿಕ ಹಣ ತೆಗೆದುಕೊಂಡು ಟೆಂಡರ್ ನೀಡದೆ ವಂಚನೆ ಮಾಡಿದ್ದು, ಮಾತ್ರವಲ್ಲದೆ 1 ಕೋಟಿ ಹಣ ನೀಡುವಂತೆ ಒತ್ತಡ, ಕೊಲೆ ಬೆದರಿಕೆ ಹಾಕಲಾಗಿದೆ ಎಂದು ಡೆತ್ ನೋಟ್‌ನಲ್ಲಿ ಉಲ್ಲೇಖವಾಗಿದೆ. ಕಲಬುರಗಿಯ ಮಾಜಿ ಕಾರ್ಪೊರೇಟ್ ರವಿ ಕಪನೂರು, ನಂದಕುಮಾರ್ ನಾಗಭುಜಂಗೆ, ಗೋರಖನಾಥ್ ಸೇರಿ 6 ಜನರ ವಿರುದ್ಧ ಜೀವ ಬೆದರಿಕೆ ಆರೋಪ ಮಾಡಲಾಗಿದೆ. ಇಂತಹ ಗೂಂಡಾಗಳನ್ನು ಆಪ್ತರಾಗಿ ಇಟ್ಟುಕೊಂಡ ಸಚಿವರು ಕೂಡ ಇಲ್ಲಿ ಹೊಣೆಗಾರರು ಎಂದು ಅವರು ಹೇಳಿದ್ದಾರೆ.

ರಾಜು ಕಪನೂರ್, ಖರ್ಗೆ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾನೆ. ಕಲಬುರಗಿ ಮಹಾನಗರ ಪಾಲಿಕೆ ಸದಸ್ಯನೂ ಆಗಿದ್ದ ರಾಜು ಕಪನೂರ್, ಈ ಹಿಂದೆ ಅಕ್ರಮ ಪಿಸ್ತೂಲ್ ಹೊಂದಿರುವ ಆರೋಪದಲ್ಲಿ ಬಂಧಿತನಾಗಿದ್ದ. ಇವೆಲ್ಲ ಗೊತ್ತಿದ್ದರೂ ಸಚಿವ ಪ್ರಿಯಾಂಕ್ ಖರ್ಗೆ ಆಪ್ತರಿಂದ ದೂರವಾಗಿಲ್ಲ. ಇಂತಹ ಗೂಂಡಾ, ಸಚಿವರ ಆಪ್ತ ಎಂದರೆ ನಮ್ಮ ರಾಜ್ಯದಲ್ಲಿ ಗೂಂಡಾಗಳ, ರೌಡಿಗಳ ಸರ್ಕಾರ ನಡೆಯುತ್ತಿದೆ ಎಂದರ್ಥ ಎಂದು ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಮಾನ ದುರಂತ: 179 ಮಂದಿ ಸಾವು

ತುರ್ತು ಸಂದೇಶ ರವಾನಿಸಿದ್ದ. ವಿಮಾನದ ಎಂಜಿನ್‌ಗೆ ಪಕ್ಷಿಗಳು ಡಿಕ್ಕಿಯಾಗಿ ಅದು ವಿಫಲವಾ ಗಿತ್ತು. ಈ ವೇಳೆ ಪೈಲಟ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿ ತುರ್ತು ಲ್ಯಾಂಡಿಂಗ್‌ಗೆ ಮುಂದಾಗಿದ್ದರು. ವಾಯುಗೋಪುರದಿಂದಲೂ ಲ್ಯಾಂಡಿಂಗ್ ಅನುಮತಿ ದೊರೆತಿದ್ದಾರೂ ಪೈಲಟ್ ಲ್ಯಾಂಡಿಂಗ್‌ಗೆ ಸುಮಾರು ಮೂರು ನಿಮಿಷಗಳನ್ನು ತೆಗೆದುಕೊಂಡಿದ್ದ. ಕಾರಣ ಈ ವೇಳೆ ವಿಮಾನದ ಲ್ಯಾಂಡಿಂಗ್ ಗೇರ್ ಕೂಡ ವಿಫಲವಾದ ಹಿನ್ನಲೆಯಲ್ಲಿ ಪೈಲಟ್ ಮುವಾನ್ ವಿಮಾನವನ್ನು ಬೆಲ್ಲಿ ಲ್ಯಾಂಡಿಂಗ್ ಮಾಡಲು ಮುಂದಾಗಿದ್ದ. ಆದರೆ ಬೆಲ್ಲಿ ಲ್ಯಾಂಡಿಂಗ್ ವಿಫಲವಾಗಿ ವಿಮಾನ ನೇರವಾಗಿ ಹೋಗಿ ನಿಲ್ದಾಣದ ತಡೆಗೋಡೆಗೆ ಡಿಕ್ಕಿಯಾಗಿ ಸ್ಫೋಟಗೊಂಡಿದೆ ಎನ್ನಲಾಗಿದೆ. ವಿಮಾನವು ಬಹುತೇಕ ಸಂಪೂರ್ಣವಾಗಿ ನಾಶವಾಗಿದ್ದು, ನಾವು ಅವಶೇಷಗಳನ್ನು ಪತ್ತೆಹಚ್ಚಿ ಮರುಪಡೆ ಯಲು ಸಮಯ ತೆಗೆದುಕೊಳ್ಳುತ್ತಿದೆ' ಎಂದು ಮುವಾನ್‌ನಲ್ಲಿರುವ ಅಗ್ನಿಶಾಮಕ ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ. ರಾಷ್ಟ್ರೀಯ ಶೋಕಾಚರಣೆ ಘೋಷಣೆ: ಘಟನೆ ಬಗ್ಗೆ ಸಂತಾಪ ವ್ಯಕ್ತಪಡಿಸಿದ ದ.ಕೊರಿಯಾ ಸರ್ಕಾರ ಡಿಸೆಂಬರ್ 29ರಿಂದ ಜನವರಿ 4ರ ವರೆಗೆ 7 ದಿನಗಳ ರಾಷ್ಟ್ರೀಯ ಶೋಕಾಚರಣೆಯನ್ನು ಘೋಷಿಸಿದೆ. ಇಂದು ಸಂಜೆ ನಡೆದ ತುರ್ತು ಸಭೆಯಲ್ಲಿ ದಕ್ಷಿಣ ಕೊರಿಯಾದ ಹಂಗಾಮಿ ಅಧ್ಯಕ್ಷ ಚೋಯ್ ಸಾಂಗ್–ಮೊಕ್, ರಾಷ್ಟ್ರೀಯ ಶೋಕಾಚರಣೆಯನ್ನು ಘೋಷಿಸಿದ್ದಾರೆ.

ಕುವೆಂಪು ವಿಶ್ವಮಾನವ ಸಂದೇಶ ಸರ್ವಕಾಲಿಕ

ಜಿಲ್ಲಾ ಜನಜಾಗೃತಿ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಅಭಿಪ್ರಾಯ


ತಿ.ನರಸೀಪುರದಲ್ಲಿ ಕುವೆಂಪು ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಡಿ.29– ಜಾತಿ, ಮತ, ಧರ್ಮ ಮೀರಿ ಮಾನವೀಯತೆ ಹಾದಿಯಲ್ಲಿ ವಿಶ್ವ ಮಾನವ ನಾಗಬೇಕೇಂಬ ಕುವೆಂಪು ಅವರ ಸಂದೇಶ ಸರ್ವ ಕಾಲೀಕವಾದುದು ಎಂದು ಜಿಲ್ಲಾ ಜನಜಾಗೃತಿ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ತಿಳಿಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್ ಏಜೆಂಟರ ಸಂಘ ಭಾನುವಾರ ಹಮ್ಮಿಕೊಂಡಿದ್ದ ರಾಷ್ಟ್ರಕವಿ ಕುವೆಂಪು ಜಯಂತಿಯಲ್ಲಿ ಮಾತನಾಡಿದ ಅವರು, ಕುವೆಂಪು ಅವರು ಬರೆದಿರುವ ಅನಿಕೇತನ ಕವನದಲ್ಲಿ ಈ ಸಂದೇಶ ಅಡಕವಾಗಿದ್ದು, ತಮ್ಮ ಜೀವನವನ್ನು ವಿಶ್ವಮಾನವ ಸಂದೇಶಕ್ಕೆ ಮೀಸಲಾಗಿಸಿದ್ದರು. ನನಗೆ ಕನ್ನಡ ಮತ್ತು ಅದರ ಉನ್ನತಿ ಮುಖ್ಯ ಆದರೆ ಅದಕ್ಕಿಂತ ವಿಶ್ವಮಾನವ ಸಂದೇಶ ಮುಖ್ಯ ಎಂದು ಹೇಳುವ ಮೂಲಕ ವಿಶ್ವಮಾನವ ಸಂದೇಶಕ್ಕೆ ನೆರವಾಗುವುದಾದರೆ ಪ್ರಶಸ್ತಿ ಸ್ವೀಕರಿಸುತ್ತೇನೆ ಎಂಬ ಮಾತುಗಳನ್ನು ಆಡಿದ್ದರು. ಅನಿಕೇತನ ಕವಿತೆ ವಿದ್ವಾಂಸರಿಗೂ ಅರ್ಥ ಆಗಿರಲಿಲ್ಲ ಎಂದರು.

ಕುವೆಂಪು ರೈತ ಕುಟುಂಬದಲ್ಲಿ ಜನಿಸಿ, ರಾಷ್ಟ್ರಕವಿ ಖ್ಯಾತಿ ಪಡೆದರು. ಅವರು ಕೊಟ್ಟ ವೈಚಾರಿಕ ವಿಷಯಗಳನ್ನು ಇಂದು ಅನುಸರಿಸಲು ಸಾಧ್ಯವಾಗಿಲ್ಲ. ಬರೀ ಅವರ ಪೂಜೆ ಮಾಡಲು ಮಾತ್ರ ನಾವು ಸೀಮಿತವಾಗಿದ್ದೇವೆ ಎಂದು ವಿಷಾದ ವ್ಯಕ್ತಪಡಿಸಿದರು. ಕುವೆಂಪು ಅವರ ಮಗ ಪೂರ್ಣಚಂದ್ರ ತೇಜಸ್ವಿ ಅವರಿಗೆ ಮದುವೆ ಮಾಡುವಾಗ ಮಂತ್ರ ಮಾಂಗಲ್ಯ ಬೋಧನೆ ಮಾಡಿ, ಧರ್ಮ, ಜಾತಿ, ವೈಚಾರಿಕತೆ ಮೀರಿ ನಾನು ವಿಶ್ವ ಪಥದತ್ತ ಸಾಗುತ್ತಿದ್ದೇನೆ ಎಂದು ಸಾರಿದರು ಎಂದರು.

ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಕುವೆಂಪು ಅವರು ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ಕನ್ನಡ ಭಾಷೆ ಅಭಿವೃದ್ಧಿಯಾಗಬೇಕು. ಇತರ ಭಾಷೆಗಳ ಮೇಲೆ ದ್ವೇಷ ಇರಬಾರದು. ಇಂಗ್ಲಿಷ್ ಕವಿತೆ ಬರೆಯುತ್ತಿದ್ದ ಅವರು ನಂತರ ಕನ್ನಡದ ಕಡೆಗೆ ತಿರುಗಿದರು. ಯಾವುದೇ ಭಾಷೆ ದ್ವೇಷಿಸಬಾರದು. ಇಂಗ್ಲಿಷ್ ಒಂದು ಭಾಷೆಯಾಗಿ ಕಲಿಯಬೇಕು ಎನ್ನುತ್ತಿದ್ದರು. ಆದರೆ ಕನ್ನಡ ಪ್ರೇಮ ಅಗಾಧವಾಗಿತ್ತು. ಎಲ್ಲಾ ಭಾಷೆಗಳನ್ನು ಕಲಿಯಬೇಕು. ಆದರೆ ನಮ್ಮ ಅಭಿವ್ಯಕ್ತಿ ಮಾಧ್ಯಮ ಕನ್ನಡ ಆಗಿರಬೇಕು ಎನ್ನುತ್ತಿದ್ದರು ಎಂದು ಬಣ್ಣಿಸಿದರು.

ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಎ.ಜೆ.ವೆಂಕಟೇಶ್, ನಾಗರಾಜು, ವೆಂಕಟೇಶ್, ಬಿ.ಎಸ್.ಬಸಪ್ಪ, ಖಾಸಗಿ ಬಸ್ ಏಜೆಂಟರ ಸಂಘದ ಕಾರ್ಯದರ್ಶಿ ರಾಜಣ್ಣ, ಖಜಾಂಚಿ ನಾಗಲಿಂಗು, ಪಿ.ನಾಗರಾಜು, ಮಹದೇವಣ್ಣ, ಶೇಷಾದ್ರಿ, ಮಾಧು, ಶಂಕರ್, ರೈಸ್ ನಾಗರಾಜು, ನಂಜುಂಡ, ಮಂಜುನಾಥ್, ಕೆ.ಕುಮಾರ್, ತಿರುಮಕೂಡಲು ಚೇತು ಉಪಸ್ಥಿತರಿದ್ದರು.

ಮುಂದಿನ ತಿಂಗಳಿಂದ ಸರ್ಕಾರದಿಂದ ಬಿಪಿ, ಶುಗರ್ ರೋಗಿಗಳಿಗೆ ಉಚಿತ ಮಾತ್ರೆ ವಿತರಣೆ


ಕಾರ್ಯಕ್ರಮವನ್ನು ತಾಲೂಕು ಆರೋಗ್ಯಾಧಿಕಾರಿ ಡಾ.ನಟರಾಜು ಉದ್ಘಾಟಿಸಿದರು.

ಚುಂಚನಕಟ್ಟೆ, ಡಿ.29– ರಾಜ್ಯ ಸರ್ಕಾರ ಗೃಹ ಆರೋಗ್ಯ ಯೋಜನೆಯಡಿ ಬಿಪಿ ಮತ್ತು ಮಧುಮೇಹ ರೋಗಿಗಳಿಗೆ ಜನವರಿಯಿಂದ ಉಚಿತವಾಗಿ ಮಾತ್ರೆಗಳನ್ನು ವಿತರಿಸಲಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ನಟರಾಜು ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಚಿಕ್ಕಕೊಪ್ಪಲು ಗ್ರಾಮದಲ್ಲಿ ಸಿ.ಹೆಚ್.ದೇವೇಗೌಡ ಸ್ಮಾರಕ ಉಚಿತ ವಾಚನಾಲಯದ ವತಿಯಿಂದ ಏರ್ಪಡಿಸಿದ್ದ ಹೃದಯಾಘಾತಕ್ಕೆ ಕಾರಣ ಮತ್ತು ನಿಯಂತ್ರಣದ ಕುರಿತ ವಿಚಾರ ಸಂಕಿರ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಕಾರ್ಯಕ್ರಮದಿಂದ ಬಡಜನತೆಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು. ಸಕ್ಕರೆ ಮತ್ತು ಕೊಬ್ಬಿನ ಆಹಾರಗಳ ಅತಿಯಾದ ಸೇವನೆ, ಕಡಿಮೆ ದೈಹಿಕ ಚಟುವಟಿಕೆಯೊಂದಿಗೆ ಜಡ ಜೀವನ ಶೈಲಿ, ಒತ್ತಡ, ನಿದ್ರೆಯ ಕೊರತೆ, ಧೂಮಪಾನ ಮತ್ತು ಮದ್ಯಪಾನವು ಹೃದ್ರೋಗಕ್ಕೆ ಪ್ರಮುಖ ಕಾರಣವಾಗಲಿದ್ದು, ವೈದ್ಯರು ನೀಡುವ ಮಾರ್ಗಸೂಚನೆಯಂತೆ ಹೃದಯಾಘಾತದ ಮುನ್ಸೂಚನೆ ಕಂಡು ಬಂದಾಗ ನಿರ್ಲಕ್ಷ್ಯ ವಹಿಸದೇ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಇದರಿಂದ ಹೃದಯಾಘಾತದಿಂದ ಪಾರಾಗಬಹುದು ಎಂದರು.

ಹೃದಯಾಘಾತ ತಪ್ಪಿಸಲು ಆರೋಗ್ಯಕರ ಆಹಾರ, ನಿಯಮಿತ ವ್ಯಾಯಾಮ, ಧೂಮಪಾನ ಮತ್ತು ಅತಿಯಾದ ಮದ್ಯಪಾನ ತಪ್ಪಿಸುವುದು. ಜೀವನದ ಜಂಜಾಟದ ಒತ್ತಡ ಕಡಿಮೆ ಮಾಡುವ ಜೊತೆಗೆ ಕಾಲ ಕಾಲಕ್ಕೆ ನಿಯಮಿತ ತಪಾಸಣೆಗಳನ್ನು ಮಾಡಿಸಿಕೊಳ್ಳುವುದರೊಂದಿಗೆ ಬಿಪಿ ಮತ್ತು ಸಕ್ಕರೆ ಕಾಯಿಲೆ ಅನುವಂಶಿಯವಾಗಿ ಬರುತ್ತಿರುವುದರಿಂದ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಎಂದರು.

ಇದೇ ವೇಳೆ ಸಿ.ಹೆಚ್.ದೇವೇಗೌಡ ಸ್ಮಾರಕ ಉಚಿತ ವಾಚನಾಲಯದಿಂದ ಹೊರ ತಂದಿರುವ 2025ರ ಕ್ಯಾಲೆಂಡರ್ ಅನ್ನು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ಬಿಡುಗಡೆಗೊಳಿಸಿದರು. ಕಾರ್ಯಕ್ರಮಕ್ಕೂ ಮೊದಲು ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಚಿಮುಕು ಬಳಗದ ಉಪಾಧ್ಯಕ್ಷ ಬಾಲಕಿಟ್ಟಿ, ಸ್ವಾಮಿ ಗೌಡ, ಜವರಮ್ಮ ಅವರಿಗೆ ಸಂತಾಪ ಸೂಚಿಸಲಾಯಿತು. ತಾಲೂಕು ಆರೋಗ್ಯಾಧಿಕಾರಿ ಡಾ.ನಟರಾಜು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕುಪ್ಪೆ ಗ್ರಾಪಂ ಅಧ್ಯಕ್ಷೆ ಸವಿತಾ, ಕುಪ್ಪೆ ಸಹಕಾರ ಸಂಘದ ಮಾಜಿ ಅಧ್ಯಕ್ಷ ಸಿ.ಟಿ.ಪಾರ್ಥ, ಚಿಮುಕು ಭೂಮಿ ಬಳಗದ ಅಧ್ಯಕ್ಷ ಸೋಮಪ್ಪ, ನಿವೃತ್ತ ಶಿಕ್ಷಕ ಸಿ.ಎಲ್.ಕಾಳೇಗೌಡ, ನಾಟಿವೈದ್ಯ ನಾಗರಾಜು, ಬಸವಣ್ಣ, ಸಣ್ಣಮೊಗೇಗೌಡ, ಸಿ.ಕೆ.ರಾಮಸ್ವಾಮಿ, ತುಂಗದಸ್ವಾಮಿ, ಸಿ.ಕೆ.ಕೆಂಪೇಗೌಡ, ಕೆ.ಎಸ್.ಸದಾಶಿವಕೀರ್ತಿ, ಗಂಗಾಧರ, ಕುಮಾರಸ್ವಾಮಿ, ವಸಂತ್, ಬಸವರಾಜು, ಪ್ರಸನ್ನ ಕುಮಾರ್, ಶಿಕ್ಷಕಿ ಸವಿತಾ, ಆಶಾ ಕಾರ್ಯಕರ್ತೆ ಸುಜಾತಮ್ಮ ಸೇರಿದಂತೆ ಮತ್ತಿತರರಿದ್ದರು.

ಪ್ರತಿಯೊಬ್ಬರಿಗೂ ದಿನಚರಿ ಬಹಳ ಮುಖ್ಯ


ಹಾಡ್ಯ ಪಿಎಸಿಎಸ್ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಮಲ್ಕುಂಡಿ, ಡಿ.29– ಪ್ರತಿಯೊಬ್ಬರಿಗೂ ದಿನಚರಿ ಬಹಳ ಮುಖ್ಯವಾಗಿದೆ ಎಂದು ಹಾಡ್ಯ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಂಕರ್ ತಿಳಿಸಿದರು.

ಸಮೀಪದ ಹಾಡ್ಯದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಯಾವುದೇ ಕಾರ್ಯ ನಿರ್ವಹಿಸಲು ಮತ್ತು ಹಬ್ಬ ಹರಿದಿನ ತಿಳಿಯಲು ಪ್ರತಿಯೊಬ್ಬರಿಗೂ ದಿನಚರಿ ಅವಶ್ಯಕ ಎಂದ ಅವರು ಸಹಕಾರ ಸಂಘದಲ್ಲಿ ಪ್ರತಿಯೊಬ್ಬ ರೈತರಿಗೆ ಸರ್ಕಾರದ ಸವಲತ್ತುಗಳನ್ನು ತಲುಪಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ತಿಳಿಸಿದರು. ಸಂಘದ ಉಪಾಧ್ಯಕ್ಷ ನೀಲಂತಪ್ಪ, ನಿರ್ದೇಶಕರಾದ ಬಸವರಾಜ್, ಶೇಖರಪ್ಪ, ಪುಟ್ಟದಾಸಯ್ಯ, ತಗಡೂರು ನಾಯಕ, ನಾಗಣ್ಣ, ಶಿವಣ್ಣ, ದೊಡ್ಡಸಿದ್ದೇಗೌಡ, ನಾಗಮ್ಮ, ಪದ್ಮ, ಸಿಇಓ ಎಂ.ಪಿ.ವೆಂಕಟರಾಜಯ್ಯ ಸೇರಿದಂತೆ ಇತರರಿದ್ದರು.

ಆದಿವಾಸಿ ಕುಟುಂಬಗಳಿಗೆ ಟಾರ್ಪಲ್ ವಿತರಣೆ


ಆನೆಮಾಳದ ಹಾಡಿ ಆದಿವಾಸಿಗಳಿಗೆ ಉಚಿತವಾಗಿ ಟಾರ್ಪಲ್ ವಿತರಿಸಲಾಯಿತು.

ಹೆಚ್.ಡಿ.ಕೋಟೆ, ಡಿ.29– ಅಮೂರ್ತ ಭಾರತಿ ಫೌಂಡೇಶನ್, ಅಮೂರ್ತ ಭಾರತೀಯ ಫೌಂಡೇಶನ್ ಹಾಗೂ ಐಪಿಇಐ ಫೌಂಡೇಶನ್ ವತಿಯಿಂದ ತಾಲೂಕಿನ ಆನೆಮಾಳ ಹಾಡಿಯ 110 ಆದಿವಾಸಿ ಕುಟುಂಬಗಳಿಗೆ ಟಾರ್ಪಲ್ ವಿತರಿಸಲಾಯಿತು.

ಟಾರ್ಪಲ್ ವಿತರಿಸಿ ಮಾತನಾಡಿದ ಎನ್.ಬೇಗೂರು ಗ್ರಾಪಂ ಅಧ್ಯಕ್ಷ ಶೈಲೇಂದ್ರ, ತಾಲೂಕಿನಲ್ಲಿ ಆದಿವಾಸಿಗಳು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರ ವಾಸದ ಮನೆಗಳು ಮಳೆ ಬಂದ ವೇಳೆ ಸೋರುತ್ತಿವೆ. ಅಲ್ಲದೇ ಬಿಸಿಲಿನ ತಾಪ ಹೆಚ್ಚಾಗಿದೆ. ಇದನ್ನು ಗಮನಿಸಿದ ಫೌಂಡೇಶನ್‌ನವರು ಆದಿವಾಸಿಗಳ ಮನೆ ಮೇಚ್ಛಾವಣಿ ಮುಚ್ಚಲು ಉಚಿತವಾಗಿ ಟಾರ್ಪಲ್‌ಗಳನ್ನು ನೀಡುತ್ತಿರುವುದು ಸಂತಸದ ವಿಚಾರ ಎಂದರು.

ಐಪಿಇಎಲ್ ಫೌಂಡೇಶನ್‌ನ ಸುಮಲತಾ ಮಾತನಾಡಿ, ಆನೆ ಮಾಳ ಹಾಡಿ ಆದಿವಾಸಿಗಳ ಆರ್ಥಿಕ ಸ್ಥಿತಿ ಬಗ್ಗೆ ಮಾಹಿತಿ ಸಂಗ್ರಹಿಸಿ ಅವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮೊದಲಿಗೆ ಅವರ ಮನೆಗಳ ಮೇಲ್ಚಾವಣಿಗೆ ಹಾಕಲು ಉಚಿತವಾಗಿ ಟಾರ್ಪಲ್‌ಗಳನ್ನು ನೀಡಿದ್ದು, ಮುಂದಿನ ದಿನಗಳಲ್ಲಿ ಆದಿವಾಸಿಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯ ಕಲ್ಪಿಸಲು ನಮ್ಮ ಫೌಂಡೇಶನ್ ಮುಂದಾಗಲಿದೆ ಎಂದರು. ಇದೇ ವೇಳೆ ಆದಿವಾಸಿ ಮುಖಂಡ ರಾಜು, ಪ್ರಕಾಶ್, ಮುಖಂಡರಾದ ಪುಟ್ಟಬಸವಯ್ಯ, ಅಯ್ಯಪ್ಪ, ಮಾಧು, ಮಹದೇವ, ಸೋಮಶೇಖರ್, ಫೌಂಡೇಶನ್‌ನ ಆಕಾಶ್ ಇನ್ನಿತರರಿದ್ದರು.

ಸುತ್ತೂರು ಶ್ರೀಗಳಿಂದ ಆಶೀರ್ವಾದ


ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ನೂತನ ನಿರ್ದೇಶಕ ಕೀಳನಪುರ ಮಹದೇವಪ್ಪ ಅವರು ಸುತ್ತೂರಿಗೆ ಭೇಟಿ ನೀಡಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಈ ವೇಳೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಬಸವರಾಜ್, ಕೀಳನಪುರ ಗ್ರಾಪಂ ಅಧ್ಯಕ್ಷ ನಂಜುಂಡಸ್ವಾಮಿ, ಮೈಸೂರು ಜಿಲ್ಲಾ ವಕೀಲರ ಸಂಘದ ಸುರೇಶ್ ಇನ್ನಿತರರಿದ್ದರು.

ಮಸೀದಿ ಕಟ್ಟಡ ಕಾಮಗಾರಿ ಪರಿಶೀಲಿಸಿದ ಹೆಚ್‌ಪಿಎಂ


ಮಸೀದಿ ಸಮಿತಿಯಿಂದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು, ಡಿ.29– ನಗರದ ಹಳೇ ಸೇತುವೆ ಬಳಿ ನೂತನವಾಗಿ ನಿರ್ಮಿಸುತ್ತಿರುವ ಜಾಮೀಯ ಮಸೀದಿ ಕಟ್ಟಡ ಕಾಮಗಾರಿಯನ್ನು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಪರಿಶೀಲಿಸಿದರು.

ಬಳಿಕ ಮಸೀದಿ ಸಮಿತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಜಾಮೀಯ ಮಸೀದಿ ಕಟ್ಟಡ ನಿರ್ಮಾಣಕ್ಕೆ ವೈಯಕ್ತಿಕವಾಗಿ 2 ಲಕ್ಷ ರೂ. ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಅನುದಾನ ಕೊಡಿಸಲು ಕ್ರಮ ವಹಿಸುತ್ತೇನೆ. ಶೀಘ್ರ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಇಲ್ಲಿನ ಮಸೀದಿ ಸಮಿತಿಯಿಂದ ಹಿರಿಯ ಹಾಗೂ ಕಿರಿಯ ಗುರುಗಳಿಗೆ ವಸತಿಗೃಹ ನಿರ್ಮಿಸಿ ಕೊಡುವಂತೆ ಮನವಿ ಸಲ್ಲಿಸಿದ್ದೀರಿ. ಈ ಬಗ್ಗೆ ಸಂಬಂಧಪಟ್ಟ ಸಚಿವರ ಮನವೊಲಿಸಿ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು.

ಮಸೀದಿ ನೂತನ ಕಟ್ಟಡಕ್ಕೆ ಸಚಿವ ಜಮೀರ್ ಅಹಮ್ಮದ್ ಖಾನ್ ಅವರು 7 ಲಕ್ಷ ರೂ. ವೈಯಕ್ತಿಕ ಸಹಾಯಧನ ನೀಡಿದ್ದು, ತಮ್ಮ ಇಲಾಖೆಯಿಂದ 15 ಲಕ್ಷ ರೂ. ಸೇರಿದಂತೆ 22 ಲಕ್ಷ ರೂ. ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಅವಶ್ಯ ಇರುವ ಅನುದಾನ ನೀಡುವಂತೆ ಸಚಿವರಿಗೆ ಮನವಿ ಮಾಡುವುದಾಗಿ ತಿಳಿಸಿದರು.

ಮಸೀದಿ ಅಧ್ಯಕ್ಷ ಎಸ್.ಅಸ್ಲಾಂ ಮಾತನಾಡಿ, ಮಾಜಿ ಶಾಸಕ ಮಂಜುನಾಥ್ ಅವರು ಈ ಬಾರಿ ಚುನಾವಣೆಯಲ್ಲಿ ಸೋತಿರುವುದು ನೋವಿನ ಸಂಗತಿಯಾಗಿದೆ. ಜನರ ಸಂಕಷ್ಟಗಳಿಗೆ ಸ್ಪಂದಿಸುವ ಮಂಜುನಾಥ್ ಅವರನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಎಂಎಲ್‌ಸಿ ಮಾಡಬೇಕು ಎಂದು ಒತ್ತಾಯಿಸಿದರು.

ಮಸೀದಿ ಕಾರ್ಯದರ್ಶಿ ಸಾಲಿನ್ ಅಹ್ಮದ್, ಹಿರಿಯ ಗುರುಗಳಾದ ಮುತಬೀರ್, ನಗರಸಭೆ ಮಾಜಿ ಸದಸ್ಯರಾದ ಜಾಕೀರ್ ಹುಸೇನ್, ಸಮಿತಿಯ ಸದಸ್ಯರು, ಗ್ಯಾರಂಟಿ ಯೋಜನೆ ಅಧ್ಯಕ್ಷ ರಾಘು ಹಾಜರಿದ್ದರು.

ಸಂವಿಧಾನ ಪೀಠಿಕೆ ಮೂಲಕ ಮಕ್ಕಳಿಗೆ ಕಾನೂನು ಅರಿವು

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ


ಸಂವಿಧಾನ ಪೀಠಿಕೆ ಭಾವಚಿತ್ರವನ್ನು ಶಾಲೆಗೆ ನೀಡಲಾಯಿತು.

ತಿ.ನರಸೀಪುರ, ಡಿ.29– ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನವನ್ನು ಪ್ರತಿಯೊಬ್ಬರೂ ಒಪ್ಪಿಕೊಂಡಿದ್ದು, ಶಾಲಾ ಹಂತದಲ್ಲೇ ಮಕ್ಕಳಿಗೆ ಸಂವಿಧಾನ ಪೀಠಿಕೆ ಮನವರಿಕೆ ಮಾಡಿಕೊಡುವ ಮೂಲಕ ಕಾನೂನು ಅರಿವು ಮೂಡಿಸಲಾಗುತ್ತಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ. ಶಿವಮೂರ್ತಿ ತಿಳಿಸಿದರು.

ಪುರಸಭಾ ಸದಸ್ಯ ತುಂಬಲ ಪ್ರಕಾಶ್ ಅವರು ತಾಲೂಕಿನ ಮಾದಾಪುರ ಕ್ಲಸ್ಟರ್‌ನ ಎಲ್ಲಾ ಶಾಲೆಗಳಿಗೆ ಕೊಡುಗೆ ನೀಡಿದ ಡಾ.ಅಂಬೇಡ್ಕರ್ ಚಿತ್ರ ಸಹಿತ ಸಂವಿಧಾನ ಪೀಠಿಕೆ ಭಾವಚಿತ್ರವನ್ನು ಶಾಲೆಗಳಿಗೆ ವಿತರಣೆ ಮಾಡಿ ಮಾತನಾಡಿದರು.

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಎನ್.ನಾಗೇಶ್ ಮಾತನಾಡಿ, ದೇಶದಲ್ಲಿ ಎಲ್ಲರೂ ಸಂವಿಧಾನ ಒಪ್ಪಿ ಸ್ವೀಕರಿಸಿದ್ದಾರೆ. ನಾವೆಲ್ಲರೂ ಅದನ್ನು ಪಾಲಿಸಬೇಕು. ನಾವೆಲ್ಲರೂ ಕಾನೂನಿನ ಅಡಿಯಲ್ಲಿದ್ದು, ಇಲ್ಲಿ ಎಲ್ಲರೂ ಸಮಾನರು. ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಸಂವಿಧಾನದ ಆಶಯವನ್ನು ಎಲ್ಲಾ ಮಕ್ಕಳಿಗೆ ತಿಳಿಸಬೇಕಾಗಿದ್ದು, ಎಲ್ಲಾ ಶಾಲೆಗಳಲ್ಲಿ ಪ್ರಾರ್ಥನಾ ಸಮಯದಲ್ಲಿ ಸಂವಿಧಾನ ಪೀಠಿಕೆ ಬೋಧಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಪೌರಸಭಾ ಸದಸ್ಯ ತುಂಬಲ ಪ್ರಕಾಶ್ ಅವರು ಎಲ್ಲಾ ಶಾಲೆಗಳಿಗೆ ಸಂವಿಧಾನ ಪೀಠಿಕೆ ಕೊಡುಗೆ ನೀಡಿರುವುದು ಶ್ಲಾಘನೀಯ ಎಂದರು.

ಪುರಸಭಾ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಬಿಆರ್‌ಪಿ ಕೆ.ಪಿ.ಮಹದೇವಸ್ವಾಮಿ, ಮಾದಾಪುರ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಸಿ.ಭಾಸ್ಕರ, ಸಿ.ಬಿ.ಹುಂಡಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಎನ್.ಸಿ.ಚೆಲುವರಾಜು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಟಿ.ಎನ್.ನಾಗೇಂದ್ರ, ಕ್ಲಸ್ಟರ್‌ನ ಬಡ್ತಿ ಮುಖ್ಯ ಶಿಕ್ಷಕರಾದ ಜಯಪ್ರಕಾಶ್, ಪಿ.ಮಹದೇವಯ್ಯ, ಆರ್.ಮಹದೇವಮ್ಮ, ಚಂದ್ರಶೇಖರ, ಎನ್.ನಾಗೇಂದ್ರ, ಎಂ.ಡಿ. ಮೂರ್ತಿ, ಎಸ್.ಉಮಾ ಮುಂತಾದವರಿದ್ದರು. ಇಲಾಖೆ ಪರವಾಗಿ ತುಂಬುಲ ಪ್ರಕಾಶ್ ಅವರನ್ನು ಗೌರವಿಸಲಾಯಿತು.

> ‘ನಾನೂ ಕೂಡ ಸರ್ಕಾರಿ ಶಾಲೆಯಲ್ಲಿ ಓದಿದವನು. ಶಿಕ್ಷಕರು ಮಾರ್ಗದರ್ಶನದಲ್ಲಿ ಈ ಮಟ್ಟಕ್ಕೆ ಬೆಳೆದಿದ್ದೇನೆ. ವಿದ್ಯಾರ್ಥಿಗಳು ಸಂವಿಧಾನ ಓದಿ ಅಂಬೇಡ್ಕರ್ ಅವರ ಆದರ್ಶದಿಂದ ಬೆಳೆಯಬೇಕು. ಸರ್ಕಾರಿ ಶಾಲೆಗಳ ಉನ್ನತೀಕರಣಕ್ಕೆ ಸಿದ್ಧನಿದ್ದೇನೆ.
> - ತುಂಬಲ ಪ್ರಕಾಶ್, ಪುರಸಭಾ ಸದಸ್ಯ

ಪ್ರಗತಿಪರ ರೈತನಿಗೆ ಸನ್ಮಾನ


ದೆಹಲಿಯಲ್ಲಿ ಫೆಡರೇಶನ್ ಆಫ್ ಆಲ್ ಇಂಡಿಯಾ ಫಾರ್ಮರ್ ಅಸೋಸಿಯೇಷನ್ ವತಿಯಿಂದ ನಡೆದ ರಾಷ್ಟ್ರೀಯ ರೈತ ದಿನಾಚರಣೆಯಲ್ಲಿ ಪಿರಿಯಾಪಟ್ಟಣ ತಾಲೂಕಿನ ಪ್ರಗತಿಪರ ರೈತ ಹಲಗನಹಳ್ಳಿ ಗ್ರಾಮದ ಅತ್ತರ್ ಮತೀನ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ತಂಬಾಕು ಮಂಡಳಿ ಅಧ್ಯಕ್ಷ ಯಶವಂತ್, ಮಾಜಿ ಅಧ್ಯಕ್ಷ ಶೇಷಗಿರಿರಾವ್, ಅಸೋಸಿಯೇಷನ್ ಅಧ್ಯಕ್ಷ ಬಿ.ವಿ.ಜವರೇಗೌಡ, ಕಾರ್ಯದರ್ಶಿ ಮುರಳಿ, ಕುಮಾರ್, ಶ್ರೀನಿವಾಸ್, ವಿಜ್ಞಾನಿ ತ್ರಿವೇದಿ ಇತರರಿದ್ದರು.

ಪೊಲೀಸರಿಂದ ಅಪರಾಧ ತಡೆ ಮಾಸಾಚರಣೆ



ಹುಣಸೂರಲ್ಲಿ ಅಪರಾಧ ತಡೆ ಮಾಸಾಚರಣೆ ನಡೆಯಿತು.

ಹುಣಸೂರು ಡಿ.29– ಅಪರಾಧ ತಡೆ ಮಾಸಚರಣೆ ಅಂಗವಾಗಿ ನಗರದ ವಿ.ವಿ.ಸರ್ಕಲ್, ಕೋಟೆ ಸರ್ಕಲ್, ಸಂವಿಧಾನ ಸರ್ಕಲ್, ಬಸ್ ನಿಲ್ದಾಣ ಸೇರಿದಂತೆ ವಿವಿಧೆಡೆ ವಾಹನ ಹಾಗೂ ಆಟೋ ಚಾಲಕರಿಗೆ ಪೊಲೀಸರು ಅಪರಾಧ ತಡೆ ಬಗ್ಗೆ ಅರಿವು ಮೂಡಿಸಿದರು.

ಎಸ್‌ಐ ತಿಮ್ಮರಾಜನಾಯಕ್ ಮಾತನಾಡಿ, ಆಟೋ ಚಾಲಕರು ಕರ್ತವ್ಯದ ವೇಳೆ ಜಾಗೃತರಾಗಿರಬೇಕು. ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು. ಡಿಎಲ್, ಆರ್‌ಸಿ, ಎಫ್‌ಸಿ, ಇನ್ಶೂರೆನ್ಸ್ ಸೇರಿದಂತೆ ಮತ್ತಿತರ ದಾಖಲೆಗಳನ್ನು ಹೊಂದಿರಬೇಕು. ನಗರಕ್ಕೆ ಹೊಸಬರು ಬಂದಾಗ ಅವರಿಗೆ ಮಾಹಿತಿ ನೀಡಿ ಸರಿಯಾದ ವಿಳಾಸಕ್ಕೆ ತಲುಪಿಸಬೇಕು. ಪ್ರಯಾಣಿಕರೊಂದಿಗೆ ಅನುಚಿತವಾಗಿ ವರ್ತಿಸಬಾರದು. ಅಲ್ಲದೇ ತಮಗೆ ತಿಳಿಯುವ ಅಪರಾಧಗಳ ಬಗ್ಗೆ ನಮಗೆ ಮಾಹಿತಿ ನೀಡಬೇಕು. ಆತುರವಾಗಿ ಓಡಿ ಬಂದು ಆಟೋ ಹತ್ತುವವರ ಬಗ್ಗೆ ನಿಗಾ ವಹಿಸಿ ಅವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು. ಇದರಿಂದ ಅಪರಾಧ ಪ್ರಕರಣಗಳನ್ನು ತಡೆಗಟ್ಟಬಹುದಾಗಿದೆ ಎಂದರು.

ಈ ವೇಳೆ ಮುಖ್ಯ ಪೇದೆಗಳಾದ ಕೃಷ್ಣಶೆಟ್ಟಿ, ಚೇತನ್ ಕುಮಾರ್, ಸಿಬ್ಬಂದಿಗಳಾದ ವೆಂಕಟೇಶ್ ಪ್ರಸಾದ್, ಆಟೋ ಚಾಲಕರಾದ ಮಂಜು, ವೆಂಕಟಚಲ, ವಾಸು, ಮಹದೇವ ಮೂರ್ತಿ, ಮಧು ಇನ್ನಿತರರಿದ್ದರು.

ಸರಗೂರಲ್ಲಿ ವರ್ತಕರ ಮಂಡಳಿ ವಾರ್ಷಿಕೋತ್ಸವ


ಕಾರ್ಯಕ್ರಮವನ್ನು ಡಾ.ಆರ್.ಬಾಲಸುಬ್ರಹ್ಮಣ್ಯಂ ಉದ್ಘಾಟಿಸಿದರು.

ಸರಗೂರು, ಡಿ.29– ವಿವೇಕಾನಂದ ಆಸ್ಪತ್ರೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಬೆಳೆಯಲು ಇಲ್ಲಿನ ವರ್ತಕರ ಮಂಡಳಿ ಹಾಗೂ ಲಯನ್ಸ್ ಕ್ಲಬ್ ಸಹಕಾರ ನೀಡಿದೆ ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ಮಾನವ ಸಂಪನ್ಮೂಲ ಸಾಮರ್ಥ್ಯ ಅಭಿವೃದ್ಧಿ ಆಯೋಗ ಸದಸ್ಯದ ಸದಸ್ಯ ಡಾ.ಆರ್.ಬಾಲಸುಬ್ರಹ್ಮಣ್ಯಂ ತಿಳಿಸಿದರು.

ಪಟ್ಟಣದಲ್ಲಿ ನಡೆದ ವರ್ತಕರ ಮಂಡಳಿ ವಾರ್ಷಿಕೋತ್ಸವ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವರ್ತಕರ ಮಂಡಳಿ ಹಾಗೂ ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್‌ಗೂ ಅವಿನಾಭಾವ ಸಂಬಂಧವಿದೆ. ನಾವು ಸರಗೂರಲ್ಲಿ ಆಸ್ಪತ್ರೆ ನಿರ್ಮಾಣ ಮಾಡುವ ಯೋಚನೆ ಮಾಡಿರಲಿಲ್ಲ. ಆದರೆ ವರ್ತಕರ ಮಂಡಳಿ ಮತ್ತು ಲಯನ್ಸ್ ಕ್ಲಬ್‌ನ ಪದಾಧಿಕಾರಿಗಳು ಸರಗೂರಲ್ಲಿ ಆಸ್ಪತ್ರೆ ನಿರ್ಮಿಸಿ ನಾವು ಸಹ ಸಹಕಾರ ನೀಡುತ್ತೇವೆ ಎಂದು ಮನವಿ ಮಾಡಿದ್ದರಿಂದ ಆಸ್ಪತ್ರೆ ಸ್ಥಾಪನೆಯಾಗಿ ಇಂದು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಜೆಎಸ್‌ಎಸ್ ಶಾಲಾಭಿವೃದ್ಧಿ ಸಂಸ್ಥೆ ಹಾಗೂ ಸ್ನೇಹ ಸ್ತ್ರೀ ಸಮಾಜದ ಅಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ ಮಾತನಾಡಿ, ಧೈರ್ಯಂ ಸರ್ವತ್ರ ಸಾಧನಂ ಎಂಬ ನಾಣ್ಣುಡಿಯಂತೆ ನಾವು ಧೈರ್ಯದಿಂದ ನಮ್ಮ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು. 1983ರಲ್ಲಿ 13 ಮಕ್ಕಳಿಂದ ಪ್ರಾರಂಭವಾದ ಜೆಎಸ್‌ಎಸ್ ಶಾಲೆ ಹಲವು ಅಡಚಣೆಗಳನ್ನು ದಾಟಿ ಮುನ್ನಡೆದಿದ್ದು, ಇಂದು 1500ಕ್ಕೂ ಹೆಚ್ಚು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಓದಿದ ಮಕ್ಕಳು ಉನ್ನತ ಹುದ್ದೆ ಅಲಂಕರಿಸಿದ್ದಾರೆ. ವರ್ತಕರ ಸಂಘ ಸರಗೂರು ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಕೈ ಜೋಡಿಸುತ್ತಾ ಬಂದಿದೆ. ಪ್ರತಿಯೊಬ್ಬರೂ ಕಾಯಕ ನಿಷ್ಠೆಯಿಂದ ದುಡಿದರೆ ಬದುಕಿನ ಹಾದಿ ಸುಗಮವಾಗಲಿದೆ ಎಂದರು.


ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಆರೋಗ್ಯ ಕ್ಷೇತ್ರದ ಮುಖ್ಯಸ್ಥ ಡಾ.ಕುಮಾರ್ ಮಾತನಾಡಿ, ವರ್ತಕರ ಸಂಘ ಸರಗೂರಿನ ಉಪಶಮನ ಆರೈಕೆ ಕೇಂದ್ರಕ್ಕೆ 60 ಸಾವಿರ ದೇಣಿಗೆ ನೀಡಿದೆ. ತಾಲೂಕಿನಲ್ಲಿ ಹಾಸಿಗೆ ಹಿಡಿದ 300 ರೋಗಿಗಳ ಮನೆಗೆ ತೆರಳಿ ಸ್ವಾಮಿ ವಿವೇಕಾನಂದ ಸ್ಮಾರಕ ಆಸ್ಪತ್ರೆ ಚಿಕಿತ್ಸೆ ನೀಡುತ್ತಿದೆ ಎಂದರು. ವರ್ತಕರ ಸಂಘದ ಮಾಜಿ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್ ವರ್ತಕರ ಸಂಘ ನಡೆದು ಬಂದ ಹಾದಿಯನ್ನು ಸವಿವರವಾಗಿ ತಿಳಿಸಿದರು.

ಪಪಂ ಮುಖ್ಯಾಧಿಕಾರಿ ಎಸ್.ಕೆ ಸಂತೋಷ್ ಕುಮಾರ್ ಮಾತನಾಡಿ, ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ. ಪಟ್ಟಣದ ಸ್ವಚ್ಛತೆ, ಚರಂಡಿ, ನೀರು, ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುವುದು. ಇದಕ್ಕೆ ನಿಮ್ಮಗಳ ಸಹಕಾರ ಅಗತ್ಯ ಎಂದರು.

ವರ್ತಕ ಸಂಘದಿಂದ ಶ್ರೀಕ್ಷೇತ್ರ ಭೀಮನ ಕೊಲ್ಲಿ ದೇವಾಲಯಕ್ಕೆ 8 ಸೀಲಿಂಗ್ ಫ್ಯಾನ್‌ಗಳನ್ನು ಕೊಡುಗೆ ನೀಡಲಾಯಿತು. ನಿರ್ಗಮಿತ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್ ನೂತನ ಅಧ್ಯಕ್ಷ ಎನ್.ಪಿ. ಪ್ರಸಾದ್ ಅವರಿಗೆ ತಕ್ಕಡಿ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು. ಉಪಾಧ್ಯಕ್ಷರಾಗಿ ಎಸ್.ಎನ್. ಮೋಹನ್ ಕುಮಾರ್, ಟಿ.ಕರಿಯಪ್ಪ ಕಾರ್ಯದರ್ಶಿಯಾಗಿ ಎಸ್.ಸಿ. ವೆಂಕಟೇಶ್, ಖಜಾಂಚಿಯಾಗಿ ಸಿಡಗ್ಲರಾಮ್, ಸಹ ಕಾರ್ಯದರ್ಶಿಯಾಗಿ ಹುಕ್ಕುಂಸಿಂಗ್ ಅಧಿಕಾರ ಸ್ವೀಕರಿಸಿದರು.


ಚಲನಚಿತ್ರ ನಿರ್ದೇಶಕ ಕಾರ್ತಿಕ್ ಮಾತನಾಡಿದರು. ಈ ವೇಳೆ ಹಿರಿಯ ವರ್ತಕರಾದ ಹೆಚ್.ನಾಗೇಗೌಡ, ಎಸ್.ಸಿ.ಬ್ಯಂಗೀಶ್ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಗೌರವಾಧ್ಯಕ್ಷ ಬ್ರಹ್ಮದೇವಯ್ಯ, ಎಸ್.ವಿ.ಯೋಗೇಶ್, ಎಸ್.ಬಿ.ನಾಗರಾಜು, ಪ್ರತಾಪ್, ಕೆ.ಸುರೇಶ್ ಜೈನ್, ಎಸ್.ವಿ.ಕೃಷ್ಣಾಚಾರ್ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು. ಕಲಾವಿದರಾದ ಭೈರನಾಯಕ, ರವಿಕುಮಾರ್ ಅರ್ಪಿಸುವ ಧ್ರುವತಾರೆ ಮೇಲೋಡಿಸ್ ತಂಡದವ ರಿಂದ ಸುಮಧುರ ಗೀತೆಗಳ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಸರ್ಕಾರಿ ನೌಕರರ ಸಂಘಕ್ಕೆ ಗಿರೀಶ್ ಕಾರ್ಯದರ್ಶಿ



ಹುಣಸೂರು ಡಿ.29– ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಘಟಕದ ಕಾರ್ಯದರ್ಶಿಯಾಗಿ ತಾಲೂಕಿನ ಕಟ್ಟೆಮಳಲವಾಡಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಹೆಚ್.ಪಿ. ಗಿರೀಶ್ ಅವರನ್ನು ತಾಲೂಕು ಘಟಕದ ಅಧ್ಯಕ್ಷ ಶಶಿಕುಮಾರ್ ನೇಮಕ ಮಾಡಿದ್ದಾರೆ.

ನಿಧನ



ವೆಂಕಟರಾಜಯ್ಯ

ಮಲ್ಕುಂಡಿ, ಡಿ.29– ಗ್ರಾಮದ ನಿವಾಸಿ ವೆಂಕಟರಾಜಯ್ಯ (82) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ವೆಂಕಟರಮಣೇಗೌಡ



ಹುಣಸೂರು, ಡಿ.29– ತಾಲೂಕಿನ ಶಾನುಭೋಗನಹಳ್ಳಿ ಗ್ರಾಮದ ಯಜಮಾನ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ವೆಂಕಟರಮಣೇಗೌಡ(62) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ವಿವಿಧೆಡೆ ರಾಷ್ಟ್ರಕವಿ ಕುವೆಂಪು ಜನ್ಮದಿನ ಆಚರಣೆ





ಮೈಸೂರಿನ ಕಲಾಮಂದಿರದ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆದ ಕುವೆಂಪು ಅವರ ಜಯಂತಿ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಮತ್ತೊಂದು ಚಿತ್ರದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಕುವೆಂಪುನಗರದಲ್ಲಿರುವ ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವಿಸಿರುವುದನ್ನು ಕಾಣಬಹುದು.

ಮೈಸೂರು, ಡಿ.29(ಎಂಟಿವೈ)–ಮೈಸೂರಿನ ವಿವಿಧೆಡೆ ಭಾನುವಾರ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವನ್ನು ಸರಳವಾಗಿ ಆಚರಿಸಿ ಗೌರವ ಸಮರ್ಪಿಸಲಾಯಿತು.

ಮಾಜಿ ಪ್ರಧಾನಿ ಡಾ. ಮನಮೋಹನ್‌ಸಿಂಗ್ ನಿಧನದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಶೋಕಾಚರಣೆ ಘೋಷಿಸಿರುವುದರಿಂದ ಕುವೆಂಪು ಜನ್ಮ ದಿನದ ಕಾರ್ಯಕ್ರಮ ಸಾಂಪ್ರದಾಯಿಕ ಮತ್ತು ಸರಳ ಆಚರಣೆಗೆ ಸೀಮಿತವಾಗಿತ್ತು. ಮೈಸೂರು ಜಿಲ್ಲಾಡಳಿತದ ವತಿಯಿಂದ ಕಲಾಮಂದಿರದ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ್ದ ಕುವೆಂಪು ಅವರ ಜಯಂತಿ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕ ಸುದರ್ಶನ್, ಮುಖಂಡ ಮಲ್ಲೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ವಿವಿಧ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಕುವೆಂಪು ಜನ್ಮದಿನದ ಕಾರ್ಯಕ್ರಮದಲ್ಲಿ ಸಾಹಿತಿ ಕಾಳೇಗೌಡ ನಾಗವಾರ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹಾಗೂ ಇನ್ನಿತರರು ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವಿಸಿದರು.

ವಿವಿಧ ಸಂಘ–ಸಂಸ್ಥೆಗಳಿಂದ: ಮೈಸೂರಿನ ಕುವೆಂಪು ನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಗೆ ವಿವಿಧ ಸಂಘಟನೆಗಳ ಮುಖಂಡರು ಮಾಲಾರ್ಪಣೆ ಮಾಡುವ ಮೂಲಕ ರಾಷ್ಟ್ರಕವಿಗೆ ನುಡಿ ನಮನ ಸಲ್ಲಿಸಿದರು.

ಮೈಸೂರಿನ ನಾಗರಿಕ ಸಾಂಸ್ಕೃತಿಕ ವೇದಿಕೆ, ಕುವೆಂಪು ಕ್ಷೇಮಾಭಿವೃದ್ಧಿ ಸಂಘ, ರಾಮಕೃಷ್ಣನಗರ ಹಿತರಕ್ಷಣಾ ಸಮಿತಿ, ನಂದಿ ಬಳಗ, ಕರ್ನಾಟಕ ಸೇನಾಪಡೆ ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಮುಖಂಡರು ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರು ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ ಮೂಲಕ ಸಮಾಜದಲ್ಲಿ ಬೆಳಕು ಚೆಲ್ಲುವ ಪ್ರಯತ್ನ ಮಾಡಿದರು. ಕನ್ನಡ ಸಾಹಿತ್ಯ ಲೋಕದ ಅಪರೂಪದ ಮೇರು ಸಾಹಿತಿಯಾಗಿ ಕುವೆಂಪು ಅವರು ಗುರುತಿಸಿಕೊಂಡಿದ್ದಾರೆ. ಜಾತಿ, ಧರ್ಮ, ಮೇಲು–ಕೀಳು ಎಂಬ ಭೇದ–ಭಾವವನ್ನು ಹೋಗಲಾಡಿಸಿ, ವಿಶ್ವ ಮಾನವ ಸಂದೇಶವನ್ನು ಸಾರಿದರು. 'ಓ ನನ್ನ ಚೇತನಾ ಹಾಗೂ ನೀ ಅನಿಕೇತನ' ಎಂಬ ಸಂದೇಶವನ್ನು ಜೀವನದುದ್ದಕ್ಕೂ ಪಸರಿಸಿದ ಮಹಾನ್ ವ್ಯಕ್ತಿ ಕುವೆಂಪು ಆಗಿದ್ದರು ಎಂದು ತಿಳಿಸಿದರು.

ಈ ವೇಳೆ ಸಾಹಿತಿ ಡಾ. ಕಾಳೇಗೌಡ ನಾಗವಾರ ಮಾತನಾಡಿ, ಕುವೆಂಪು ಅವರ ಸಮಗ್ರ ಸಾಹಿತ್ಯದ ಬಗ್ಗೆ ವಿಚಾರ ಸಂಕಿರಣವನ್ನು ಆಯೋಜಿಸುವ ಮೂಲಕ ಮಕ್ಕಳು ಮತ್ತು ಯುವ ಪೀಳಿಗೆಗೆ ಕುವೆಂಪು ಅವರ ವಿಚಾರಧಾರೆಗಳನ್ನು ತಿಳಿಸುವ ಅಗತ್ಯವಿದೆ. ಕುವೆಂಪು ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಅಡೆತಡೆಗಳನ್ನು ಎದುರಿಸಿ ಶಿಕ್ಷಣ ಪಡೆದರು. ಮೈಸೂರಿನಲ್ಲಿ ನೆಲೆ ನಿಂತು ಎಲ್ಲಾ ಬಗೆಯ ಸಾಹಿತ್ಯವನ್ನು ಪರಿಚಯಿಸಿದ ಮಹಾನ್ ಪುರುಷ ಎಂದು ಬಣ್ಣಿಸಿದರು.

ಈ ಸಂದರ್ಭದಲ್ಲಿ ಸುಯೋಗ ಆಸ್ಪತ್ರೆಯ ಮುಖ್ಯಸ್ಥ ಡಾ. ಎಸ್.ಪಿ.ಯೋಗಣ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಇತ್ತೀಚೆಗೆ ನಿಧನರಾದ ಮಾಜಿ ಪ್ರಧಾನಿ ಡಾ. ಮನಮೋಹನ್‌ಸಿಂಗ್, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕುವೆಂಪನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಸೆನೆಟ್ ಮಾಜಿ ಸದಸ್ಯ ಡಾ. ಈ.ಸಿ.ನಿಂಗರಾಜಗೌಡ ಮಾತನಾಡಿ, ಕುವೆಂಪು ಅವರು ವಿಶ್ವಮಾನವ ಸಂದೇಶವನ್ನು ಸಾರಿದ ಮಹಾನ್ ನಾಯಕ. ಜಾತಿ, ಮತ ತೊಡೆದು ಹಾಕುವವರೆಗೂ ಸಮಾಜದಲ್ಲಿ ಪರಿವರ್ತನೆ ಅಸಾಧ್ಯ ಎಂಬ ಸಂದೇಶ ಸಾರಿದರು ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮುಖಂಡರಾದ ಕುವೆಂಪು ನಗರದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಾ. ಎಲ್.ದೇವೇಗೌಡ, ಕಾರ್ಯದರ್ಶಿ ಚರಣ್ ಶಿವರಾಜ್, ಖಜಾಂಚಿ ಟಿ.ಕೃಷ್ಣಕುಮಾರ್, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಮುಖಂಡರಾದ ಗುಣಶೇಖರ, ಮಧುರಾಜ್, ಪ್ರೊ ಗಿರಿಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಔಟ್ ಆಫ್ ಸಿಲಬಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮ್ಯಾಕ್ಸ್ (ಕ): ಬೆ.9ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12ಕ್ಕೆ, ಸಂ.5.10ಕ್ಕೆ, ರಾ.7.40ಕ್ಕೆ, ಯುಐ (2024) (ಕ): ಮ.2.30ಕ್ಕೆ, ಬರೋಜ್(3ಡಿ) (ಮ): ರಾ.10.10ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9.40ಕ್ಕೆ, ಸಂ.4.25ಕ್ಕೆ, ಪುಷ್ಪಾ 2 (ಕ): ಮ.12.30ಕ್ಕೆ, ಬೇಬಿ ಜಾನ್ (ಹಿಂ): ರಾ.7.10ಕ್ಕೆ, ಮಾರ್ಕೋ (ಮ): ರಾ.10.30ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.50ಕ್ಕೆ, ಬೇಬಿ ಜಾನ್ (ಹಿಂ): ಮ.12.55ಕ್ಕೆ, ಸಂ.4.15ಕ್ಕೆ, ಯುಐ (2024) (ಕ): ರಾ.7.35ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.15ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣ
ಸಂತ್ರಸ್ತನ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ಘೋಷಿಸಿದ ಸಚಿವ ಈಶ್ವರ ಖಂಡ್ರೆ

ಬೀದರ್, ಡಿ.29– ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರು ವಿರುದ್ಧ ಗಂಭೀರ ಆರೋಪಗಳನ್ನು ಮಾಡಿ ಬೀದರ್‌ನ ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತನ ನಿವಾಸಕ್ಕೆ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭೇಟಿ ನೀಡಿ, ಮೃತನ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ.

ಕುಟುಂಬ ಸದಸ್ಯರೊಂದಿಗೆ ಮಾತುಕತೆ ನಡೆಸಿದ ಸಚಿವರು, ಖಂಡ್ರೆ ಸಾಂತ್ವನ ಹೇಳಿ ಸಾವಿಗೆ ಕಾರಣರಾದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಸರ್ಕಾರವು ನ್ಯಾಯದ ಪರವಾಗಿದೆ. ಆರೋಪಿಗಳಿಗೆ ತಕ್ಕ ಶಿಕ್ಷೆಯಾಗುತ್ತದೆ. ಸರ್ಕಾರ ನಿಮ್ಮೊಂದಿಗಿದೆ ಎಂದು ಭರವಸೆ ನೀಡಿದರು. ವೈಯಕ್ತಿಕ ಹಾಗೂ ಸರ್ಕಾರದಿಂದ ಜಂಟಿಯಾಗಿ 10 ಲಕ್ಷ ರೂ. ಪರಿಹಾರ ನೀಡುವುದಾಗಿ ತಿಳಿಸಿದರು. ಅಲ್ಲದೆ, ಮೃತನ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ಕೊಡಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸುವುದಾಗಿ ಹೇಳಿದರು.

ಪೊಲೀಸರು ಪ್ರಕರಣ ದಾಖಲಿಸಲು ನಿರಾಕರಿಸಿದ್ದಾರೆ ಎಂದು ನನಗೆ ದೂರು ನೀಡಿದ ಕುಟುಂಬ ಸದಸ್ಯರೊಂದಿಗೆ ನಾನು ಮಾತನಾಡಿದ್ದೇನೆ. ನಾನು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಕೆಲವು ಪೊಲೀಸರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಸಚಿನ್ ಆತ್ಮಹತ್ಯೆ ಪ್ರಕರಣವನ್ನು ಸರ್ಕಾರಿ ರೈಲ್ವೆ ಪೊಲೀಸರು (ಜಿಆರ್‌ಪಿ) ತನಿಖೆ ನಡೆಸುತ್ತಿದ್ದಾರೆ ಮತ್ತು ತನಿಖೆಯನ್ನು ಅಪರಾಧ ತನಿಖಾ ಇಲಾಖೆಗೆ (ಸಿಐಡಿ) ಹಸ್ತಾಂತರಿಸುವ ಬಗ್ಗೆಯೂ ಸರ್ಕಾರ ಪರಿಗಣಿಸಲಿದೆ ಎಂದು ಹೇಳಿದರು.

ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಈ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು. ದುಃಖದಲ್ಲಿರುವ ಕುಟುಂಬಸ್ಥರಿಗೆ ಧೈರ್ಯ, ಸಾಂತ್ವನ ಹೇಳುವ ಅಗತ್ಯವಿದೆ. ನಾವು ಅವರೊಂದಿಗೆ ಇದ್ದೇವೆ ಎಂದರು.

ಮೈಸೂರು ಅಂತಾರಾಷ್ಟ್ರೀಯ ಫಿಲಂ ಫೆಸ್ಟ್‌ಗೆ ಚಾಲನೆ

ಮೈಸೂರು, ಡಿ.29(ಎಂಟಿವೈ)– ಮೈಸೂರಿನ ಜೆ.ಕೆ.ಮೈದಾನದಲ್ಲಿ ಮೇಕ್ ಸೊಸೈಟಿ ಸ್ಮೈಲ್ ಫೌಂಡೇಷನ್ ಸಂಸ್ಥೆ '4ನೇ ಮೈಸೂರು ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್–2024' ಅಂಗವಾಗಿ ಭಾನುವಾರ ಆಯೋಜಿಸಿದ್ದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ಗಮನ ಸೆಳೆದರು.



ಮೈಸೂರಿನ ಜೆ.ಕೆ.ಮೈದಾನದಲ್ಲಿ ಮೇಕ್ ಸೊಸೈಟಿ ಸ್ಮೈಲ್ ಫೌಂಡೇಷನ್ ಸಂಸ್ಥೆ ಭಾನುವಾರ ಆಯೋಜಿಸಿದ್ದ '4ನೇ ಮೈಸೂರು ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್–2024' ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಜೆ.ಕೆ.ಮೈದಾನದಲ್ಲಿ ಬೆಳಗ್ಗೆ ನಡೆದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಅಂತರರಾಷ್ಟ್ರೀಯ ಫಿಲಂ ಫೆಸ್ಟಿವಲ್‌ನಂತಹ ಕಾರ್ಯಕ್ರಮಗಳು ಹೆಚ್ಚಾಗಿ ಆಯೋಜಿಸಿದರೆ, ಮೈಸೂರಲ್ಲಿರುವ ಉದಯೋನ್ಮುಖ ಪ್ರತಿಭೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಲ್ಲದೆ, ಅವಕಾಶ ಸಿಗದೆ ತೆರೆಮರೆಯಲ್ಲಿ ಸರಿದಿರುವ ಪ್ರತಿಭಾನ್ವಿತರನ್ನು ಗುರುತಿಸಿ, ಪ್ರೋತ್ಸಾಹಿಸಲು ವೇದಿಕೆ ಸೃಷ್ಟಿಸಿದಂತಾಗುತ್ತದೆ ಎಂದರು.


ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಸಿನಿ ಸಂತೆಯಲ್ಲಿ ಗಾಯನ ಸ್ಪರ್ಧೆ, ಮಕ್ಕಳಿಗೆ ವೇಷಭೂಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ನೃತ್ಯ ಸೇರಿದಂತೆ ಇನ್ನಿತರ ಸ್ಪರ್ಧೆಗಳು ನಡೆದವು.

ಕಾರ್ಯಕ್ರಮದಲ್ಲಿ ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಸಂಪರ್ಕಾಧಿಕಾರಿ ಶಂಕರ್ ಎಸ್‌ಎನ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಉದ್ಯಮಿ ಗಗನ್ ದೀಪ್, ಫಿಲ್ಮ್ ಫೆಸ್ಟಿವಲ್ ಆಯೋಜಕರಾದ ರಂಜಿತಾ ಸುಬ್ರಹ್ಮಣ್ಯ, ಸಿನಿ ಸಂತೆ ನಿರ್ದೇಶಕಿ ಸಂಧ್ಯಾರಾಣಿ, ಐಶ್ವರ್ಯ ಜಿ ಪ್ರಸಾದ್, ವಿಕ್ರಮ್ ಅಯ್ಯಂಗಾರ್, ಹರ್ಷ, ರೂಪ, ಬಿಜೆಪಿ ಮಹಿಳಾ ಮೋರ್ಚಾ ನಗರ ಉಪಾಧ್ಯಕ್ಷೆ ಹೇಮ ನಂದೀಶ್, ವೈದ್ಯೆ ರೇಖಾ ಅರುಣ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹುಬ್ಬಳ್ಳಿ ಸಿಲಿಂಡರ್ ಸ್ಫೋಟ: ಮತ್ತಿಬ್ಬರು ಮಾಲಾಧಾರಿಗಳು ಸಾವು, ಮೃತರ ಸಂಖ್ಯೆ 6ಕ್ಕೆ ಏರಿಕೆ

ಹುಬ್ಬಳ್ಳಿ, ಡಿ.29– ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ತೀವ್ರವಾಗಿ ಗಾಯಗೊಂಡು ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಾಗಿದ್ದ ಮತ್ತಿಬ್ಬರು ಅಯ್ಯಪ್ಪ ಮಾಲಾಧಾರಿಗಳು ಮೃತಪಟ್ಟಿದ್ದಾರೆ. ಶಂಕರ್ ಚವ್ಹಾಣ್ ಮತ್ತು ಮಂಜುನಾಥ ವಾಗ್ಮೋಡೆ ಮೃತ ಅಯ್ಯಪ್ಪ ಮಾಲಾಧಾರಿಗಳಾಗಿದ್ದು, ಈ ಮೂಲಕ ಮೃತರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ. ಮೂವರಿಗೆ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ಹುಬ್ಬಳ್ಳಿಯ ಉಣಕಲ್ ನಿವಾಸಿಯಾಗಿದ್ದ ಶಂಕರ್ ಚವ್ಹಾಣ್, ಅವರು ಇದೇ ಮೊದಲ ಬಾರಿ ಅಯ್ಯಪ್ಪನ ಮಾಲೆ ಧರಿಸಿದ್ದರು. ಹುಬ್ಬಳ್ಳಿಯ ಸಾಯಿನಗರದ ಈಶ್ವರ ದೇವಸ್ಥಾನದಲ್ಲಿ ಡಿ.22ರಂದು ಸಂಭವಿಸಿದ್ದ ಸಿಲಿಂಡರ್ ಸ್ಫೋಟದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಕಳೆದ ಏಳು ದಿನಗಳಿಂದ ಕಿಮ್ಸ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೆ ನಿನ್ನೆ ಶನಿವಾರ ಮಧ್ಯರಾತ್ರಿ ಕೊನೆಯುಸಿರೆಳೆದಿದ್ದಾರೆ. ಸಾಯಿನಗರದ ಅಚ್ಚವ್ವಳ ಕಾಲೋನಿಯಲ್ಲಿ ಕಳೆದ ಭಾನುವಾರ ರಾತ್ರಿ ಸಂಭವಿಸಿದ್ದ ಸಿಲಿಂಡರ್ ಸ್ಫೋಟದಲ್ಲಿ ಒಟ್ಟು 9 ಮಂದಿ ಅಯ್ಯಪ್ಪ ಮಾಲಾಧಾರಿಗಳು ಗಾಯಗೊಂಡಿದ್ದರು.

ದಿನದರ್ಶಿಕೆ ಬಿಡುಗಡೆ...



ಮೈಸೂರಿನ ಶ್ರೀ ರಾಮಾನುಜ ಅಭ್ಯುದಯ ಸಹಕಾರ ಸಂಘದ ಆವರಣದಲ್ಲಿ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಬಿಡುಗಡೆಗೊಳಿಸಿದರು. ಈ ವೇಳೆ ಇಳೈ ಆಳ್ವಾರ್ ಸ್ವಾಮೀಜಿ, ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶ್ರೀ ರಾಮಾನುಜ ಸಹಕಾರ ಸಂಘದ ಅಧ್ಯಕ್ಷ ಎಚ್.ಕೆ.ರಾಜಗೋಪಾಲ್, ಉಪಾಧ್ಯಕ್ಷ ಹೆಚ್.ವಿ.ಎಲ್.ಎಂ ಆಚಾರ್, ನಿರ್ದೇಶಕರಾದ ಆರ್.ರಾಮಸ್ವಾಮಿ, ಪುಟ್ಟಸ್ವಾಮಿ, ಕೆ.ಆರ್.ಯೋಗನರಸಿಂಹನ್, ಟಿ.ಎಸ್.ಅರುಣ್, ಕೇಶವಮೂರ್ತಿ, ಬಿ.ಜಿ.ಶ್ರೀನಿವಾಸ್ ಪ್ರಸಾದ್, ಯತಿರಾಜ್ ಸಂಪತ್ ಕುಮಾರ್, ಆಂಡಾಳ್, ಅನಂತ್ ಕೃಷ್ಣ, ಅನುರಾಧ, ಕಾರ್ಯದರ್ಶಿ ಕೆ.ಎಸ್.ಮಹಾಲಕ್ಷ್ಮಿ ಮತ್ತಿತರರಿದ್ದರು.

ಬಿಜೆಪಿ ಶಾಸಕರು, ಮುಖಂಡರನ್ನು ಗುರಿಯಾಗಿಸಿರುವ ದಾಳಿ ಬಗ್ಗೆ ಸಿಬಿಐ ತನಿಖೆ ನಡೆಯಲಿ: ಬಿ.ವೈ.ವಿಜಯೇಂದ್ರ

ಬೆಂಗಳೂರು, ಡಿ.29– ಬಿಜೆಪಿ ಶಾಸಕರನ್ನು ಹಾಗೂ ಮುಖಂಡರನ್ನು ಗುರಿಯಾಗಿಸಿ ನಡೆಯುತ್ತಿರುವ ಹಲ್ಲೆಗಳು ಹಾಗೂ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರ್ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.



ಈ ಕುರಿತು ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಸಚಿವ ಪ್ರಿಯಾಂಕ್ ಖರ್ಗೆ ಅವರ ಬಲಗೈ ಬಂಟ ರಾಜುವಿನ ಕಿರುಕುಳದಿಂದ ಆತ್ಮಹತ್ಯೆಗೀಡಾದ ಬೀದರ್‌ನ ಗುತ್ತಿಗೆದಾರ ಸಚಿನ್ ಬರೆದಿರುವ ಡೆತ್‌ನೋಟ್‌ನಲ್ಲಿ ನಮ್ಮ ಪಕ್ಷದ ಶಾಸಕರಾದ ಬಸವರಾಜ್ ಮತ್ತಿಮಡು, ಬಿಜೆಪಿ ನಾಯಕರಾದ ಚಂದು ಪಾಟೀಲ್, ಮಣಿಕಂಠ ರಾಥೋಡ್ ಹಾಗೂ ಆಂದೋಲ ಸ್ವಾಮೀಜಿಯವರನ್ನು ಹತ್ಯೆ ಮಾಡಲು ಪ್ರಿಯಾಂಕ್ ಅವರ ಇನ್ನೊಬ್ಬ ಆಪ್ತ ರಾಜು ಕಪನೂರ್‌ಗೆ ಸುಪಾರಿ ನೀಡಿದ್ದಾರೆ ಎನ್ನುವುದು ಆತಂಕಕಾರಿ ಹಾಗೂ ಗಂಭೀರ ವಿಚಾರ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರ, ವಿರೋಧ ಪಕ್ಷದ ಶಾಸಕರನ್ನು ಗುರಿಯಾಗಿಸಿಕೊಂಡು ಇತ್ತೀಚೆಗೆ ರಾಜ್ಯದಲ್ಲಿ ನಡೆದಿರುವ ಘಟನೆಗಳ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಅಂಬೇಡ್ಕರ್ ಅವಮಾನಿಸುವ ಹೇಳಿಕೆ ನಿಲ್ಲದಿದ್ದರೆ ಪ್ರತ್ಯೇಕತೆ ಕೂಗು ಏಳಬಹುದು

ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಕೆ

ಮೈಸೂರು, ಡಿ.29(ಎಂಟಿವೈ)– ದೇಶದಲ್ಲಿ 40 ಕೋಟಿಗೂ ಹೆಚ್ಚಿನ ಜನ ಡಾ.ಅಂಬೇಡ್ಕರ್ ಅವರ ಅನುಯಾಯಿಗಳಿದ್ದು, ಡಾ.ಅಂಬೇಡ್ಕರ್ ಅವರಿಗೆ ಅಪಮಾನ ಮಾಡುವ ಹೇಳಿಕೆ ನಿಲ್ಲಿಸದಿದ್ದರೆ ಪ್ರತ್ಯೇಕತೆ ಕೂಗು ಏಳಬಹುದು ಎಂದು ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ಅಂಬೇಡ್ಕರ್ ಸೇನೆ ಆಯೋಜಿಸಿದ್ದ ಬಿ.ಆರ್.ಅಂಬೇಡ್ಕರ್ 68ನೇ ಪರಿನಿಬ್ಬಾಣ ದಿನಾಚರಣೆ, ವಿಚಾರ ಸಂಕಿರಣ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಬಡತನ, ತಾರತಮ್ಯ ನೀತಿ, ಅಸ್ಪೃಶ್ಯತೆ ಹೋಗಲಾಡಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ದೇಶದಲ್ಲಿ ಸಮಾನತೆ ನೆಲೆಸಲು ಡಾ.ಅಂಬೇಡ್ಕರ್ ಅವರ ಸಂವಿಧಾನ ಕಾರಣ. ಆದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುವ ಮೂಲಕ ದೇಶ ಒಡೆಯುವ ಸಂಚು ನಡೆಸಿದ್ದಾರೆ. ಅಂಬೇಡ್ಕರ್ ವಿರೋಧಿ ಧೋರಣೆಯುಳ್ಳವರು ಆಡಳಿತಗಾರರಾಗಿ ಮುಂದುವರಿದರೆ ಪ್ರತ್ಯೇಕತೆ ಕೂಗು ಏಳುತ್ತದೆ ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ಅಂಬೇಡ್ಕರ್ ಸೇನೆ ಆಯೋಜಿಸಿದ್ದ ಬಿ.ಆರ್.ಅಂಬೇಡ್ಕರ್ 68ನೇ ಪರಿನಿಬ್ಬಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಅಂಬೇಡ್ಕರ್ ನೀಡಿದ ಕೊಡುಗೆ ಅಪಾರ. ಅವರು ಮೇಲ್ಜಾತಿಯಲ್ಲಿ ಹುಟ್ಟಿದ್ದರೆ ಪ್ರಧಾನಿಯಾಗುತ್ತಿದ್ದರು. ಆದರೆ ರಾಜಕಾರಣಿಗಳು, ಅಧಿಕಾರಿಗಳು ಅವರಿಗೆ ದ್ರೋಹ ಬಗೆದಿದ್ದಾರೆ. ಬಹುಜನರು ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ದೇಶದ ಅಭಿವೃದ್ಧಿಗೆ ಪ್ರಯತ್ನಿಸುವವರಿಗೆ ಬೆಂಬಲ ನೀಡಬೇಕು. ನಮ್ಮನ್ನು ತುಳಿಯುವವರ ವಿರುದ್ಧ ಯುದ್ಧಕ್ಕೆ ಸಿದ್ಧರಾಗಬೇಕು. ಕೇಂದ್ರ ಸಚಿವ ಅಮಿತ್ ಶಾ ಅವರಿಗೆ ನೈತಿಕತೆ ಇದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ತಿ.ನರಸೀಪುರದ ನಳಂದ ಬುದ್ಧವಿಹಾರದ ಬೋಧಿರತ್ನ ಭಂತೇಜಿ ಮಾತನಾಡಿ, ಬಾಬಾಸಾಹೇಬರು ನಮ್ಮೆಲ್ಲರಿಗೂ ಬದುಕಿನ ದೃಷ್ಟಿ ನೀಡಿದ ಮಹಾನ್ ಪುರುಷರಾಗಿದ್ದಾರೆ. ಇಂದು ನಾವು ಮಾನಸಿಕ ಯುದ್ಧದ ಜಗತ್ತಿನಲ್ಲಿ ಸಿಲುಕಿದ್ದೇವೆ. ಆ ಕಾರಣದಿಂದ ಸ್ವಾಭಿಮಾನ, ಜ್ಞಾನ ಹಾಗೂ ಉನ್ನತ ಮೌಲ್ಯಗಳಿಂದ ವಿಜಯ ಸಾಧಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅಹಿಂದ ಮುಖಂಡ ಜೆ.ಚಿಕ್ಕಜವರಪ್ಪ, ಅಂಬೇಡ್ಕರ್ ಸೇನೆಯ ರಾಜ್ಯಾಧ್ಯಕ್ಷ ನಾಗೇಂದ್ರ ಬಸವಟ್ಟಿಗೆ, ಕಾಂಗ್ರೆಸ್ ಮುಖಂಡ ವಿ.ಸಿ.ಶ್ರೀನಿವಾಸಮೂರ್ತಿ, ಸಮಿತಿ ಜಿಲ್ಲಾಧ್ಯಕ್ಷ ಅಭಿಲಾಷ್ ಎಂ.ಸಿ.ಮೂಕನಹಳ್ಳಿ ಪಾಲ್ಗೊಂಡಿದ್ದರು.

ಜಮ್ಮು–ಕಾಶ್ಮೀರ: 2024ರಲ್ಲಿ ಹತ್ಯೆಯಾದ ಶೇ.60 ರಷ್ಟು ಉಗ್ರರು ಪಾಕಿಸ್ತಾನಿಗಳು: ಭಾರತೀಯ ಸೇನೆ

ಶ್ರೀನಗರ, ಡಿ.29– ಕೇಂದ್ರಾಡಳಿತ ಪ್ರದೇಶ ಜಮ್ಮು–ಕಾಶ್ಮೀರದಲ್ಲಿ 2024ರಲ್ಲಿ ಹತ್ಯೆಯಾದ ಶೇ.60 ರಷ್ಟು ಉಗ್ರರು ಪಾಕಿಸ್ತಾನಿಗಳಾಗಿದ್ದಾರೆ ಎಂದು ಭಾರತೀಯ ಸೇನಾ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.



ಗಡಿ ನಿಯಂತ್ರಣ ರೇಖೆಯಲ್ಲಿ ಉಗ್ರರ ಒಳನುಸುಳುವಿಕೆ ಯತ್ನಗಳ ಸಮಯದಲ್ಲಿ ನಡೆದ ಗುಂಡಿನ ಚಕಮಕಿ ಸೇರಿದಂತೆ ವಿವಿಧ ಎನ್‌ಕೌಂಟರ್ ಮತ್ತು ಕಾರ್ಯಾಚರಣೆಗಳಲ್ಲಿ ಜಮ್ಮು ಮತ್ತು ಕಾಶ್ಮೀರ ವಲಯ ಸೇರಿದಂತೆ ವಿವಿಧ ಕಡೆಗಳಲ್ಲಿ ಸುಮಾರು 75 ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಸುದ್ದಿಸಂಸ್ಥೆಗೆ ಅವರು ಮಾಹಿತಿ ನೀಡಿದ್ದಾರೆ.

ಭಾರತದ ಮೇಲೆ ಪ್ರಮುಖ ಗಮನ ಕೇಂದ್ರೀಕರಿಸಿರುವ ಪಾಕಿಸ್ತಾನ ವಿಶ್ವದ ಬಹುತೇಕ ಎಲ್ಲಾ ಭಾಗಗಳಿಗೆ ಉಗ್ರರನ್ನು ರಫ್ತು ಮಾಡುವ ದೊಡ್ಡ ಕೇಂದ್ರಗಳಲ್ಲಿ ಒಂದಾಗಿದ್ದು, ಕಳೆದ ವರ್ಷದಿಂದ ಜಮ್ಮು ಪ್ರದೇಶದಲ್ಲಿ ಭಯೋತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸಿದೆ.

ಆದರೆ, ರಜೌರಿ, ಪೂಂಚ್, ದೋಡಾ, ಕಿಶ್ತ್ವಾರ್, ಕಥುವಾ ಮತ್ತು ರಿಯಾಸಿ ಜಿಲ್ಲೆಗಳು ಸೇರಿದಂತೆ ಜಮ್ಮು ಪ್ರದೇಶದ ಈ ಪ್ರದೇಶದಲ್ಲಿ ಹೆಚ್ಚುವರಿ ನಿಯೋಜನೆ ಪಡೆಗಳನ್ನು ನಿಯೋಜಿಸುವ ಮೂಲಕ ಉಗ್ರರ ಚಟುವಟಿಕೆಗಳನ್ನು ನಿಯಂತ್ರಿಸಲಾಗಿದೆ. ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕ ಗುಂಪುಗಳಲ್ಲಿ ಸ್ಥಳೀಯರ ನೇಮಕಾತಿ ಕೂಡ ತುಂಬಾ ಕಡಿಮೆಯಾಗಿದೆ. ಈ ವರ್ಷ ಕೇವಲ ನಾಲ್ಕು ಸ್ಥಳೀಯರು ಮಾತ್ರ ಈ ಗುಂಪುಗಳಿಗೆ ಸೇರಿದ್ದಾರೆ ಎಂದು ಅವರು ಹೇಳಿದ್ದಾರೆ.

ಯೇಸುಕ್ರಿಸ್ತನ ಜನನದ ಪವಿತ್ರ ಜ್ಯೂಬಿಲಿ–2025ರ ಸಂಭ್ರಮ

ಮೈಸೂರು, ಡಿ.29(ಎಸ್‌ಪಿಎನ್)– ಯೇಸುಕ್ರಿಸ್ತನ ಜನನದ ಸವಿನೆನಪಿಗಾಗಿ ಕ್ಯಾಥೊಲಿಕ್ ಚರ್ಚ್‌ಗಳಲ್ಲಿ ಪ್ರತಿ 25 ವರ್ಷಗಳಿಗೊಮ್ಮೆ ಆಚರಿಸುವ 'ಪವಿತ್ರ ಜ್ಯೂಬಿಲಿ 2025ಕ್ಕೆ ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್‌ನಲ್ಲಿ ಭಾನುವಾರ ಧಾರ್ಮಿಕ ವಿಧಿ–ವಿಧಾನ ಹಾಗೂ ಭಕ್ತಿ–ಭಾವದೊಂದಿಗೆ ನೆರವೇರಿತು.

ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಹಾಗೂ ನಿವೃತ್ತ ಧರ್ಮಾಧ್ಯಕ್ಷರೂ ಆದ ಡಾ.ಬರ್ನಾರ್ಡ್ ಮೊರಾಸ್ ಪವಿತ್ರ ಜ್ಯೂಬಿಲಿ 2025ರ ಪವಿತ್ರ ಸಂದೇಶ ಬೈಬಲ್‌ನಲ್ಲಿ ಉಲ್ಲೇಖವಾಗಿದೆ ಎಂದರಲ್ಲದೆ, ಕ್ಯಾಥೋಲಿಕ್ ಚರ್ಚ್‌ನ ಇತಿಹಾಸದಲ್ಲಿ ಕ್ರಿ.ಶ.1300 ರಿಂದಲೂ ಪ್ರತಿ 25 ವರ್ಷಗಳಿಗೊಮ್ಮೆ ಜ್ಯೂಬಿಲಿಯನ್ನು ಯೇಸುಕ್ರಿಸ್ತರ ಜನನದ ನೆನಪಿಗಾಗಿ ಆಚರಿಸುವ ಸತ್ ಸಂಪ್ರದಾಯ ಆಚರಣೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಚರ್ಚ್‌ನಲ್ಲೂ ಯೇಸು ಕ್ರಿಸ್ತರಿಗೆ ವಿಶೇಷ ಪೂಜೆ ನೆರವೇರಿಸಲಾಗಿದೆ ಎಂದು ಯೇಸುಕ್ರಿಸ್ತರ ಅನುಯಾಯಿಗಳಿಗೆ ಧರ್ಮ ಸಂದೇಶ ನೀಡಿದರು.

ಡಿ.24ರಂದೇ ರೋಮ್‌ನಗರದಲ್ಲಿ ಸೇಂಟ್ ಪೀಟರ್ಸ್ ಬೆಸಿಲಿಕಾದ ಪವಿತ್ರ ಬಾಗಿಲನ್ನು ತೆರೆಯುವ ಮೂಲಕ ಪೋಪ್ ಫ್ರಾನ್ಸಿಸ್ ಅವರು 2025ರ ಜ್ಯೂಬಿಲಿ ವರ್ಷಕ್ಕೆ ಚಾಲನೆ ನೀಡಿದ್ದರು. ಪೋಪ್ ಫ್ರಾನ್ಸಿಸ್ ಅವರು ಜ್ಯೂಬಿಲಿ 2025ಕ್ಕೆ 'ಭರವಸೆಯ ಯಾತ್ರಿಕರು' ಧ್ಯೇಯವಾಕ್ಯ ಘೋಷಿಸಿ, ಯೇಸುಕ್ರಿಸ್ತನಿಗೆ ವಿಶೇಷ ಬಲಿಪೂಜೆ ನೆರವೇರಿಸಿದ್ದಾರೆ. ಯೇಸುಕ್ರಿಸ್ತರ ಸಮಸ್ತ ಯಾತ್ರಿಕರಿಗೂ ಮಂಗಳವನ್ನುಂಟು ಮಾಡಲಿ ಎಂದು ಧರ್ಮ ಸಂದೇಶ ನೀಡಿದರು. ಈ ವೇಳೆ ಯೇಸುಕ್ರಿಸ್ತನ ಕುರಿತಾದ ಅನೇಕ ಭಜನ್‌ಗಳನ್ನು ನುರಿತ ಗಾಯಕರ ತಂಡ ಮನೋಜ್ಞವಾಗಿ ಹಾಡಿ, ಭಕ್ತರ ಮನ ಸೆಳೆದರು.

ಇದಕ್ಕೂ ಮುನ್ನ ಬನ್ನಿಮಂಟಪದ ಬೆಂಗಳೂರು– ಮೈಸೂರು ರಸ್ತೆಯ ದೀನರ ಮಾತೆಯ ಆರಾಧನಾಲಯದಲ್ಲಿ ಜ್ಯುಬಿಲಿ ಆಚರಣೆಗೆಂದೇ ಧರ್ಮಕ್ಷೇತ್ರದಿಂದ ಮರದಲ್ಲಿ ತಯಾರಿಸಿದ 8 ಅಡಿ ಎತ್ತರದ ವಿಶೇಷ ಶಿಲುಬೆಯನ್ನು ಸೇಂಟ್ ಫಿಲೋಮಿನಾ ಚರ್ಚ್‌ವರೆಗೆ ಮೆರವಣಿಗೆಯಲ್ಲಿ ಭಕ್ತಿ–ಭಾವದಿಂದ ತರಲಾಯಿತು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಕ್ರೈಸ್ತ ಸಮುದಾಯದ ನೂರಾರು ಭಕ್ತರು, ಯೇಸುಕ್ರಿಸ್ತರ ಕುರಿತಾದ ಭಕ್ತಿಗೀತೆಗಳನ್ನು ಹಾಡುತ್ತಾ 'ಭರವಸೆಯ ಯಾತ್ರಿಕರು ನಾವು' ಎಂಬ ಧ್ಯೇಯವಾಕ್ಯದೊಂದಿಗೆ ಹೆಜ್ಜೆ ಹಾಕಿದರು.



ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ಅವರು 8 ಅಡಿ ಎತ್ತರದ ಯೇಸುಕ್ರಿಸ್ತನ ಶಿಲುಬೆಗೆ ವಿಶೇಷ ಪೂಜೆ ನೆರವೇರಿಸಿ, ಮೆರವಣಿಗೆಗೆ ಚಾಲನೆ ನೀಡಿದರು.

ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ಅವರು 8 ಅಡಿ ಎತ್ತರದ ಯೇಸುಕ್ರಿಸ್ತನ ಶಿಲುಬೆಗೆ ವಿಶೇಷ ಪೂಜೆ ನೆರವೇರಿಸಿ, ಮೆರವಣಿಗೆಗೆ ಚಾಲನೆ ನೀಡಿ ದರು. ನಂತರ ಜಿಲ್ಲೆ ಬೇರೆ ಚರ್ಚ್‌ಗಳ ಪಾದ್ರಿಗಳು, ಚರ್ಚ್‌ನ ಕ್ಯಾಥೋಲಿಕ್ ಸಮುದಾಯದ ಯುವಜನರು ಕ್ರೈಸ್ತ ಸಮುದಾಯದ ಧಾರ್ಮಿಕ ವಸ್ತ್ರ ಧರಿಸಿ ಧೂಪ, ದೀವಟಿಗೆಗಳನ್ನು ಹಿಡಿದು ಮೆರವಣಿಗೆಯಲ್ಲಿ ಸಾಗಿದರು. ಯೇಸುಕ್ರಿಸ್ತನ ಜೀವನವನ್ನು ಸಾರುವ ದೃಶ್ಯಗಳನ್ನು ಮರುಸೃಷ್ಟಿಸಿದ ಪ್ರಸಂಗಗಳು ಮೆರವಣಿಗೆಯಲ್ಲಿ ಸಾರ್ವಜನಿಕರ ಗಮನ ಸೆಳೆದವು.

ಗಮನ ಸೆಳೆದ ಸ್ತಬ್ಧಚಿತ್ರ: ಮೆರವಣಿಗೆಯಲ್ಲಿ ಪ್ರೀತಿಯನ್ನು ಹರಡಲು ಪ್ರೀತಿಯ ಜನ್ಮವನ್ನು ಸ್ಮರಿಸಿಕೊಂಡ, ಅಸ್ಮಿತೆಯ ಸಂತ ಫ್ರಾನ್ಸಿಸ್ ಸಂದೇಶ ಸಾರುವ ಜಗತ್ತಿನ ಪ್ರಪ್ರಥಮ ಗೋದಲಿ ಸ್ತಬ್ಧಚಿತ್ರ, ಹವಾಮಾನ ಬದಲಾವಣೆ ಮತ್ತು ಯುದ್ಧಗಳು ಮುಕ್ತವಾಗಿ ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಉತ್ತೇಜಿಸುವ ಹಾಗೂ ಪೋಪ್‌ನ ಧ್ಯೇಯವಾಕ್ಯ ಬಿಂಬಿಸುವ ಸ್ತಬ್ಧಚಿತ್ರ ಹಾಗೂ ಪ್ರಾರ್ಥನೆ, ತಪಸ್ಸು, ಕ್ಷಮೆ ಮತ್ತು ಸಾಮರಸ್ಯ ಧ್ಯೇಯವಾಕ್ಯ ದೊಂದಿಗೆ 8 ಅಡಿ ಎತ್ತರದ ಯೇಸುಕ್ರಿಸ್ತನ ಶಿಲುಬೆ ಮೆರವಣಿಗೆಯಲ್ಲಿ ಜನರ ಗಮನ ಸೆಳೆದವು.

ಸೇಂಟ್ ಫಿಲೋಮಿನಾ ಚರ್ಚ್ ಆವರಣಕ್ಕೆ ತರಲಾದ ಶಿಲುಬೆಗೆ ಮೊರಾಸ್ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿತು. ಬಳಿಕ ಬಲಿಪೂಜೆಗಳು ಆರಂಭವಾದವು. ಆವರಣದಲ್ಲಿ ಹಾಕಲಾಗಿದ್ದ ಆಸನಗಳು ಭರ್ತಿಯಾಗಿದ್ದವು. ಡಿಜಿಟಲ್ ಪರದೆಗಳ ಮೂಲಕ ಪೂಜಾ ಕಾರ್ಯಕ್ರಮಗಳನ್ನು ಚರ್ಚ್ ಹೊರಭಾಗದ ಗೇಟ್, ಕಾಂಪೌಂಡ್ ಬಳಿ ನಿಂತು ಕಣ್ತುಂಬಿಕೊಂಡ ಪ್ರಸಂಗ ಪವಿತ್ರ ಜ್ಯೂಬಿಲಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.


ವರ್ಷಪೂರ್ತಿ ಆಚರಣೆ: ಯೇಸುಕ್ರಿಸ್ತರ ತ್ಯಾಗದ ಸಂಕೇತವೂ ಭರವಸೆಯ ಸಂಕೇತವೂ ಆದ ವಿಶೇಷ ಶಿಲುಬೆಯನ್ನು ಧರ್ಮಕ್ಷೇತ್ರದಿಂದ ಎಲ್ಲ ಚರ್ಚ್‌ಗಳಿಲ್ಲೂ ಪ್ರದರ್ಶನಗೊಳ್ಳಲಿದೆ. ಈ ವರ್ಷ ಪೂರ್ತಿ ಈ ಕಾರ್ಯಕ್ರಮ ನಡೆಯಲಿದ್ದು, ಎಲ್ಲಡೆ ಜ್ಯುಬಿಲಿ 2025ರ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ಆಚರಣೆಗೆ ಸಾಕ್ಷಿಯಾಗಲಿದೆ. ಈ ವೇಳೆ ಸೇಂಟ್ ಫಿಲೋಮಿನಾ ಚರ್ಚ್‌ನ ಪ್ರಧಾನ ಗುರು ಸ್ಟ್ಯಾನಿ ಅಲ್ಮೆಡಾ, ಮೈಸೂರು ಧರ್ಮಕ್ಷೇತ್ರದ ಪಾಕಿಯ ರಾಜ್, ಕೋಶಾಧಿಕಾರಿ ಸೆಬಾಸ್ಟಿನ್ ಹಾಗೂ ಕ್ಯಾಥೋಲಿಕ್ ಸೆಂಟರ್‌ನ ಫಾ.ಜೋಸೆಫ್ ಮರಿ, ಫಾ. ಪೀಟರ್ ಸೇರಿದಂತೆ ಕ್ರೈಸ್ತ ಧರ್ಮಗಳು ಪ್ರವಿತ್ರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ಪವಿತ್ರ ಜ್ಯೂಬಿಲಿ ಯೇಸುಕ್ರಿಸ್ತನ ಶಿಲುಬೆ ಮೆರವಣಿಗೆಯಲ್ಲಿ ಸಾರ್ವಜನಿಕರ ಗಮನ ಸೆಳೆಯಿತು

ಭಾರತ ಅದೃಷ್ಟಶಾಲಿ ಅಲ್ಲ, ಶತ್ರುಗಳ ಬಗ್ಗೆ ಎಚ್ಚರದಿಂದಿರಿ: ರಾಜನಾಥ್ ಸಿಂಗ್ ಕರೆ

ಸೈನಿಕರಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕರೆ



ಮಹೂ (ಮಧ್ಯಪ್ರದೇಶ), ಡಿ.29– ಭದ್ರತೆಯ ವಿಚಾರದಲ್ಲಿ ಭಾರತ ಅದೃಷ್ಟಶಾಲಿ ದೇಶ ಅಲ್ಲ. ಆಂತರಿಕ ಮತ್ತು ಬಾಹ್ಯ ವಿರೋಧಿಗಳ ಮೇಲೆ ಸೈನಿಕರು ಯಾವಾಗಲೂ ಹದ್ದಿನ ಕಣ್ಣಿಡಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದರು.

ಇಂದೋರ್‌ನಲ್ಲಿರುವ ಎರಡು ದಶಕಗಳಿಗೂ ಹಳೆಯದಾದ ಮಹೂ ಕಂಟೋನ್ಮೆಂಟ್‌ನಲ್ಲಿ ಸೇನೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಭಾರತದ ಉತ್ತರ ಮತ್ತು ಪಶ್ಚಿಮ ಗಡಿಯಲ್ಲಿ ಸವಾಲುಗಳು ಎದುರಾಗುತ್ತಲೇ ಇರುತ್ತವೆ ಎಂದು ಹೇಳಿದರು.

ಆಂತರಿಕವಾಗಿಯೂ ಸವಾಲುಗಳನ್ನು ಎದುರಿಸುತ್ತಿರುತ್ತೇವೆ. ನಮ್ಮ ಶತ್ರುಗಳು ಯಾವಾಗಲೂ ಸಕ್ರಿಯರಾಗಿರುತ್ತಾರೆ. ಹೀಗಾಗಿ ಅವರ ಚಟುವಟಿಕೆಗಳ ಮೇಲೆ ಹದ್ದಿನಕಣ್ಣಿಡಬೇಕಾಗುತ್ತದೆ ಮತ್ತು ಅವರ ವಿರುದ್ಧ ಸಕಾಲಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಭಾರತವನ್ನು ಅಭಿವೃದ್ಧಿ ಹೊಂದಿದ ಮತ್ತು ಆತ್ಮನಿರ್ಭರ ದೇಶವನ್ನಾಗಿಸುವಲ್ಲಿ ಸೇನೆಯ ಪಾತ್ರ ಮಹತ್ವದ್ದು ಎಂದು ಹೇಳಿದರು.

ಸಂದೇಶ್ ನಾಗರಾಜ್ ಭೇಟಿಯಾದ ಸುದೀಪ್



'ಮ್ಯಾಕ್ಸ್' ಚಿತ್ರದ ಯಶಸ್ವಿ ಹಿನ್ನೆಲೆಯಲ್ಲಿ ನಟ ಸುದೀಪ್ ಮೈಸೂರಿನ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿಗೆ ಪೂಜೆ ಸಲ್ಲಿಸಿದ ನಂತರ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಹಿರಿಯ ಚಿತ್ರ ನಿರ್ಮಾಪಕ, ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರನ್ನು ಭೇಟಿಯಾದರು. ಈ ವೇಳೆ ಸಂದೇಶ್ ನಾಗರಾಜ್ ಪುತ್ರರಾದ ಉದ್ಯಮಿ ಮಂಜೇಶ್, ಚಿತ್ರ ನಿರ್ಮಾಪಕ ಎನ್.ಸಂದೇಶ್, ಮೊಮ್ಮಗ ಹರ್ಷಲ್ ಸಂದೇಶ್ ಉಪಸ್ಥಿತರಿದ್ದರು.


ಶಬರಿಮಲೆ ಭಕ್ತರ ಸಂಖ್ಯೆ ಹೆಚ್ಚಳ; ಸ್ಪಾಟ್ ಬುಕ್ಕಿಂಗ್ ಕೌಂಟರ್‌ಗಳ ಸಂಖ್ಯೆ 10ಕ್ಕೆ ಏರಿಕೆ

ಶಬರಿಮಲೆ, ಡಿ.29–ಮಕರ ಜ್ಯೋತಿ ಯಾತ್ರೆಗೆ ಶಬರಿಮಲೆಗೆ ಆಗಮಿಸುವ ಯಾತ್ರಾರ್ಥಿಗಳಿಗಾಗಿ ಪಂಪಾದಲ್ಲಿ ಸ್ಪಾಟ್ ಬುಕ್ಕಿಂಗ್ ಕೌಂಟರ್‌ಗಳ ಸಂಖ್ಯೆಯನ್ನು 10ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಪ್ರಸ್ತುತ ಪಂಪಾದಲ್ಲಿ ಏಳು ಕೌಂಟರ್‌ಗಳು ಕಾರ್ಯಾಚರಿಸುತ್ತಿದ್ದು, 60 ವರ್ಷ ಮೇಲ್ಪಟ್ಟವರಿಗೆ ಪ್ರತ್ಯೇಕ ಮೂರು ಕೌಂಟರ್‌ಗಳನ್ನು ತೆರೆಯಲು ತೀರ್ಮಾನಿಸಲಾಗಿದೆ. ದೇವಸ್ವಂ ಸಚಿವ ವಿ.ಎನ್. ವಾಸವನ್ ಅಧ್ಯಕ್ಷತೆಯಲ್ಲಿ ಪತ್ತನಂತಿಟ್ಟ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಜ.12ರಿಂದ 14ರ ತನಕ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸುವ ನಿರೀಕ್ಷೆಯಲ್ಲಿ ಪೊಲೀಸರು ವಿಶೇಷ ಯೋಜನೆ ಸಿದ್ಧಪಡಿಸಿದ್ದಾರೆ ಎಲ್ಲ ಇಲಾಖೆಗಳು ಪರಸ್ಪರ ಸಹಕಾರ ಖಾತ್ರಿಪಡಿಸುವಂತೆ ಹಾಗೂ ಮಕರ ಜ್ಯೋತಿ ವ್ಯೂ ಪಾಯಿಂಟ್‌ಗಳಲ್ಲಿ ಸುರಕ್ಷತೆ ಖಚಿತಪಡಿಸುವಂತೆಯೂ ಸಭೆಯಲ್ಲಿ ಸೂಚಿಸಲಾಗಿದೆ.

ರಂಗಭೂಮಿಗೆ ಸಮಾಜದ ಸ್ವಾಸ್ಥ್ಯ ಕಾಪಾಡುವ ಶಕ್ತಿ ಇದೆ

ನಿವೃತ್ತ ಐಎಎಸ್ ಅಧಿಕಾರಿ ಕೆ.ಎಸ್.ಪ್ರಭಾಕರ್ ಅಭಿಮತ



'ನಿರಂತರ ರಂಗ ಉತ್ಸವ'ದಲ್ಲಿ ಭಾನುವಾರ ರಾಯಚೂರು ಸಮುದಾಯ ತಂಡ 'ರಕ್ತ ವಿಲಾಪ' ನಾಟಕ ಪ್ರದರ್ಶಿಸಿತು.

ಮೈಸೂರು, ಡಿ.29(ಎಸ್‌ಬಿಡಿ)– ರಂಗಭೂಮಿಗೆ ಸಮಾಜದ ಸ್ವಾಸ್ಥ್ಯ ಕಾಪಾಡುವ ಶಕ್ತಿ ಇದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಕೆ.ಎಸ್.ಪ್ರಭಾಕರ್ ಅಭಿಪ್ರಾಯಿಸಿದರು.

ಮೈಸೂರಿನ ಕಿರುರಂಗಮಂದಿರದಲ್ಲಿ ನಡೆಯುತ್ತಿರುವ ನಿರಂತರ ರಂಗ ಉತ್ಸವದಲ್ಲಿ ಭಾನುವಾರ ಭಾಗವಹಿಸಿ ಮಾತನಾಡಿದ ಅವರು, ಸಮಾಜ ಒಂದು ಚೌಕಟ್ಟು ಮಾಡಿಕೊಂಡಿದೆ. ಅದನ್ನು ಹೇಗಾದರೂ ಗಟ್ಟಿಗೊಳಿಸಿಕೊಂಡು ಬರಲಾಗುತ್ತಿದೆ. ಆದರೆ ಸಮಾಜದ ಚೌಕಟ್ಟನ್ನು ಮೀರಿ ಬದುಕುವುದು ಕಷ್ಟಸಾಧ್ಯ. ಆದರೆ ಆ ಶಕ್ತಿ ರಂಗಭೂಮಿಗಿದೆ. ಚೌಕಟ್ಟು ಮೀರಿ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ತಿಳಿಸಿದರು.

ಬದುಕು ಕಲೆಯೂ ಹೌದು, ವಿಜ್ಞಾನವೂ ಹೌದು. ಹಾಗೆಯೇ ರಂಗಭೂಮಿ ಮನುಷ್ಯನ ನಾಗರಿಕತೆ ಆರಂಭದ ಕೇಂದ್ರಬಿಂದುವೆಂದು ಹೇಳಬಹುದು. ಚಿತ್ರಕಲೆ, ಕುಣಿತ, ಹಾಡು ಇವೆಲ್ಲದರ ಕ್ರೂಢಿಕೃತ ರೂಪವಾದ ರಂಗಭೂಮಿ, ಕಲೆಯ ಆಚೆಗೆ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡಿದೆ. ಜಾಗೃತಿಗಾಗಿ, ಮಾಹಿತಿಗಾಗಿ, ಸಾಮರಸ್ಯಕ್ಕಾಗಿ, ಸಮಗ್ರತೆಗಾಗಿ ಮಾತ್ರವಲ್ಲದೆ ಮನುಷ್ಯನ ಉಳಿವಿಗಾಗಿಯೂ ರಂಗಭೂಮಿ ನೆರವಾಗಲಿದೆ. ನಿರಂತರ ತಂಡವೂ ಈ ನಿಟ್ಟಿನಲ್ಲೇ ಮುನ್ನಡೆಯುತ್ತಿದೆ. ಜನೋಪಯೋಗಿ ಕಾರ್ಯಗಳು ನಿರಂತರವಾಗಿ ನಡೆಯಲಿ ಎಂದು ಆಶಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ನಿರಂತರ ರಂಗ ಉತ್ಸವದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಪ್ರೊ.ಎನ್.ಎಸ್.ವೇಣುಗೋಪಾಲ್, ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ ಶಿವಲಿಂಗಯ್ಯ, ಡಾ.ರೇಖಾ, ನಿರಂತರದ ಸುಗುಣ, ಪ್ರಸಾದ್ ಕುಂದೂರ್, ಶ್ರೀನಿವಾಸು ಪಾಲಹಳ್ಳಿ ಮತ್ತಿತರರಿದ್ದರು.

ಇಂದು ಸಮಾರೋಪ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಿರಂತರ ಫೌಂಡೇಷನ್ ಆಯೋಜಿಸಿರುವ ಆರು ದಿನಗಳ 'ನಿರಂತರ ರಂಗ ಉತ್ಸವ'ಕ್ಕೆ ಸೋಮವಾರ ತೆರೆ ಬೀಳಲಿದೆ. ಸಂಜೆ 5.30ಕ್ಕೆ ಅಭಿನವ ವೀರಭದ್ರೇಶ್ವರ ತಂಡದ ವೀರಗಾಸೆ ಪ್ರದರ್ಶನದ ಬಳಿಕ ಸಂಜೆ 6.15ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಕವಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ನಟ, ಚಲನಚಿತ್ರ ನಟ, ರಂಗಕರ್ಮಿ ಪ್ರಕಾಶ್ ರಾಜ್ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ. ಸಂಜೆ 7ಕ್ಕೆ ಭಳಿರೇ ವಿಚಿತ್ರಮ್ ತಂಡದಿಂದ 'ದಶಾನನ ಸ್ವಪ್ನಸಿದ್ಧಿ' ಕುವೆಂಪು ವಿರಚಿತ ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಆಯ್ದ ರಂಗ ಪ್ರಯೋಗ ಇರಲಿದೆ.

ವೈಲ್ಡ್‌ಲೈಫ್ ಚಿತ್ರಕಲಾ ಪ್ರದರ್ಶನ



'ವೈಲ್ಡ್‌ಲೈಫ್ ಚಿತ್ರಕಲಾ ಪ್ರದರ್ಶನ'ದ ವೇಳೆ ಅರಣ್ಯ ಇಲಾಖೆ ಅಧಿಕಾರಿ ಮುಹಮ್ಮದ್ ಜೀಶನ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಡಿ.29(ಎಸ್‌ಬಿಡಿ)– ಮೈಸೂರಿನ ಡಿ.ಬನುಮಯ್ಯ ರಸ್ತೆಯಲ್ಲಿರುವ ವೈಜಯಂತಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ 'ವೈಲ್ಡ್‌ಲೈಫ್ ಚಿತ್ರಕಲಾ ಪ್ರದರ್ಶನ' ಏರ್ಪಡಿಸಲಾಗಿದೆ.

ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿದ ಅರಣ್ಯ ಇಲಾಖೆ ಅಧಿಕಾರಿ ಮುಹಮ್ಮದ್ ಜೀಶನ್ ಮಾತನಾಡಿ, ಕಲಾವಿದರ ಕಲ್ಪನೆಯಲ್ಲಿ ವೈವಿಧ್ಯಮಯ ಚಿತ್ರಗಳು ಮೂಡಿಬರುತ್ತವೆ. ಆದರೆ ವನ್ಯಜೀವಿಗಳ ಚಿತ್ರಗಳನ್ನು ಇಷ್ಟೊಂದು ಸುಂದರವಾಗಿ ಪಡಿಮೂಡಿಸಿರುವುದನ್ನು ನೋಡಿ ಖುಷಿ ಆಯಿತು. ಅರಣ್ಯ ಸಂಪತ್ತು ಹಾಗೂ ವನ್ಯ ಜೀವಿ ವೈವಿದ್ಯತೆಯ ಸಂರಕ್ಷಣೆ ಬಗ್ಗೆ ಕಲಾವಿದರು ಕುಂಚದ ಮೂಲಕ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಇದೇ ವೇಳೆ ಕಾಲೇಜಿನ ವಿದ್ಯಾರ್ಥಿಗಳ ಕುಂಚದಿಂದ ಮೂಡಿಬಂದ ವನ್ಯಜೀವಿಗಳ ಚಿತ್ರಗಳನ್ನು ವೀಕ್ಷಿಸಿದರು. ಲಲಿತಕಲಾ ಅಕಾಡೆಮಿಯ ಅಭಿಲಾಷ್, ಶಿಲ್ಪಕಲಾ ಅಕಾಡೆಮಿಯ ಅಕ್ಷಯ್‌ಕುಮಾರ್, ಸಂಸ್ಥೆಯ ಮುಖ್ಯಸ್ಥೆ ಶ್ರೀಮತಿ ವೈಜಯಂತಿ, ಚಿತ್ರಕಲಾ ಪ್ರದರ್ಶನದ ಮಾರ್ಗದರ್ಶಕ ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು. ಡಿ.31ರವರೆಗೆ ಚಿತ್ರಕಲಾ ಪ್ರದರ್ಶನ ಇರಲಿದೆ.

ಶಿವಮೊಗ್ಗದ ಜ್ಯುವೆಲರಿ ಶಾಪ್ ಮಾಲೀಕನಿಗೆ ವಂಚನೆ ಆರೋಪ: ಶ್ವೇತಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್

ಬೆಂಗಳೂರು, ಡಿ.29– ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಹೆಸರನ್ನು ಬಳಸಿಕೊಂಡು ಜ್ಯುವೆಲ್ಲರಿ ಮಾಲೀಕರೊಬ್ಬರಿಗೆ ರೂ. 2.4 ಕೋಟಿ ವಂಚಿಸಿದ ಆರೋಪದ ಮೇಲೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸರು ಬಂಧಿಸಿರುವ ಶ್ವೇತಾ ಗೌಡ ವಿರುದ್ಧ ಎರಡನೇ ಎಫ್‌ಐಆರ್ ದಾಖಲಾಗಿದೆ.

ಈ ನಡುವೆ ಶಿವಮೊಗ್ಗದ ಮತ್ತೊಬ್ಬ ಜ್ಯುವೆಲ್ಲರಿ ಮಾಲೀಕ ಪೊಲೀಸರಿಗೆ ದೂರು ನೀಡಿದ್ದು, ಆಕೆ ರೂ. 20 ಲಕ್ಷ ವಂಚಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಶಿವಮೊಗ್ಗದ ಸಾಗರದ ಪ್ರಗತಿ ಜ್ಯುವೆಲ್ಲರಿ ಅಂಗಡಿಯ ಮಾಲೀಕ ಆರ್. ಬಾಲರಾಜ್ ಸೇಠ್ ದಾಖಲಿಸಿರುವ ಎಫ್‌ಐಆರ್ ನಲ್ಲಿ ಶ್ವೇತಾ ಅವರನ್ನು ನಗರದ ಇನ್ನೊಬ್ಬ ಆಭರಣ ಅಂಗಡಿ ಮಾಲೀಕ ಸಂಜಯ್ ಎಂಬುವರು ತನಗೆ ಪರಿಚಯಿಸಿದ್ದಾಗಿ ತಿಳಿಸಿದ್ದಾರೆ.

ಡಿ.11 ರಂದು ನಗರದಲ್ಲಿ ಕೆಫೆ ಶಾಪ್‌ನಲ್ಲಿ ಭೇಟಿಯಾದ ತನ್ನ ಸಹೋದರನಿಂದ ರೂ. 20 ಲಕ್ಷಕ್ಕೂ ಹೆಚ್ಚು ಮೌಲ್ಯದ 250 ಗ್ರಾಂ ತೂಕದ ಆಂಟಿಕ್ ಆಭರಣಗಳನ್ನು ಶ್ವೇತಾ ಅವರು ಪಡೆದಿದ್ದಾರೆ. ರೂ. 5 ಲಕ್ಷದ ಎರಡು ಚೆಕ್ ಹಾಗೂ ರೂ. 6 ಲಕ್ಷ ಮೊತ್ತದ ಮತ್ತೊಂದು ಚೆಕ್‌ನ್ನು ಆಕೆ ನೀಡಿದ್ದು, ಉಳಿದ ರೂ. 4.75 ಲಕ್ಷ ಹಣವನ್ನು ಆರ್‌ಟಿಜಿಎಸ್ ಮೂಲಕ ಕಳುಹಿಸುವುದಾಗಿ ಹೇಳಿದ್ದಾರೆ. ಆದರೆ, ಹಣವನ್ನೂ ಆಕೆ ಕಳುಹಿಸಿಲ್ಲ. ಮೂರು ಚೆಕ್‌ಗಳು ಅಮಾನ್ಯವಾಗಿವೆ.

ತದನಂತರ ಆಕೆಯನ್ನು ಪ್ರಶ್ನಿಸಿದಾಗ ಬ್ಯಾಂಕ್‌ನಲ್ಲಿ ಸಮಸ್ಯೆಯಿರುವುದಾಗಿ ಹೇಳಿದ್ದರು. ತದನಂತರ ಡಿ.14 ರಂದು ಆಕೆಗೆ ಕರೆ ಮಾಡಿದಾಗ ಫೋನ್ ಸ್ವಿಚ್ ಆಫ್ ಆಗಿತ್ತು ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಇಂಧನದ ಮೇಲಿನ ಅಬಕಾರಿ ಸುಂಕ ಇಳಿಸಿ: ಕೇಂದ್ರಕ್ಕೆ ಕೈಗಾರಿಕಾ ಒಕ್ಕೂಟ ಒತ್ತಾಯ

ನವದೆಹಲಿ, ಡಿ.29–ಪ್ರಸ್ತುತ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಶೇ 20ರಷ್ಟು ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಇದನ್ನು ಕಡಿಮೆ ಮಾಡಲು 2025–26ನೇ ಸಾಲಿನ ಬಜೆಟ್‌ನಲ್ಲಿ ಕ್ರಮಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರಕ್ಕೆ ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಒತ್ತಾಯಿಸಿದೆ.

ಇಂಧನ ಬೆಲೆ ಹೆಚ್ಚಳವು ಹಣದುಬ್ಬರದ ಏರಿಕೆಗೆ ಕಾರಣವಾಗಲಿದೆ. ಕಡಿಮೆ ಅಬಕಾರಿ ಸುಂಕ ವಿಧಿಸಿದರೆ ಹಣದುಬ್ಬರವು ನಿಯಂತ್ರಣಕ್ಕೆ ಬರಲಿದೆ. ಇದರಿಂದ ಜನರ ಆದಾಯವೂ ಹೆಚ್ಚಾಗಲಿದೆ ಎಂದು ಹೇಳಿದೆ.

ಚಿಲ್ಲರೆ ಮಾರಾಟದ ಪೆಟ್ರೋಲ್ ಮೇಲೆ ಶೇ 21ರಷ್ಟು ಹಾಗೂ ಡೀಸೆಲ್ ಮೇಲೆ ಶೇ 18ರಷ್ಟು ಕೇಂದ್ರ ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ 40ರಷ್ಟು ಇಳಿಕೆಯಾಗಿದೆ. ಆದರೂ, 2022ರ ಮೇ ತಿಂಗಳಿನಿಂದ ಇಂಧನ ಬೆಲೆಯನ್ನು ಇಳಿಕೆ ಮಾಡಿಲ್ಲ ಎಂದು ಹೇಳಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಪಿಎಂ ಕಿಸಾನ್ ಹಾಗೂ ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಹೆಚ್ಚಿನ ಅನುದಾನವನ್ನು ಮೀಸಲಿಡಬೇಕು ಎಂದು ಒತ್ತಾಯಿಸಿದೆ.

2017ರಲ್ಲಿ ಪರಿಣತರ ಸಮಿತಿಯು ಕನಿಷ್ಠ ಕೂಲಿಯನ್ನು ರೂ.267ರಿಂದ 375ಕ್ಕೆ ಹೆಚ್ಚಿಸುವಂತೆ ಶಿಫಾರಸು ಮಾಡಿದೆ. ಕೂಲಿ ದರ ಹೆಚ್ಚಿಸಲು ಯೋಜನೆಗೆ ಹೆಚ್ಚುವರಿಯಾಗಿ ರೂ.42 ಸಾವಿರ ಕೋಟಿ ಮೀಸಲಿಡಬೇಕು ಎಂದು ಮನವಿ ಮಾಡಿದೆ.

ಪಿಎಂ ಕಿಸಾನ್ ಯೋಜನೆಯಡಿ ರೈತರಿಗೆ ವಾರ್ಷಿಕ 6 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಇದನ್ನು 8 ಸಾವಿರಕ್ಕೆ ಹೆಚ್ಚಿಸಬೇಕು. ಇದಕ್ಕಾಗಿ ಹೆಚ್ಚುವರಿಯಾಗಿ 20 ಸಾವಿರ ಕೋಟಿ ಮೀಸಲಿಡಬೇಕು ಎಂದು ಕೋರಿದೆ.


ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಡಿ ಅಮೌಖಿಕ ಮೌಲ್ಯಮಾಪನ (ಫೇಸ್‌ಲೆಸ್ ಅಸೆಸ್‌ಮೆಂಟ್) ವ್ಯವಸ್ಥೆಯನ್ನು ಪರಿಚಯಿಸಬೇಕು ಎಂದು ಒತ್ತಾಯಿಸಿದೆ.

ಸರಕು ಮತ್ತು ಸೇವೆಯ ಬಳಕೆ ವೆಚ್ಚವು ಆರ್ಥಿಕ ಬೆಳವಣಿಗೆಗೆ ನಿರ್ಣಾಯಕವಾಗಿದೆ ಆದರೆ, ಹೆಚ್ಚುತ್ತಿರುವ ಹಣದುಬ್ಬರವು ಗ್ರಾಹಕರ ಖರೀದಿಸುವ ಸಾಮರ್ಥ್ಯವನ್ನು ಕುಗ್ಗಿಸಿದೆ. ಸರ್ಕಾರವು ಮಧ್ಯಪ್ರವೇಶಿಸುವ ಮೂಲಕ ಜನರ ಆದಾಯ ಹೆಚ್ಚಳಕ್ಕೆ ಪೂರಕ ಕ್ರಮಕೈಗೊಳ್ಳಬೇಕು. ಆ ಮೂಲಕ ಸುಸ್ಥಿರ ಆರ್ಥಿಕ ಬೆಳವಣಿಗೆಗೆ ಒತ್ತು ನೀಡಬೇಕು ಎಂದು ಸಿಐಐ ಮಹಾ ನಿರ್ದೇಶಕ ಚಂದ್ರಜಿತ್ ಬ್ಯಾನರ್ಜಿ ತಿಳಿಸಿದ್ದಾರೆ.

ಕ್ರೀಡೆಗೆ ರಾಜಕಾರಣಿಗಳು ಅಪಾಯಕಾರಿ, ಕ್ರಿಕೆಟ್ ಆಟವನ್ನು ರಾಜಕಾರಣಿಗಳಿಂದ ದೂರವಿಡಿ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆ

ಬೆಂಗಳೂರು, ಡಿ.29– ಕ್ರಿಕೆಟ್ ಆಟವನ್ನು ರಾಜಕಾರಣಿಗಳಿಂದ ದೂರ ವಿಡಬೇಕು. ಈ ಕ್ರೀಡೆಯನ್ನು ಆಟಗಾರರೇ ಮುನ್ನಡೆಸಿಕೊಂಡು ಹೋಗಬೇಕು ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಅಭಿಪ್ರಾಯಪಟ್ಟರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ ತಂಡದ ಮಾಜಿ ಆಟಗಾರ ಸಯ್ಯದ್ ಕಿರ್ಮಾನಿ ಅವರ 75ನೇ ಜನ್ಮದಿನದ ಹಿನ್ನೆಲೆಯಲ್ಲಿ ಅವರ ಆತ್ಮಚರಿತ್ರೆ 'ಸ್ಟಂಪಡ್–ಲೈಫ್ ಬಿಯಾಂಡ್ ಅಂಡ್ ಬಿಯಾಂಡ್ ದಿ ಟ್ವೆಂಟಿ ಟು ಯಾರ್ಡ್ಸ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಕ್ರೀಡೆಗೆ ರಾಜಕಾರಣಿಗಳು ಅಪಾಯಕಾರಿ, ಹೀಗಾಗಿ ಕ್ರೀಡಾ ಚಟುವಟಿಕೆ ಗಳಿಂದ ಅವರನ್ನು ದೂರ ಇಡಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ನಾನೊಬ್ಬ ರಾಜಕಾರಣಿ, ಆದರೂ ಕಿರ್ಮಾನಿ ಅವರು ಈ ಕಾರ್ಯಕ್ರಮಕ್ಕೆ ನನಗೆ ಏಕೆ ಆಹ್ವಾನ ನೀಡಿದರೋ ಗೊತ್ತಿಲ್ಲ ಎಂದರು.

ಕಿರ್ಮಾನಿ ಹೃದಯವಂತ: ಕ್ರೀಡೆ ಪ್ರತಿಭೆ ನಿಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ. ಆ ಉನ್ನತ ಸ್ಥಾನವನ್ನು ಉಳಿಸಿಕೊಳ್ಳಲು ಒಳ್ಳೆಯ ಗುಣ ಕಲಿಸಲು ಸಹಾಯ ಮಾಡುತ್ತದೆ. ಕಿರ್ಮಾನಿ ಅವರು ಈ ಎರಡೂ ಗುಣಗಳನ್ನು ಹೊಂದಿದ್ದಾರೆ ಎಂದು ಶ್ಲಾಘಿಸಿದರು.

ಕಿರ್ಮಾನಿ ಅವರು ಕೇವಲ ಕ್ರಿಕೆಟ್ ಪ್ರತಿಭೆಯಷ್ಟೇ ಅಲ್ಲ, ಅತ್ಯುತ್ತಮ ವ್ಯಕ್ತಿತ್ವ ಇರುವವರು. ಕರ್ನಾಟಕ ಪ್ರತಿನಿಧಿಸುವ ಆಟಗಾರನಾಗಿ ಭಾರತೀಯ ಕ್ರಿಕೆಟ್ ಜಗತ್ತಿಗೆ ದೊಡ್ಡ ಕೊಡುಗೆ ನೀಡಿದವರು. ಶುದ್ಧ ಹೃದಯ ವಿಶ್ವದ ಶ್ರೇಷ್ಠ ದೇವಾಲಯ ಎಂದು ಹೇಳುತ್ತಾರೆ. ಕಿರ್ಮಾನಿ ಅವರು ಇಂತಹ ಶುದ್ಧ ಹೃದಯ ಹಾಗೂ ಮುಗುಳ್ನಗೆ ಹೊಂದಿರುವ ಹೃದಯವಂತ. ಇಂತವರು ಜಗತ್ತಿನಲ್ಲಿ ಬಹಳ ಅಪರೂಪ ಎಂದು ಗುಣಗಾನ ಮಾಡಿದರು.

ನಾನಿಲ್ಲಿ ಡಿಸಿಎಂ ಆಗಿ ಬಂದಿಲ್ಲ ಕಿರ್ಮಾನಿ ಅವರ ಅಭಿಮಾನಿಯಾಗಿ ಬಂದಿದ್ದೇನೆ. ನಾನು ಶಾಲೆಯಲ್ಲಿದ್ದಾಗ, ಚಂದ್ರಶೇಖರ್, ಜಿ.ಆರ್.ವಿಶ್ವನಾಥ್ ಹಾಗೂ ಕಿರ್ಮಾನಿ ಅವರ ಅಭಿಮಾನಿಯಾಗಿದ್ದೆ. ನೀವೆಲ್ಲರೂ ಸೇರಿ ನಮ್ಮ ರಾಜ್ಯ ಹಾಗೂ ದೇಶ ಹೆಮ್ಮೆಪಡುವಂತೆ ಸಾಧನೆ ಮಾಡಿದ್ದೀರಿ. ಇವರ ಜತೆಗೆ ಚಂದ್ರಶೇಖರ್, ಬ್ರಿಜೇಶ್ ಪಟೇಲ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್ ಸೇರಿದಂತೆ ಅನೇಕರು ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಆಗಿನ ಕಾಲದ ಆಟಗಾರರು ಈಗಿನ ಕಾಲದಂತೆ ಅತ್ಯುತ್ತಮ ತರಬೇತಿ ಕೇಂದ್ರಗಳನ್ನು ಹೊಂದಿರಲಿಲ್ಲ. ಆದರೂ ದೊಡ್ಡ ಮಟ್ಟಕ್ಕೆ ಬೆಳೆದು ದೇಶಕ್ಕೆ ಕೊಡುಗೆ ನೀಡಿದ್ದಾರೆ. ಪ್ರತಿಭೆ ಇದ್ದರೆ ಉನ್ನತ ಸ್ಥಾನಕ್ಕೆ ಏರುತ್ತೇವೆ. ಆದರೆ ಆ ಸ್ಥಾನವನ್ನ ಕಾಯ್ದುಕೊಳ್ಳಬೇಕಾದರೆ ವ್ಯಕ್ತಿತ್ವ ಬಹಳ ಮುಖ್ಯ. ಇದಕ್ಕೆ ಕಿರ್ಮಾನಿ ಉತ್ತಮ ಉದಾಹರಣೆ. ಇಲ್ಲಿರುವ ಆಟಗಾರರೆಲ್ಲರೂ ಉತ್ತಮ ಬಾಂಧವ್ಯ ಹೊಂದಿದ್ದೀರಿ.

ಕಪಿಲ್‌ದೇವ್ ಅವರು ಹೇಳಿದಂತೆ, ಅನುಭವದ ಮುಂದೆ ಬೇರೇನೂ ಇಲ್ಲ. ಅನುಭವ ವ್ಯಕ್ತಿಯನ್ನು ಪಕ್ವವಾಗಿಸುತ್ತದೆ. ನಿಮ್ಮ ನಡುವಣ ಬಾಂಧವ್ಯ ನೀರಿನಂತೆ. ಅದಕ್ಕೆ ಬಣ್ಣ, ರುಚಿ ಇಲ್ಲ. ಆದರೂ ಅದು ಬಹಳ ಮುಖ್ಯ. ನೀವು ಯಾವುದೇ ತಲೆಮಾರಿನವರಾಗಿರಿ, ಯಾವುದೇ ವಯೋಮಾನದವರಾಗಿರಿ, ಈ ಕ್ಷೇತ್ರದಲ್ಲಿ ನಿಮ್ಮ ಕೊಡುಗೆ ಹಾಗೂ ನೆನಪು ನಮಗೆ ಮಾದರಿಯಾಗಿದೆ ಎಂದರು.